
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜನವರಿ 14, 2009 ರೂ. 12/-






ರೆಡ್ಡಿ ಬ್ರದರ್ಸ್ ಮಾರಾಮಾರಿ

ಸಿದ್ದು ಹೊಸ ಪಕ್ಷ




ರೈತದ್ರೋಹಿ ಬಸವರಾಜ ತಂಬಾಕೆ



ಡ್ರ್ಯಾಗ್ ರೇಸ್ ಹುಚ್ಚು





ಮೈಸೂರು ಭೂಬಕಾಸುರರು



ಗುಬ್ಬಚ್ಚಿಯ ಮೇಲೆ ರಣಹದ್ದಿನ ಯುದ್ಧ!

ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ



ಮಧ್ಯಪ್ರಾಚ್ಯದಲ್ಲಿ ಪ್ಯಾಲಿಸ್ಟೇನ್ ಎಂಬ ಗುಬ್ಬಚ್ಚಿಯನ್ನು ಇಸ್ರೇಲ್ ಎಂಬ ರಣಹದ್ದು ಮತ್ತೊಮ್ಮೆ ಕುಕ್ಕಿ ಕುಕ್ಕಿ ತಿನ್ನಲಾರಂಭಿಸಿದೆ. ಆಪರೇಷನ್ "Cast Lead" ಹೆಸರಿನಲ್ಲಿ ಪ್ಯಾಲಿಸ್ಟೇನಿಯನ್ನರ ಮಾರಣಹೋಮಕ್ಕಿಳಿದಿರುವ ಇಸ್ರೇಲ್ ಪ್ಯಾಲಿಸ್ಟೇನಿಯನ್ನರೇ ಪ್ರಧಾನವಾಗಿರುವ ಗಾಜಾ ಪಟ್ಟಿಯ ಮೇಲೆ ಮತ್ತೊಂದು ಪೂರ್ಣ ಪ್ರಮಾಣದ ಯುದ್ಧವನ್ನು ಸಾರಿದೆ. ಇಸ್ರೇಲ್‌ನ ಯುದ್ಧ ವಿಮಾನಗಳು ಗಾಜಾ ಪಟ್ಟಿಯ ಮೇಲೆ ಬಾಂಬಿನ ಸುರಿಮಳೆಗೈಯುತ್ತಾ ಅಮಾಯಕ ಪ್ಯಾಲಿಸ್ಟೇನಿಯನ್ನರನ್ನು ಸುಟ್ಟುಹಾಕುತ್ತಿವೆ; ಗಾಜಾ ಪಟ್ಟಿಯ ಉತ್ತರ ಭಾಗದಲ್ಲಿ ಪ್ಯಾಲಿಸ್ಟೇನಿಯನ್ನರ ಆತ್ಮವಿಶ್ವಾಸದಂತಿರುವ ಹಮ್ಮಾಸ್ ಸಂಘಟನೆಯ ನಾಯಕ ನಿಜಾರ್ ರಾಯನ್‌ರ ಇಡೀ ಕುಟುಂಬ ಇಸ್ರೇಲ್ ಬಾಂಬ್ ದಾಳಿಯಲ್ಲಿ ಸುಟ್ಟು ಕರಕಲಾಗಿದೆ. ಪ್ಯಾಲಿಸ್ಟೇನಿಯನ್ನರ ಏಳು ನೂರು ಪ್ರದೇಶಗಳು ಬಾಂಬ್ ದಾಳಿಗೆ ತುತ್ತಾಗಿವೆ. ಕಳೆದ ಒಂದು ವಾರದಿಂದ ನಡೆಯುತ್ತಿರುವ ಈ ಕ್ರೂರ ಹತ್ಯಾಕಾಂಡದಲ್ಲಿ ಏನಿಲ್ಲವೆಂದರೂ ಎಂಟು ನೂರು ಜನ ಪ್ಯಾಲಿಸ್ಟೇನಿಯನ್ನರು ಸತ್ತಿದ್ದಾರಲ್ಲದೇ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಜನ ತಮ್ಮ ಕೈಕಾಲು ಕಳೆದುಕೊಂಡು ಅಂಗವಿಕಲರಾಗಿದ್ದಾರೆ.

ತಾಯ್ನಾಡಿನ ಉಳಿವಿಗಾಗಿ ಪ್ಯಾಲಿಸ್ಟೇನಿಯನ್ನರೂ ನೂರಾರು ಕ್ಷಿಪಣೆಗಳನ್ನು ಹಾರಿಸಿ ಇಸ್ರೇಲ್ ದಾಳಿಕೋರರಿಗೆ ಬಿಸಿ ಮುಟ್ಟಿಸುತ್ತಿದ್ದಾರೆ. ಇನ್ನೊಂದೆಡೆ ತಮ್ಮ ಮತ್ತೊಂದು ಪ್ರಮುಖ ನೆಲೆಯಾದ ವೆಸ್ಟ್ ಬ್ಯಾಂಕ್‌ನಲ್ಲಿ ಸುಮಾರು ಐದು ಸಾವಿರ ಪ್ಯಾಲಿಸ್ಟೇನಿಯನ್ನರು ಬೀದಿಗಿಳಿದು ಇಸ್ರೇಲ್ ಹತ್ಯಾಕಾಂಡಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಹೀಗೆ ಮಧ್ಯಪ್ರಾಚ್ಯದಲ್ಲಿ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣಗಳನ್ನು ಪಣಕ್ಕಿಟ್ಟು ಹೋರಾಡುತ್ತಿರುವ ಸ್ವಾಭಿಮಾನಿ ಪ್ಯಾಲಿಸ್ಟೇನಿಯನ್ನರು ಹಾಗೂ ಅವ್ಯಾಹತವಾಗಿ, ಅನ್ಯಾಯವಾಗಿ ಅವರ ಮೇಲೆ ಕ್ರೂರ ಹತ್ಯಾಕಾಂಡಗಳನ್ನು ಹರಿಬಿಟ್ಟಿರುವ ಇಸ್ರೇಲ್ ದಾಳಿಕೋರರ ನಡುವೆ ಪೂರ್ಣಪ್ರಮಾಣದ ಯುದ್ಧವೊಂದು ಪ್ರಾರಂಭವಾಗಿದೆ. ಇಂತಹ ಸಂದರ್ಭದಲ್ಲಿ ಇಡೀ ವಿಶ್ವದ ಶಾಂತಿಪ್ರಿಯ, ಸ್ವಾತಂತ್ರಪ್ರಿಯ, ಸ್ವಾಭಿಮಾನಿ ಜನತೆ ಇಸ್ರೇಲ್‌ನ ಈ ಅಮಾನವೀಯ ದಾಳಿಗಳನ್ನು ಒಕ್ಕೊರಲಿನಿಂದ ಖಂಡಿಸುತ್ತಿದ್ದರೆ ಕರ್ನಾಟಕದ ಮಹಾನ್ ಸಂಶೋಧಕ (!) ಚಿದಾನಂದ ಮೂರ್ತಿಯವರು ಭಾರತಕ್ಕೆ ಕ್ರೂರ ಕೊಲೆಗಡುಕ ಇಸ್ರೇಲ್ ಮಾದರಿಯಾಗಬೇಕು ಎಂದು ಕಂಡಕಂಡಲ್ಲಿ ಉಪದೇಶ ಮಾಡುತ್ತಿದ್ದಾರೆ.

ಅಸಲಿಗೆ ಇಸ್ರೇಲ್-ಪ್ಯಾಲಿಸ್ಟೇನಿಯರ ಸಂಘರ್ಷ ನಿನ್ನೆಮೊನ್ನೆ ಪ್ರಾರಂಭವಾಗಿದ್ದಲ್ಲ, ಇಸ್ರೇಲಿಗಳ ದಾಳಿಕೋರತನಕ್ಕೆ, ಅಂತೆಯೇ ಪ್ಯಾಲಿಸ್ಟೇನಿಯನ್ನರ ಸ್ವಾಭಿಮಾನಿ ರಾಜಿರಹಿತ ಹೋರಾಟಕ್ಕೆ ಸುದೀರ್ಘ ರಕ್ತಸಿಕ್ತ ಚರಿತ್ರೆಯಿದೆ. ಅರಬ್ಬರು ಮತ್ತು ಯಹೂದ್ಯರು ಕೂಡಿ ಬದುಕುತ್ತಿದ್ದ ಈ ಪ್ರದೇಶದಲ್ಲಿ ಅರಬ್ಬರಿಗಾಗಿ ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಪ್ಯಾಲಿಸ್ಟೇನ್ ರಾಷ್ಟ್ರ ಅಸ್ತಿತ್ವಕ್ಕೆ ಬರಬೇಕೆಂಬ ಬೇಡಿಕೆ ಕಳೆದ ಒಂದು ಶತಮಾನದಿಂದಲೂ ಇದೆ. ಬ್ರಿಟನ್‌ನ ಸಕ್ರಿಯ ಬೆಂಬಲದೊಂದಿಗೆ ಯಹೂದ್ಯರು 1948ರಲ್ಲಿ ಅರಬ್ಬರ ಮೇಲೆ ದೊಡ್ಡ ಪ್ರಮಾಣದಲ್ಲಿ ಯುದ್ಧ ಸಾರಿ, ಹೇಳತೀರದಷ್ಟು ಮಾರಣಹೋಮಗಳನ್ನು ನಡೆಸಿ ಅರಬ್ಬರು ವಾಸಿಸುವ ಎಲ್ಲಾ ಪ್ರದೇಶಗಳನ್ನೂ ಸೇರಿಸಿಕೊಂಡು ಇಸ್ರೇಲ್ ದೇಶವನ್ನು ರಚಿಸಿಕೊಂಡರು. ಸುಮಾರು 1,10,000 ಪ್ಯಾಲಿಸ್ಟೇನಿಯನ್ನರು ಇಸ್ರೇಲಿನಿಂದ ನಿರಾಶ್ರಿತರಾಗಿ ದಕ್ಷಿಣ ಲೆಬನಾನ್‌ಗೆ ತೆರಳಿದರು. ಹೀಗೆ ಇಸ್ರೇಲ್ ಹುಟ್ಟಿದ್ದೇ ಪ್ಯಾಲಿಸ್ಟೇನಿನ ಅರಬ್ಬರ ವ್ಯಾಪಕ ಹತ್ಯಾಕಾಂಡಗಳೊಂದಿಗೆ. ಅಲ್ಲಿಂದ ಪ್ರಾರಂಭವಾದ ರಕ್ತಸಿಕ್ತ ಅಧ್ಯಾಯ ಇಂದಿಗೂ ಮುಂದುವರೆದಿದೆ.

ಶಾಂತಿಮಾರ್ಗದಿಂದ ತಮ್ಮದೇ ಆದ ಸ್ವತಂತ್ರ ಪ್ಯಾಲಿಸ್ಟೇನ್ ದೇಶವನ್ನು ಕಟ್ಟಿಕೊಳ್ಳಬೇಕೆಂಬ ಪ್ಯಾಲಿಸ್ಟೇನಿಯನ್ನರ ಎಲ್ಲಾ ಪ್ರಯತ್ನಗಳಿಗೂ ಇಸ್ರೇಲ್ ಬಂದೂಕು-ಬಾಂಬುಗಳಿಂದ ಉತ್ತರಿಸುತ್ತಾ ಬಂದಿದೆ. ಎಷ್ಟೋ ಶಾಂತಿಮಾತುಕತೆಗಳು ನಡೆದಿವೆಯಾದರೂ ಯಾವುದೂ ಪ್ರಯೋಜನವಾಗಲಿಲ್ಲ. ಆಗ ಇಸ್ರೇಲಿ ಮಿಲಿಟರಿಯೊಂದಿಗೆ ಬೀದಿಯಲ್ಲಿ ಕಲ್ಲುಗಳನ್ನೆಸೆಯುತ್ತಾ ಕಾದಾಡುವುದು ಪ್ಯಾಲಿಸ್ಟೇನಿಯನ್ ಅರಬ್ಬರಿಗೆ ಅನಿವಾರ್ಯವಾಯಿತು. ಈ ಹೋರಾಟದ ಪ್ರಕ್ರಿಯೆಯಲ್ಲಿಯೇ 1964ರಲ್ಲಿ Palestine Liberation Organization (PLO) ಎಂಬ ಸಂಘಟನೆಯನ್ನು ಕಟ್ಟಿಕೊಂಡು ಅವರು ಇಸ್ರೇಲಿ ಪಡೆಗಳೊಂದಿಗೆ ಮತ್ತಷ್ಟು ಸಂಘಟಿತವಾಗಿ ಹೋರಾಡಲಾರಂಭಿಸಿದರು. 1982ರಲ್ಲಿ ಪಿಎಲ್‌ಓ ಮತ್ತು ಇಸ್ರೇಲಿ ಪಡೆಗಳ ನಡುವಿನ ಘರ್ಷಣೆ ತಾರಕಕ್ಕೇರಿ ದಕ್ಷಿಣ ಲೆಬನಾನ್‌ನಲ್ಲಿದ್ದ ಸುಮಾರು ಮೂರುವರೆ ಲಕ್ಷದಷ್ಟು ಪ್ಯಾಲಿಸ್ಟೇನಿಯನ್ನರ ಮೇಲೆ ಇಸ್ರೇಲ್ ದಾಳಿ ಮಾಡಿತು. ಇಸ್ರೇಲಿನ ದಾಳಿಕೋರರು ಸಬ್ರಾ ಮತ್ತು ಶಾತಿಲಾ ಹತ್ಯಾಕಾಂಡಗಳಲ್ಲಿ ಕನಿಷ್ಠ ಮೂರೂವರೆ ಸಾವಿರ ನಿರಾಯುಧ ಪ್ಯಾಲಿಸ್ಟೇನಿಯನ್ನರ ಮಾರಣಹೋಮ ನಡೆಸಿದರು.



1987ರಲ್ಲಿ ಇಸ್ರೇಲಿ ಪಡೆಗಳ ವಿರುದ್ಧ ಸ್ವಾತಂತ್ರ್ಯಾಕಾಂಕ್ಷಿ ಪ್ಯಾಲಿಸ್ಟೇನಿಯನ್ನರ ಮೊದಲ ಇಂತಿಫಾದ (ದಂಗೆ) ಸ್ಫೋಟಗೊಂಡಿತು. ಯುವಕರು, ಮಹಿಳೆಯರು, ಮಕ್ಕಳು, ವೃದ್ಧರೆನ್ನದೇ ಇಡೀ ಪ್ಯಾಲಿಸ್ಟೇನಿಯನ್ ಅರಬ್ಬರು ಇಸ್ರೇಲಿನ ಬಂದೂಕುಗಳಿಗೆ ಎದೆಯೊಡ್ಡಿ ಹೋರಾಡಿದರು. ಇಸ್ರೇಲ್ ಪಡೆಗಳು ಶಸ್ತ್ರಸಜ್ಜಿತರಾಗಿ ನಿರಾಯುಧ ಪ್ಯಾಲಿಸ್ಟೇನಿಯನ್ನರ ಮೇಲೆ ಗುಂಡಿನ ಮಳೆಗರೆಯುತ್ತಿದ್ದರೆ, ಪ್ಯಾಲಿಸ್ಟೇನಿಯನ್ನರು ಹಾದಿಬೀದಿಯಲ್ಲಿದ್ದ ಕಲ್ಲುಗಳನ್ನೆಸೆದು ಪ್ರತಿಭಟಿಸಿದರು. ಈ ಬೀದಿಕಾಳಗದಲ್ಲಿ ಎರಡು ಸಾವಿರದಷ್ಟು ಪ್ಯಾಲಿಸ್ಟೇನಿಯನ್ನರು ಮತ್ತು ಐನೂರರಷ್ಟು ಇಸ್ರೇಲಿಗಳು ಸತ್ತುಹೋದರು. ಪ್ಯಾಲಿಸ್ಟೇನಿಯನ್ನರ ಈ ವಿರೋಚಿತ ಹೋರಾಟದೊಂದಿಗೆಯೇ ಹಮಾಸ್ ಸಂಘಟನೆ ಅಸ್ತಿತ್ವಕ್ಕೆ ಬಂತು. ಪ್ಯಾಲಿಸ್ಟೇನಿಯನ್ನರ ವಿರುದ್ಧ ಮಿಲಿಟರಿ ದಾಳಿ ನಡೆಸುತ್ತಿರುವ ಇಸ್ರೇಲಿಗಳಿಗೆ ಮಿಲಿಟರಿ ದಾಳಿಯ ಮೂಲಕವೇ ಪ್ರತ್ಯುತ್ತರ ಕೊಡಬೇಕೆಂಬ ಉದ್ದೇಶದೊಂದಿಗೆ ಪ್ರಾರಂಭವಾದ ಈ ಸಂಘಟನೆ ಇಲ್ಲಿಯ ತನಕ ಇಸ್ರೇಲ್ ಮೇಲೆ ಅನೇಕ ಮಾರಣಾಂತಿಕ ದಾಳಿಗಳನ್ನು ನಡೆಸಿದೆ; ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಪ್ಯಾಲಿಸ್ಟೇನಿಯನ್ನರ ಸ್ವಾಭಿಮಾನದ ಪ್ರತೀಕವಾಗಿ ಹೊರಹೊಮ್ಮಿದೆ.

ಇಸ್ರೇಲ್‌ನ ಈ ಗೂಂಡಾಗಿರಿಗೆ ಇಂದು ಪ್ರಧಾನವಾಗಿ ಬೆಂಬಲಕ್ಕೆ ನಿಂತಿರುವ ದೇಶ ಅಮೆರಿಕ. ಎಷ್ಟರಮಟ್ಟಿಗೆ ಎಂದರೆ ಅಮೆರಿಕ ದಿನವೊಂದಕ್ಕೆ ಎಂಟು ಮಿಲಿಯನ್ ಡಾಲರ್‌ಗಳಷ್ಟು ದುಡ್ಡನ್ನು ಇಸ್ರೇಲ್‌ಗೆ ಕೊಡುತ್ತದೆ; ತನ್ನಲ್ಲಿರುವ ಎಲ್ಲಾ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು, ಯುದ್ಧ ವಿಮಾನಗಳನ್ನು, ದೈತ್ಯ ಯುದ್ಧ ಹಡಗುಗಳನ್ನು, ಕ್ಷಿಪಣಿಗಳನ್ನು ಧಾರೆ ಎರೆಯುತ್ತದೆ. ಇಸ್ರೇಲ್ ವಿರುದ್ಧ ವಿಶ್ವಸಂಸ್ಥೆಯಲ್ಲಿ ಇಲ್ಲಿಯ ತನಕ ಎಷ್ಟು ನಿರ್ಣಯಗಳು ಮಂಡಿತವಾಗಿವೆಯೋ ಅವೆಲ್ಲವಕ್ಕೂ ಅಮೆರಿಕ ವಿಟೋ ಹಕ್ಕನ್ನು ಚಲಾಯಿಸಿ ಇಸ್ರೇಲ್‌ಅನ್ನು ರಕ್ಷಿಸಿದೆ. ಇಲ್ಲಿಯತನಕ ಅಮೆರಿಕ ಇಷ್ಟೊಂದು ಪ್ರಮಾಣದಲ್ಲಿ ವಿಶ್ವದ ಯಾವುದೇ ದೇಶವನ್ನು ರಕ್ಷಿಸಿಕೊಂಡಿಲ್ಲ. ಜೊತೆಗೆ ಇಂಗ್ಲೆಂಡನ್ನೂ ಒಳಗೊಂಡಂತೆ ಇಡೀ ಐರೋಪ್ಯ ರಾಷ್ಟ್ರಗಳ ಒಕ್ಕೂಟವೂ ಈಗ ಇಸ್ರೇಲ್ ಬೆಂಬಲಕ್ಕೆ ನಿಂತಿದೆ.

ಪ್ಯಾಲಿಸ್ಟೇನಿಯನ್ನರೂ ಇಸ್ರೇಲಿನ ಗೂಂಡಾಗಿರಿಗೆ ತಲೆಬಾಗದೇ ವಿರೋಚಿತವಾಗಿ ಹೋರಾಡುತ್ತಿರುವುದು ಶ್ಲಾಘಿಸಲೇಬೇಕಾದ ವಿಚಾರ. ಅದರಲ್ಲೂ ಹಮ್ಮಾಸ್ ಸಂಘಟನೆ ಅಸ್ತಿತ್ವಕ್ಕೆ ಬಂದಮೇಲಂತೂ ಅವರಿಗೆ ಮತ್ತಷ್ಟು ಶಕ್ತಿ-ಸ್ಫೂರ್ತಿ ಬಂದಂತಾಗಿದೆ. ಇಸ್ರೇಲಿಗಳ ಮಿಲಿಟರಿ ದಾಳಿಗೆ ಪ್ರತ್ಯುತ್ತರವಾಗಿ ಹಮ್ಮಾಸ್ ಕೂಡ ಪ್ರತಿ ಮಿಲಿಟರಿ ದಾಳಿಗಳನ್ನು ನಡೆಸುತ್ತಿರುವುದು ಪ್ಯಾಲಿಸ್ಟೇನಿಯನ್ನರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ರೂಪು ಕೊಟ್ಟಿದೆ. ಎಲ್ಲಿಯ ತನಕ ಹಮ್ಮಾಸ್ ಅಸ್ತಿತ್ವದಲ್ಲಿರುತ್ತದೆಯೋ ಅಲ್ಲಿಯತನಕ ಇಸ್ರೇಲ್‌ಗೆ ಈ ಅನ್ಯಾಯದ ಯುದ್ಧದಲ್ಲಿ ಸಂಪೂರ್ಣ ವಿಜಯ ಸಿಗುವುದಿಲ್ಲವೆಂಬುದು ಅದಕ್ಕೂ ಗೊತ್ತಿದೆ. ಆದ್ದರಿಂದಲೇ ಅದು ಹಮ್ಮಾಸ್‌ನ ಪ್ರಮುಖ ನಾಯಕರನ್ನೇ ಟಾರ್ಗೆಟ್ ಮಾಡಿ ನಿರ್ಮೂಲಿಸುವ ಮೂಲಕ ಇಡೀ ಪ್ಯಾಲಿಸ್ಟೇನಿಯನ್ ಸ್ವಾತಂತ್ರ್ಯ ಹೋರಾಟವನ್ನು ಹೊಸಕಿ ಹಾಕಲು ಪ್ರಯತ್ನಿಸುತ್ತಿದೆ. ಹಮಾಸ್‌ನ ಸಂಸ್ಥಾಪಕ ನಾಯಕ ಶೇಕ್ ಅಹ್ಮದ್ ಯಾಸೀನ್ ಅವರನ್ನು 2004ರ ಮಾರ್ಚ್ 22ರಂದು ವೈಮಾನಿಕ ದಾಳಿ ನಡೆಸಿ ಕೊಂದು ಹಾಕಿತು. ಆನಂತರದಲ್ಲಿ ಸಂಘಟನೆಯ ನೇತೃತ್ವ ವಹಿಸಿಕೊಂಡ ಅಬ್ದೆಲ್ ಅಜೀಜ್ ರಂತಿಸಿ ಅವರನ್ನೂ ಏಪ್ರಿಲ್ 17, 2004ರಂದು ಇಸ್ರೇಲಿ ಪಡೆಗಳು ಕೊಂದು ಹಾಕಿದವು. ಈಗ ಹಮ್ಮಾಸ್‌ಅನ್ನು ಮುನ್ನಡೆಸುತ್ತಿದ್ದ ನಿಜಾರ್ ರಾಯನ್‌ರ ಇಡೀ ಕುಟುಂಬವನ್ನೇ ಇಸ್ರೇಲ್ ಸುಟ್ಟು ಹಾಕಿದೆ. ಇಷ್ಟೇ ಅಲ್ಲದೇ, ಇಸ್ರೇಲ್ ಪಡೆಗಳು ಹಮಾಸ್‌ನ ಇನ್ನೂ ಅನೇಕ ಉನ್ನತ ನಾಯಕರನ್ನು, ಕಾರ್ಯಕರ್ತರನ್ನು, ಪ್ಯಾಲಿಸ್ಟೇನಿಯನ್ ಹೋರಾಟಗಾರರನ್ನು, ನಾಗರಿಕರನ್ನು ಲೆಕ್ಕವಿಲ್ಲದಷ್ಟು ಪ್ರಮಾಣದಲ್ಲಿ ಕೊಂದುಹಾಕಿದೆಯಾದರೂ ಪ್ಯಾಲಿಸ್ಟೇನಿಯನ್ನರ ಸಶಸ್ತ್ರ ಹೋರಾಟವನ್ನು ಸಂಪೂರ್ಣವಾಗಿ ಬಗ್ಗುಬಡಿಯಲು ಅದಕ್ಕೆ ಸಾಧ್ಯವಾಗಿಲ್ಲ.

ಈಗಿನ ಇಸ್ರೇಲ್‌ನಲ್ಲಿ ಶೇ 50ರಷ್ಟು ಯಹೂದ್ಯರು ಅಲ್ಲಿನ ಮೂಲನಿವಾಸಿಗಳೇ ಎಂದು ಚಿದಾನಂದ ಮೂರ್ತಿಯಂಥ ಮತಾಂಧರು ವಾದಿಸುತ್ತಾರೆ. ಆದರೆ ಹಕೀಕತ್ತೇನೆಂದರೆ, ಇಸ್ರೇಲ್ ಎಂಬ ದೇಶ ಹುಟ್ಟಿಕೊಳ್ಳುವ ಮೊದಲು ಆ ಜಾಗದಲ್ಲಿ ಶೇ.96ರಷ್ಟು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರೇ ಇದ್ದರು. ಅವರನ್ನೆಲ್ಲ ತಮ್ಮ ಸ್ವಂತ ನೆಲದಿಂದ ಒದ್ದೋಡಿಸಿ ಆ ಜಾಗದಲ್ಲಿ ವಿಶ್ವದಾದ್ಯಂತ ಹರಡಿಕೊಂಡಿದ್ದ ಯಹೂದಿಗಳನ್ನು ಕರೆತಂದು ಕೂರಿಸಿರುವುದು ಹಾಗೂ ಇಂದಿಗೂ ತಮ್ಮ ತಾಯ್ನಾಡಿಗೆ ಬರುವುದಕ್ಕೆ ಪ್ಯಾಲಿಸ್ಟೇನಿಯನ್ ಅರಬ್ಬರಿಗೆ ಅವಕಾಶವಿಲ್ಲದಂತೆ ಮಾಡಿರುವುದು ಚಿದಾನಂದ ಮೂರ್ತಿ ತರಹದ ಮೂರ್ಖರನ್ನು ಬಿಟ್ಟು ಇಡೀ ಜಗತ್ತಿಗೆ ಗೊತ್ತಿರುವ ವಿಚಾರ.

ಎರಡನೆಯದಾಗಿ ವೆಸ್ಟ್ ಬ್ಯಾಂಕ್ ಮತ್ತು ಗಾಜಾ ಪಟ್ಟಿಯಲ್ಲಿ ಅರಬ್ಬರೇ ಪ್ರಧಾನವಾಗಿದ್ದರೂ ಇಸ್ರೇಲ್ ಅ[illegible] ಪ್ರದೇಶಗಳ ಮೇಲೆ ನಿರಂತರ ದಾಳಿ ನಡೆಸುತ್ತಾ ಅರಬ್ಬರ ಆಸ್ತಿಪಾಸ್ತಿಗಳನ್ನು ಧ್ವಂಸಗೊಳಿಸುತ್ತಾ ಅತ್ಯಮೂಲ್ಯ ಜೀವಗಳನ್ನು ನಿರಂತರವಾಗಿ ಬಲಿತೆಗೆದುಕೊಳ್ಳುತ್ತಿದ್ದರೂ ಅದು ಚಿದಾನಂದ ಮೂರ್ತಿಯಂಥವರಿಗೆ ಕಾಣಿಸುವುದಿಲ್ಲ. ಇಸ್ರೇಲಿ ದಾಳಿಕೋರರಿಂದ ತಮ್ಮ ತಾಯ್ನಾಡನ್ನು, ತಮ್ಮ ಆಸ್ತಿಪಾಸ್ತಿಗಳನ್ನು, ತಮ್ಮ ಅಮೂಲ್ಯ ಜೀವಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಶಸ್ತ್ರ ಹಿಡಿದು, ಗುಂಡಿಗೆ ಎದೆಯೊಡ್ಡಿ ವಿರೋಚಿತವಾಗಿ ಹೋರಾಡುತ್ತಿರುವ ಸ್ವಾಭಿಮಾನಿ ಪ್ಯಾಲಿಸ್ಟೇನಿಯನ್ನರು ಅವರಿಗೆ ಭಯೋತ್ಪಾದಕರಂತೆ ಕಾಣುತ್ತಾರೆ.

ಗುಜರಾತ್‌ನಲ್ಲಿ ಮುಸ್ಲಿಮರ ಅಮಾನವೀಯ ಹತ್ಯಾಕಾಂಡಗಳನ್ನು ನಡೆಸಿದ ಸಂಘ ಪರಿವಾರದ ತೆಕ್ಕೆಯಲ್ಲಿರುವ ಚಿಮೂ ಪ್ಯಾಲೆಸ್ಟೇನಿಯನ್ ಮುಸ್ಲಿಮರ ಹತ್ಯಾಕಾಂಡ ನಡೆಸುತ್ತಿರುವ ಇಸ್ರೇಲಿಗಳನ್ನು ಬೆಂಬಲಿಸುತ್ತಿರುವುದರಲ್ಲಿ ಆಶ್ಚರ್ಯವೂ ಇಲ್ಲ. ಇಸ್ರೇಲಿಗಳ ಜಿಯೋನಿಸಂ ಮತ್ತು ಸಂಘಪರಿವಾರದ ಹಿಂದೂತ್ವವಾದ ಎಂಬ ನಂಜುಕಾರಕ ಸಿದ್ಧಾಂತವನ್ನು ತಲೆಗಿಳಿಸಿಕೊಂಡ ವಿದ್ವಾಂಸರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?

ತನ್ನ ಸಾಪೇಕ್ಷತಾ ಸಿದ್ಧಾಂತದಿಂದ ಇಡೀ ಭೌತ ವಿಜ್ಞಾನವನ್ನೇ ಕ್ರಾಂತಿಕಾರಕಗೊಳಿಸಿ ವಿಜ್ಞಾನ ಲೋಕವನ್ನೇ ಅಲ್ಲಾಡಿಸಿದ ಮಹಾ ವಿಜ್ಞಾನಿ ಮತ್ತು ಮಹಾಮಾನವತಾವಾದಿ ಆಲ್ಬರ್ಟ್ ಐನ್‌ಸ್ಟೀನ್ ಖುದ್ದು ಯಹೂದ್ಯರಾಗಿದ್ದರೂ ಮಧ್ಯಪ್ರಾಚ್ಯದಲ್ಲಿ ಯಹೂದ್ಯರ ಇಸ್ರೇಲ್ ದೇಶ ಅಸ್ತಿತ್ವಕ್ಕೆ ಬಂದರೆ ಆಗಬಹುದಾದ ಅನಾಹುತಗಳನ್ನು ಮೊದಲೇ ನಿರೀಕ್ಷಿಸಿ ಆತಂಕಪಟ್ಟಿದ್ದರು. 1938ರ ಏಪ್ರಿಲ್ 17ರಂದು ನ್ಯೂಯಾರ್ಕ್ ಕಮ್ಮೋಡೋರ್ ಹೊಟೆಲ್‌ನಲ್ಲಿ ಭಾಷಣ ಮಾಡುತ್ತಾ ಅವರು ಹೀಗೆ ಹೇಳಿದ್ದರು: "I should much rather see reasonable agreement with the Arabs on the basis of living together in peace than the creation of a Jewish state..... I am afraid of the inner damage Judaism will sustain -- especially from the development of a narrow nationalism within our own ranks, against which we have already had to fight strongly, even without a Jewish state."

ಐನ್‌ಸ್ಟೀನ್ ಅವರ ಆತಂಕವೀಗ ನಿಜವಾಗಿದೆ. ಇಸ್ರೇಲ್ ಅಸ್ತಿತ್ವಕ್ಕೆ ಬರುವುದರೊಂದಿಗೆ ಮಧ್ಯಪ್ರಾಚ್ಯದಲ್ಲಿ ರಕ್ತಸಿಕ್ತ ಅಧ್ಯಾಯವೊಂದು ಪ್ರಾರಂಭವಾಗಿದೆ. ನಿರಂತರ ದಾಳಿಗಳಿಂದ ಪ್ಯಾಲಿಸ್ಟೇನ್ ಜರ್ಝರಿತವಾಗಿದೆ. ರಣರಂಗದಲ್ಲಿಯೇ ಹುಟ್ಟುತ್ತಿರುವ ಪ್ಯಾಲಿಸ್ಟೇನಿಯನ್ ಮಕ್ಕಳಿಗೆ ಯುದ್ಧವೆಂಬುದು ಮಾಮೂಲಿ ವಿಚಾರವಾಗಿಬಿಟ್ಟಿದೆ. ಇಸ್ರೇಲಿ ಪಡೆಗಳು ತಮ್ಮ ತಂದೆ-ತಾಯಿಗಳನ್ನು ಕೊಂದು ಹಾಕುತ್ತಿರುವುದನ್ನು, ತಮ್ಮ ಮನೆಮಠಗಳನ್ನು ಬುಲ್ಡೋಜರ್‌ನಿಂದ ನೆಲಸಮ ಮಾಡುತ್ತಿರುವುದನ್ನು, ಆಸ್ತಿಪಾಸ್ತಿಗಳಿಗೆ ಬೆಂಕಿ ಹಚ್ಚುತ್ತಿರುವು ದನ್ನು ಕಣ್ಣಾರೆ ನೋಡುತ್ತಿರುವ ಆ ಮಕ್ಕಳ ಮನಸ್ಸಿನಲ್ಲಿ ಸಹಜವಾಗಿ ಇಸ್ರೇಲ್ ವಿರುದ್ಧದ ದ್ವೇಷ ಹೆಪ್ಪುಗಟ್ಟುತ್ತಿದೆ. ಕೇವಲ ಮಿಲಿಟರಿ ಭಾಷೆಯನ್ನು ಮಾತ್ರ ಅರ್ಥಮಾಡಿ ಕೊಳ್ಳುವ ಅಮೆರಿಕ-ಇಸ್ರೇಲ್ ಕೂಟಕ್ಕೆ ಮಿಲಿಟರಿ ಮಾರ್ಗದಲ್ಲಿಯೇ ಉತ್ತರ ಕೊಡಲು ಅವರೆಲ್ಲ ಸಜ್ಜಾಗುತ್ತಾರೆ. ಭವಿಷ್ಯದ ಇಸ್ರೇಲ್-ಪ್ಯಾಲಿಸ್ಟೇನ್ ಯುದ್ಧಗಳು ಮತ್ತಷ್ಟು ಭೀಕರವಾಗಲಿವೆ. ಸ್ವತಂತ್ರ ಮತ್ತು ಸಾರ್ವಭೌಮ ಪ್ಯಾಲಿಸ್ಟೇನ್ ದೇಶ ಅಸ್ತಿತ್ವಕ್ಕೆ ಬರುವ ತನಕ ಈ ಯುದ್ಧಗಳಿಗೆ ಕೊನೆಯಿಲ್ಲ. ಏಕೆಂದರೆ, ಸ್ವಾತಂತ್ರ್ಯಾಕಾಂಕ್ಷೆಯನ್ನು ಬಂದೂಕು-ಬಾಂಬುಗಳಿಂದ ಬಹಳ ದಿನ ಅದುಮಿಡಲು ಸಾಧ್ಯವಿಲ್ಲ.



ರಂಜನೆ | ಬೋಧನೆ | ಪ್ರಚೋದನೆ
ಲಂಕೇಶ್

ಪ್ರಜಾಪ್ರಭುತ್ವದ ಉಸಿರುಗಟ್ಟಿಸುವ ಕಾಯ್ದೆಗಳು



ಕಂಡಹಾಗೆ

■ ಗೌರಿ ಲಂಕೇಶ್

ನಾನು ಕೋರ್ಟಿಗೆ ಹೋದಾಗಲೆಲ್ಲ ಅಲ್ಲಿಗೆ ಬರುವ ತರಹೇವಾರಿ ಜನರನ್ನು ಗಮನಿಸುತ್ತಾ ಕಾಲ ಕಳೆಯುತ್ತೇನೆ; ಹಲವೊಮ್ಮೆ ನನ್ನ ಕುತೂಹಲ ಕೆರಳಿಸಿದವರನ್ನು ಮಾತನಾಡಿಸುತ್ತೇನೆ. ಆಗ ವಿಚಿತ್ರ ರೀತಿಯ ಜಗಳ, ಸಮಸ್ಯೆ ಬದುಕುಗಳ ಕಿರುನೋಟ ನನಗೆ ದೊರಕುತ್ತದೆ.

ಇತ್ತೀಚೆಗೆ ಕೋರ್ಟ್ ಹಾಲ್ ಒಂದರಲ್ಲಿ ನನ್ನ ಪಕ್ಕ ಸುಮಾರು 50 ವರ್ಷ ವಯಸ್ಸಿನ ಮಹಿಳೆಯೊಬ್ಬರು ಕೂತಿದ್ದರು. ಅವರ ಮುಖವನ್ನು ಆತಂಕ, ಜಿಗುಪ್ಸೆ ತುಂಬಿತ್ತು. ಆಕೆಯೊಂದಿಗೆ ಮಾತನಾಡಿದಾಗ ಗೊತ್ತಾಗಿದ್ದು: ಅವರ ಮನೆಯನ್ನು ಅದ್ಯಾರಿಗೋ ಬಾಡಿಗೆ ಮೇಲೆ ಕೊಡಿದ್ದರಂತೆ. ಆದರೆ ಬಾಡಿಗೆದಾರ ಎಂತೆಂತಹದ್ದೋ ತಕರಾರುಗಳನ್ನು ಎತ್ತಿ ಇವರ ವಿರುದ್ಧ ನ್ಯಾಯಾಲಯದ ಮೆಟ್ಟಿಲನ್ನು ಹತ್ತಿದನಂತೆ. ಆ ವ್ಯಾಜ್ಯ ಐದಾರು ವರ್ಷ ನಡೆದು ಇನ್ನೇನು ತೀರ್ಪು ಬರಬೇಕು ಅನ್ನುವಾಗ ತಾನು ಬಾಡಿಗೆ ನೀಡುವುದಾಗಿ ಈ ಮಹಿಳೆಯ ಗಂಡನನ್ನು ಕರೆದನಂತೆ. ಆತನನ್ನು ಭೇಟಿಯಾಗಲು ಹೋದ ಗಂಡ ಎರಡು ದಿನವಾದರೂ ಮನೆಗೆ ಹಿಂದಿರುಗಲಿಲ್ಲ, ಬದಲಾಗಿ ಆತನ ಹೆಣ ಬೆಂಗಳೂರಿನ ಕೆರೆಯೊಂದರಲ್ಲಿ ಸಿಕ್ಕಿತು. ಬಾಡಿಗೆದಾರನೆ ಕೊಲೆ ಮಾಡಿಸಿದ್ದಾನೆಂದು ಈಕೆ ಪೊಲೀಸರಿಗೆ ದೂರು ನೀಡಿದರು. ಆದರೆ ಬಾಡಿಗೆದಾರ ನೊಂದಿಗೆ ಶಾಮೀಲಾದ ಪೊಲೀಸರು ಕೊಲೆಗಡುಕ ಸಿಕ್ಕಿಲ್ಲವೆಂದು ವರದಿ ಸಲ್ಲಿಸಿದರು. ಆಗ ಈ ಮಹಿಳೆ ಬಾಡಿಗೆದಾರ ಮತ್ತು ಪೊಲೀಸರ ವಿರುದ್ಧ ನ್ಯಾಯಾಲಯದ ಮೊರೆಹೋದರು.

ಇದೆಲ್ಲ ನಡೆದು ಬರೋಬ್ಬರಿ 16 ವರ್ಷಗಳಾಗಿವೆ. ಈ ಮಧ್ಯೆ ಈಕೆಯ ಮಕ್ಕಳು ಬೆಳೆದು ನಿಂತಿದ್ದಾರೆ. ಪೊಲೀಸ್ ಅಧಿಕಾರಿ ನಿವೃತ್ತಿ ಪಡೆದು ತನ್ನ ಮನೆ ಸೇರಿದ್ದಾನೆ. ಬಾಡಿಗೆದಾರ ಇನ್ನೂ ಅದೇ ಮನೆಯಲ್ಲಿ ವಾಸಿಸುತ್ತಿದ್ದಾನೆ. ಆದರೆ ಈ ಮಹಿಳೆಯ ಅರ್ಜಿ ಅಂದು ಎಲ್ಲಿತ್ತೋ ಇವತ್ತಿಗೂ ಅಲ್ಲೇ ಇದೆ. ಆಕೆಗೆ ಬಾಡಿಗೆಯೂ ಬಂದಿಲ್ಲ, ಆಸ್ತಿಯೂ ವಾಪಸ್ಸಾಗಿಲ್ಲ, ನ್ಯಾಯವಂತೂ ಸಿಕ್ಕಿಲ್ಲ. ಈ ವ್ಯಾಜ್ಯ ಮ್ಯಾಜಿಸ್ಟ್ರೇಟರ ನಂತರ ಹೈಕೋರ್ಟಿಗೆ ಹೋಗಿ ಅಂತ್ಯಗೊಳ್ಳುವುದು ಇನ್ನು ಎಷ್ಟು ವರ್ಷಕ್ಕೋ?

ಇನ್ನೊಂದು ವಿಚಿತ್ರ ಪ್ರಕರಣ. ಸುಮಾರು 45 ಪ್ರಾಯದ ಈಕೆ ರಾಜ್ಯ ಸರ್ಕಾರಿ ನೌಕರಿಯಲ್ಲಿದ್ದಾರೆ. ಈಕೆಯ ಗಂಡ ಕೇಂದ್ರ ಸರ್ಕಾರದ ಫ್ಯಾಕ್ಟರಿಯೊಂದರಲ್ಲಿ ಕೆಲಸಕ್ಕಿದ್ದಾನೆ. ಈಕೆ ಮದುವೆಯಾದ ಕೆಲ ವರ್ಷಗಳಲ್ಲೇ ಗಂಡ ಇನ್ನೊಬ್ಬಳನ್ನು ಮದುವೆಯಾದಾಗ ಈಕೆ ಆತನನ್ನು ತೊರೆದು ಏನಾಯಿತು ತನ್ನ ಪಾಡಾಯಿತು ಎಂದು ಏಕಾಂಗಿ ಜೀವನ ಸಾಗಿಸಲಾರಂಭಿಸಿದಳು. ಆದರೆ ಗಂಡನ ಕಾಟ ಮುಂದುವರೆಯಿತು. ಆತ ಸರ್ಕಾರಿ ನೌಕರನಾದ್ದರಿಂದ ತನ್ನ ಎರಡನೆ ಪತ್ನಿಯ ಬಗ್ಗೆ ದಾಖಲಿಸುವಂತಿಲ್ಲ, ಆದ್ದರಿಂದ ಎರಡನೆ ಪತ್ನಿಯೊಂದಿಗೆ ಮಕ್ಕಳಾದಾಗ ಆತ ಆಸ್ಪತ್ರೆಯಲ್ಲಿ ತಾಯಿಯ ಹೆಸರು ನಮೂದಿಸಬೇಕಿದ್ದ ಜಾಗದಲ್ಲಿ ತನ್ನ ಮೊದಲನೆ ಹೆಂಡತಿಯ ಹೆಸರನ್ನೇ ದಾಖಲಿಸಿದ್ದ. ಇದು ಮೊದಲನೆ ಪತ್ನಿಗೆ ಗೊತ್ತಾದಾಗ ಆಕೆ ಕೆಂಡಾಮಂಡಲ ವಾದಳು. ತನ್ನ ಬದುಕನ್ನು ಹಾಳು ಮಾಡಿ ಏಕಾಂಗಿಯಾಗಿ ಸದ್ದಿಲ್ಲದೆ ತನ್ನದಲ್ಲದ ಮಕ್ಕಳನ್ನು ತನ್ನ ತಲೆಗೆ ಕಟ್ಟುತ್ತಿರುವ; ನಾಳೆ ತನ್ನ ಚೂರುಪಾರು ಆಸ್ತಿಗೂ ಆತನ ಎರಡನೆ ಪತ್ನಿಯ ಮಕ್ಕಳು ತಾವೇ ವಾರಸುದಾರರು ಎಂದು ವಾದಿಸಿದರೆ ಏನು ಗತಿ ಎಂದು ಚಿಂತಿಸಿ ಗಂಡನ ವಿರುದ್ಧ ನ್ಯಾಯಾಲಯದ ಮೆಟ್ಟಿಲನ್ನು ಏರಿದಳು. ಆ ಮಕ್ಕಳು ತನ್ನ ಮಕ್ಕಳಲ್ಲ, ಅವರುಗಳ ತಾಯಿ ತಾನಲ್ಲ ಎಂಬ ತೀರ್ಪು ಕೋರಿದಳು.

ಆಕೆ ಇಂಥದ್ದೊಂದು ಅರ್ಜಿ ಸಲ್ಲಿಸಿ ಈಗ ಹನ್ನೊಂದು ವರ್ಷಗಳಾಗಿವೆ. ಆದರೆ ಅರ್ಜಿ ಮಾತ್ರ ಮುಂದಕ್ಕೆ ಹೋಗದೆ ಎಲ್ಲಿದೆಯೋ ಅಲ್ಲೇ ಇದೆ.



ಇದನ್ನೆಲ್ಲ ಹೇಳಿದ್ದಕ್ಕೆ ಕಾರಣವಿದೆ. ಇವತ್ತು ನಮ್ಮ ದೇಶದ 21 ಹೈಕೋರ್ಟ್‌ಗಳ ಮುಂದೆ ಮೂವತ್ತು ಲಕ್ಷಕ್ಕಿಂತಲೂ ಹೆಚ್ಚು ಕೇಸುಗಳಿವೆ. ಇನ್ನು ಇತರೆ ನ್ಯಾಯಾಲಯಗಳ ಮುಂದೆ ಸುಮಾರು ಮೂರು ಕೋಟಿ ಕೇಸುಗಳಿವೆ. ಅಷ್ಟೇ ಅಲ್ಲ, ದೇಶದಾದ್ಯಂತ ಕನಿಷ್ಠ ಮೂರು ಸಾವಿರ ಜಡ್ಜ್‌ಗಳ ಕೊರತೆ ಇದೆ. ಹೀಗಿರುವಾಗ ಈ ಲಕ್ಷಾಂತರ ಕೇಸುಗಳು ಇತ್ಯರ್ಥವಾಗುವುದೆಂದು? ಜನಸಾಮಾನ್ಯರಿಗೆ ನ್ಯಾಯ ಸಿಗುವುದೆಂದು?

******

ನಮ್ಮ ನ್ಯಾಯ ವ್ಯವಸ್ಥೆಯ ಒಂದು ಮಗ್ಗಲು ಇದಾದರೆ ಇನ್ನೊಂದು ಮಗ್ಗಲು ನಮ್ಮ ಜೈಲಲ್ಲಿರುವ ಎರಡೂವರೆ ಲಕ್ಷ ವಿಚಾರಣಾಧೀನ ಬಂಧಿಗಳು. ಅವರಲ್ಲಿ ಬಹಳಷ್ಟು ಜನ ಐದು ವರ್ಷಕ್ಕಿಂತಲೂ ಹೆಚ್ಚು ಕಾಲ ಜೈಲಿನಲ್ಲಿ ಕಳೆದಿದ್ದಾರೆ.

ಒಂದು ಅಂದಾಜಿನ ಪ್ರಕಾರ ಬಹಳಷ್ಟು ವಿಚಾರಣಾಧೀನ ಖೈದಿಗಳ ವಿರುದ್ಧದ ಕೇಸುಗಳು ಸಾಬೀತಾಗದೆ ಕೊನೆಗೆ ಅವರು ನಿರಪರಾಧಿಗಳು ಎಂದು ಬಿಡುಗಡೆ ಹೊಂದುತ್ತಾರೆ. ಆದರೆ ಅಷ್ಟರ ಹೊತ್ತಿಗೆ ಅವರ ಬದುಕಿನ ಹಲವಾರು ವರ್ಷಗಳು ಜೈಲಿನಲ್ಲೇ ಕಳೆದು ಹೋಗಿರುತ್ತದಲ್ಲದೆ, ಅವರು ಬಿಡುಗಡೆಗೊಂಡು ಹೊರಬರುವ ಹೊತ್ತಿಗೆ ಸಮಾಜದಲ್ಲಿನ ಅವರ ಮಾನ ಮತ್ತು ಬದುಕಿನ ಅವಕಾಶಗಳು ನಾಶವಾಗಿರುತ್ತವೆ. ಹಾಗೆಯೇ ಬಹಳಷ್ಟು ಪ್ರಕರಣಗಳಲ್ಲಿ ವಿಚಾರಣಾಧೀನ ಖೈದಿಯೇ ಆತನ ಸಂಸಾರದ ಆರ್ಥಿಕ ಸ್ತಂಭವಾಗಿರುವುದರಿಂದ ಆತ ಜೈಲಿನಲ್ಲಿರುವಾಗ ಆತನ ಸಂಸಾರವೇ ಛಿದ್ರಗೊಂಡಿರುತ್ತದೆ. ಇದೆಲ್ಲದರ ಅರ್ಥ ಕೊನೆಗೂ ವಿಚಾರಣಾಧೀನ ಖೈದಿಗೆ ನ್ಯಾಯ ಸಿಕ್ಕರೂ ಅನ್ಯಾಯವಾಗಿರುತ್ತದೆ.

******

ಇದೆಲ್ಲದರ ಹಿನ್ನೆಲೆಯಲ್ಲಿ ಮೊನ್ನೆ ಸಂಸತ್ತಿನಲ್ಲಿ ಅಂಗೀಕೃತಗೊಂಡ ಒಂದು ಮಸೂದೆ ಸ್ವಾಗತಾರ್ಹ. ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್‌ಗೆ ತಿದ್ದುಪಡಿ ತಂದ ಆ ಮಸೂದೆಯ ಪ್ರಕಾರ ಇನ್ನು ಮುಂದೆ ಕನಿಷ್ಠ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಲ್ಪಡುವ ಆರೋಪಗಳಲ್ಲಿ "ನಂಬಲರ್ಹವಾದ ಮಾಹಿತಿ" ಇದ್ದರೆ ಮಾತ್ರ ಅಂಥವರನ್ನು ಪೊಲೀಸರು ಬಂಧಿಸಬೇಕೆ ಹೊರತು ಚಿಕ್ಕಪುಟ್ಟ ಕಾರಣಕ್ಕೆ ಬಂಧಿಸುವಂತಿಲ್ಲ. ರಾಷ್ಟ್ರೀಯ ಪೊಲೀಸ್ ಕಮಿಷನ್ ಕೂಡ ಅನಗತ್ಯವಾಗಿ ಮತ್ತು ಅಸಮರ್ಥನೀಯವಾಗಿ ಶೇ. 60 ರಷ್ಟು ಬಂಧನಗಳು ಸಂಭವಿಸುತ್ತವೆ ಎಂದು ಒಪ್ಪಿಕೊಂಡಿರುವುದರಿಂದ ಈ ಹೊಸ ಮಸೂದೆಯು ಅಂತಹ ಅನ್ಯಾಯಯುತ ಬಂಧನಗಳನ್ನು ತಡೆಯುತ್ತದೆ ಎಂಬ ಆಶೆ ಇದೆ....

******

ಈ ಸ್ವಾಗತಾರ್ಹ ಮಸೂದೆಯೊಂದಿಗೆ ಸಂಸತ್ತು ಒಂದು ಅಸಮರ್ಥನೀಯ ಮಸೂದೆಯನ್ನೂ ಅಂಗೀಕರಿಸಿತು. ದೇಶದ ಮೇಲಿನ ಭಯೋತ್ಪಾದಕ ದಾಳಿಗಳನ್ನು ನಿಯಂತ್ರಿಸಲೆಂದು **Unlawful Activities Prevention (amendment) Bill** ಎಂಬ ಮಸೂದೆಯು ಬಹಳಷ್ಟು ಚರ್ಚೆ ನಡೆಯದೆ ಸರ್ವಾನುಮತದಿಂದ ಅಂಗೀಕೃತಗೊಂಡಿತು.

ಆದರೆ ಭಯೋತ್ಪಾದಕರ ದಾಳಿಯನ್ನು ಈ ಮಸೂದೆ ತಡೆಯುತ್ತದೆಯೇ? ಈ ಮಸೂದೆಯನ್ನು ಮಂಡಿಸುವಾಗಲೇ ದೇಶದ ಗೃಹ ಸಚಿವ ಚಿದಂಬರಂ ಈ ಪ್ರಶ್ನೆಗೆ ಉತ್ತರವನ್ನು ನೀಡಿದ್ದಾರೆ. ಅದರ ಪ್ರಕಾರವೇ ಈ ಮಸೂದೆ "ನಿಯಂತ್ರಕಾರಿ" ಆಗಿಲ್ಲ ಬದಲಾಗಿ "ಶಿಕ್ಷಾರೂಪದ್ದಾಗಿದೆ". ಹಾಗಾದರೆ ಇದನ್ನು ಎಲ್ಲಾ ರಾಜಕೀಯ ಪಕ್ಷಗಳು ಸ್ವಾಗತಿಸಿದ್ದು ಯಾಕೆ? ಉತ್ತರ ಸುಲಭ: ಬರಲಿರುವ ಸಂಸತ್ ಚುನಾವಣೆಗಳು! ಎಲ್ಲ ಪಕ್ಷಗಳಿಗೂ ಈಗ ತಾವು ಭಯೋತ್ಪಾದನೆಯನ್ನು ಉಗ್ರವಾಗಿ ವಿರೋಧಿಸುತ್ತೇವೆ ಎಂದು ಪೋಸ್ ಕೊಡುವ ಅಗತ್ಯವಿರುವುದರಿಂದ ಈ ಕಾನೂನನ್ನು ಜಾರಿಗೆ ತರಲಾಗಿದೆ.

ಈ ಕಾನೂನು ಎಷ್ಟು ಕರಾಳವಾಗಿದೆ ಎಂದರೆ ಇದು **POTA** ಅನ್ನೂ ಮೀರಿಸುತ್ತದೆ. ಯಾಕೆಂದರೆ ಈ ಕಾನೂನಿನಡಿ ಯಾವುದೇ ಪೊಲೀಸ್ ಅಧಿಕಾರಿ ಗಾಳಿಸುದ್ದಿಯನ್ನು, ಆಧಾರರಹಿತ ಮಾಹಿತಿಯನ್ನು ಆಧರಿಸಿ "ನಾನು ವೈಯಕ್ತಿಕವಾಗಿ ನಂಬಿರುವೆ" ಎಂದು ಆರೋಪಿಸಿ ಸಣ್ಣಪುಟ್ಟ ವಿಷಯಕ್ಕೆ ಯಾರನ್ನು ಬೇಕಾದರೂ ಬಂಧಿಸಬಹುದಲ್ಲದೆ ಆತನನ್ನು ಪೊಲೀಸರ ವಶದಲ್ಲಿ 180 ದಿನಗಳ ಕಾಲ ಯಾವುದೇ ಚಾರ್ಜ್ ಶೀಟ್ ಸಲ್ಲಿಸದೆಯೂ ಇಟ್ಟುಕೊಳ್ಳಬಹುದಾಗಿದೆ. ಅಷ್ಟೇ ಅಲ್ಲ ತಾನು ನಿರಪರಾಧಿ ಎಂದು ಸಾಬೀತುಪಡಿಸುವ ಜವಾಬ್ದಾರಿಯನ್ನು ಬಂಧನಕ್ಕೊಳಗಾದ ವ್ಯಕ್ತಿಯ ಮೇಲೆಯೆ ಹೊರಿಸುತ್ತದೆ. **UAPA** ತಿದ್ದುಪಡಿ ಕಾಯ್ದೆಯೊಂದಿಗೆ **National Investigation Agency (NIA) Act** ಎಂಬುದೂ ಅಂಗೀಕೃತಗೊಂಡಿದ್ದು ಅದರಡಿಯೂ ಯಾರನ್ನು ಬೇಕಾದರೂ ಬಂಧಿಸಬಹುದಲ್ಲದೆ, ರಾಜಕೀಯ ಹಸ್ತಕ್ಷೇಪಕ್ಕೆ ಸಾಕಷ್ಟು ಅವಕಾಶಗಳನ್ನು ನೀಡಲಾಗಿದೆ.

ಈ ಎರಡೂ ಕಾನೂನುಗಳ ಮೂಲಕ ಭಯೋತ್ಪಾದಕ ದಾಳಿಗಳನ್ನು ನಿಯಂತ್ರಿಸಲಾಗುವುದಿಲ್ಲ. ಯಾಕೆಂದರೆ ಮುಂಬೈ ಮೇಲೆ ದಾಳಿ ಮಾಡಿದ ಕಸಬ್‌ನಂತಹ ಉಗ್ರರನ್ನು ಪೊಲೀಸರ ವಿಚಾರಣೆಯಾಗಲಿ, ಭಾರತೀಯ ನ್ಯಾಯಾಲಯ ವಿಧಿಸುವ ಗಲ್ಲು ಶಿಕ್ಷೆಯಾಗಲಿ, ಇಲ್ಲಿನ ಬಂಧಿಖಾನೆಗಳಲ್ಲಿನ ಬದುಕಾಗಲಿ ತಡೆಯುವುದಿಲ್ಲ. ಬದಲಾಗಿ ಈ ಕಾನೂನುಗಳನ್ನು ಉಪಯೋಗಿಸಿಕೊಂಡು ತಮ್ಮ ಟೀಕಾಕಾರರನ್ನು, ವಿರೋಧಿಗಳನ್ನು, ತಮಗಾಗದವರನ್ನು ಶಿಕ್ಷಿಸಲಾಗುತ್ತದೆ ಅಷ್ಟೆ.

ಉದಾಹರಣೆಗೆ **POTA** ಕಾಯಿದೆಯಡಿ ಮೊದಲು ಬಂಧಿತರಾಗಿದ್ದು ಯಾವ ಭಯೋತ್ಪಾದಕನೂ ಅಲ್ಲ, ಬದಲಾಗಿ ಅಂದಿನ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾರ ಟೀಕಾಕಾರ ವೈಕೋ, ಹಾಗೆಯೇ **POTA**ದಡಿ ಬಂಧಿಸಲ್ಪಟ್ಟಿದ್ದ ಶೇ. 98 ಜನ ನಿರಪರಾಧಿಗಳು ಎಂದು ನ್ಯಾಯಾಲಯಗಳೇ ತೀರ್ಪು ನೀಡಿ ಅವರನ್ನೆಲ್ಲ ಬಂಧನ ಮುಕ್ತಗೊಳಿಸಿವೆ.

ಇದೆಲ್ಲದರಿಂದಾಗಿ **UAPA** ಕೂಡ **POTA** ರೀತಿಯಲ್ಲೇ ದುರ್ಬಳಕೆಯಾಗುತ್ತದೆ ಎಂಬುದು ಖಾತ್ರಿ ಮಾತ್ರವಲ್ಲ, ಭಾರತ ದೇಶ ಪ್ರಜಾಪ್ರಭುತ್ವ ವ್ಯವಸ್ಥೆಯ ಸೋಗಿನಡಿ ಪೊಲೀಸ್ ರಾಷ್ಟ್ರವಾಗುತ್ತಿರುವ ಸ್ಪಷ್ಟ ಸೂಚನೆಯಾಗಿದೆ.... ■

ಜನಪರ ಚಿಂತನೆಗಳ ಯಶಸ್ವಿ ಸಮಾವೇಶ

ಹಿಂದುತ್ವ ಮತ್ತು ಇಸ್ಲಾಮಿಕ್ ಭಯೋತ್ಪಾದನೆಗಳು ಇಡೀ ದೇಶದ ಶಾಂತಿಪ್ರಿಯ ಜನಸಮುದಾಯದ ನಿದ್ರೆಗೆಡಿಸುತ್ತಿರುವ ಈ ಹೊತ್ತಿನಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ಕಳೆದ ಡಿಸೆಂಬರ್ 28 ಮತ್ತು 29 ರಂದು ಚಿಕ್ಕಮಗಳೂರಿನಲ್ಲಿ "ಕೋಮುವಾದ ಮತ್ತು ಭಯೋತ್ಪಾದನೆಯ ವಿರುದ್ಧ ಭಾರತೀಯರು" ಎಂಬ ಪ್ರಧಾನ ಘೋಷಣೆಯಡಿಯಲ್ಲಿ ಹಮ್ಮಿಕೊಂಡಿದ್ದ ಸರ್ವಧರ್ಮ ಹಾಗೂ ಜನಪರ ಚಿಂತನೆಗಳ ಸಮಾವೇಶ ಯಶಸ್ವಿಯಾಗಿ ಮುಗಿದಿದೆ.

ಸೌಹಾರ್ದ ಕರ್ನಾಟಕವನ್ನು ರಕ್ತಸಿಕ್ತ ಗುಜರಾತನ್ನಾಗಿಯೂ, ಸಹಬಾಳ್ವೆಯ ಪ್ರತೀಕವಾಗಿರುವ ಬಾಬಾಬುಡನ್‌ಗಿರಿಯನ್ನು ಕೋಮುದಳ್ಳುರಿಯ ಅಯೋಧ್ಯೆಯನ್ನಾಗಿಯೂ ಪರಿವರ್ತಿಸಲು ಹೊರಟಿರುವ ಸಂಘಪರಿವಾರಕ್ಕೆ ಮುಖಾಮುಖಿಯಾಗಿ ಶಾಂತಿ, ಸಹಬಾಳ್ವೆ, ಸೌಹಾರ್ದತೆ, ಮಾನವಪ್ರೀತಿಗಳಂಥ ಉದಾತ್ತ ಮೌಲ್ಯಗಳ ಬುನಾದಿಯ ಮೇಲೆ ಸುಂದರ ಕರುನಾಡನ್ನು ಕಟ್ಟುವ ಆಶಯದೊಂದಿಗೆ ನಡೆದ ಈ ಸಮಾವೇಶದಲ್ಲಿ ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ ಧಾರ್ಮಿಕ ಮುಖಂಡರು, ಎಲ್ಲಾ ಜಾತಿಯ ಜನರು, ಪ್ರಗತಿಪರ ಚಿಂತಕರು, ಹೋರಾಟಗಾರರು ಭಾಗವಹಿಸಿದ್ದು ಅರ್ಥಪೂರ್ಣವಾಗಿತ್ತು.



ಸಮಾವೇಶವನ್ನು ಉದ್ಘಾಟನೆ ಮಾಡಿದ ಕೂಡಲಸಂಗಮ ಪಂಚಸಾಲಿ ಮಠದ ಜಯಮೃತ್ಯುಂಜಯ ಸ್ವಾಮೀಜಿಯವರು ಹಿಂದೂ-ಮುಸ್ಲೀಮ್ ಭಯೋತ್ಪಾದನೆಗಳನ್ನು ವಿರೋಧಿಸುತ್ತಾ ಕನ್ನಡ ನಾಡಿಗೆ ಸೂಫಿ ಮತ್ತು ದತ್ತ ಪಂಥಗಳ ಅವಶ್ಯಕತೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ಎರಡು ದಿನಗಳ ಈ ಮಹಾಸಮಾವೇಶದಲ್ಲಿ ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಎತ್ತಿಹಿಡಿಯುವ, ಸಂಘಪರಿವಾರದ ಸಂಕುಚಿತ ಮತೋನ್ಮಾದವನ್ನು ವಿರೋಧಿಸುವ, ಹಿಂದೂ-ಮುಸ್ಲಿಮ್ ಭಯೋತ್ಪಾದನೆಯ ವಿರುದ್ಧ ರಾಜಿರಹಿತವಾಗಿ ಹೋರಾಡುವ ಆಶಯಗಳನ್ನು ಬಿಂಬಿಸುವ ಗೀತೆಗಳು, ನೃತ್ಯಗಳು, ಕವಿಗೋಷ್ಠಿಗಳು ನಡೆದವು.




ಸಾಣೆಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಗಳನ್ನೂ ಒಳಗೊಂಡಂತೆ ಸಮಾವೇಶದಲ್ಲಿ ಭಾಗವಹಿಸಿದ್ದ ಧಾರ್ಮಿಕ ಮುಖಂಡರು ಕೋಮುವಾದ ಮತ್ತು ಭಯೋತ್ಪಾದನೆಯನ್ನು ವಿರೋಧಿಸಿದರಲ್ಲದೇ ಸೌಹಾರ್ದ ಕರ್ನಾಟಕದ ಪರಂಪರೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವುದಕ್ಕಾಗಿ ಹೋರಾಟ ನಡೆಸಬೇಕಾದ ಅಗತ್ಯವನ್ನು ಎತ್ತಿಹಿಡಿದರು.

ಕರ್ನಾಟಕದ ಮೂಲೆ ಮೂಲೆಗಳಿಂದ ಚಿಕ್ಕಮಗಳೂರಿಗೆ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ಪ್ರಗತಿಪರ ಚಿಂತಕರು, ಹೋರಾಟಗಾರರು, ಮಠಾಧೀಶರು, ಧರ್ಮಗುರುಗಳು ಕರ್ನಾಟಕವನ್ನು ಗುಜರಾತ್ ಆಗದಂತೆ, ಬಾಬಾಬುಡನ್‌ಗಿರಿ ಮತ್ತೊಂದು ಅಯೋಧ್ಯೆಯಾಗದಂತೆ ತಡೆಯುವ ಪ್ರತಿಜ್ಞೆ ಕೈಗೊಂಡರು.

ಕೋಮುವಾದ ಮತ್ತು ಭಯೋತ್ಪಾದನೆಗಳು ದೇಶದ ಶಾಂತಿ, ನೆಮ್ಮದಿಯನ್ನೇ ಹಾಳುಗೆಡವಿ ಜನ ನಿತ್ಯ ಆತಂಕದಲ್ಲಿ ಬದುಕು ದೂಡುವ ಪರಿಸ್ಥಿತಿ ನಿರ್ಮಾಣವಾಗಿರುವ ಈ ಹೊತ್ತಿನಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಈ ಬೃಹತ್ ಸೌಹಾರ್ದ ಸಮಾವೇಶ ನಿಜಕ್ಕೂ ಒಂದು ಭರವಸೆಯ ಆಶಾಕಿರಣದಂತಿತ್ತು. ■


ಮೈಸೂರಿನ ಭೂಭಸ್ಮಾಸುರರು!

ಮಣಿವಣ್ಣನ್ ಈಗ ಹಲ್ಲಿಲ್ಲದ ಹಾವು


ಮಣಿವಣ್ಣನ್

ಡೆಮಾಲಿಷನ್ ಖ್ಯಾತಿಯ ಮಣಿವಣ್ಣನ್‌ವರು ಮೈಸೂರು ನಗರಕ್ಕೆ ಕಾಲಿಟ್ಟಾಗ ಮೈಸೂರಿಗರಿಗೆ ಭರವಸೆ ಮೂಡಿತ್ತು. ಜನರಿಗಿದ್ದ ನಿರೀಕ್ಷೆ ಹುಸಿಯಾಗದಂತೆ ಅವರು ಕೆಲಸ ಕೂಡ ಮಾಡಿದರು. ನಾಡಿನ ಪತ್ರಿಕೆಗಳೆಲ್ಲಾ ಅವರ ಬಗ್ಗೆ ದೊಡ್ಡ ದೊಡ್ಡ ಸುದ್ದಿ ಪ್ರಕಟಿಸಲಾರಂಭಿಸಿದವು. ಅದೆಲ್ಲ ಈಗ ಹಳೆ ಕತೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ದಿನವೇ ಭೂಮಾಫಿಯಾ ಹಾಗೂ ಅದರ ಪಿತಾಮಹ ಎಸ್. ಎ. ರಾಮದಾಸ್ ಸೇರಿ ಮುಖ್ಯಮಂತ್ರಿ ಯಡ್ಡಿಯ ಮೇಲೆ ಒತ್ತಡ ತಂದು ಅವರನ್ನು ಶಿವಮೊಗ್ಗಕ್ಕೆ ಎತ್ತಂಗಡಿ ಮಾಡಿಸಿದರು. ಜನರ ಭರವಸೆಯ ಅಧಿಕಾರಿಯಾದ ಮಣಿವಣ್ಣನ್ ಎತ್ತಂಗಡಿ ವಿರುದ್ಧ ಮೈಸೂರಿನ ಜನ ಪ್ರತಿದಿನ ಬೀದಿಗಿಳಿದು ಅಭೂತಪೂರ್ವವಾಗಿ ಪ್ರತಿಭಟಿಸಿದರು.

ಜನಾಂದೋಲನಕ್ಕೆ ಮಣಿದ ಸರ್ಕಾರ ತನ್ನ ನಿರ್ಧಾರ ಬದಲಿಸಿ ಅವರನ್ನು ಮತ್ತೆ ಮೈಸೂರಿಗೆ ಕರೆತಂದು ಕೂರಿಸಿತು. ಆದರೆ, ತುಟಿಪಿಟಕ್ಕೆನ್ನದೆ ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆಯ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುವಂತೆ ಅವರಿಗೆ ಯಡ್ಡಿ ಒಳಗೊಳಗೆ ಆಜ್ಞೆ ಮಾಡಿದ್ದರು. ಭ್ರಷ್ಟಾಚಾರದ ವಿರುದ್ಧ, ಭೂಅತಿಕ್ರಮಗಳ ವಿರುದ್ಧ ಸದಾ ಭುಸುಗುಡುತ್ತಿದ್ದ ಕಾಳಿಂಗ ಸರ್ಪದಂತಿದ್ದ ಮಣಿವಣ್ಣನ್ ಕೆಲವೇ ದಿನಗಳಲ್ಲಿ ಹಲ್ಲುಕಿತ್ತ ಹಾವಿನಂತಾಗಿಬಿಟ್ಟರು.


ಜಯಣ್ಣ

ಈ ಹೊತ್ತು ಮಣಿವಣ್ಣನ್ ಪರಿಸ್ಥಿತಿ ಹೇಗಿದೆಯೆಂದರೆ ಸಿದ್ಧರಾಜು ಎಂಬ ಭೂಗಳ್ಳ ನೇರವಾಗಿ ಶೋಭಾ ಕರಂದ್ಲಾಜೆಗೆ ಫೋನ್ ಮಿಲಾಯಿಸಿ ಮಣಿವಣ್ಣನ್ ಕಿವಿಯಲ್ಲಿಟ್ಟರೆ 'ಸಿದ್ಧರಾಜು ಹೇಳಿದಂತೆ ಕೇಳಿ' ಎಂಬ ಆರ್ಡರ್ ಕೇಳಿಸುತ್ತದೆ. ಅಷ್ಟೇ. ಆಮೇಲೆ ಜಿಲ್ಲಾಧಿಕಾರಿ ಕುರ್ಚಿಯಲ್ಲಿ ಮಣಿವಣ್ಣನ್ ನಿದ್ರಿಸುತ್ತಾರೆ, ಸಿದ್ಧರಾಜು-ಗೌತಮ್ ಚಂದ್ ಮೈಸೂರನ್ನು ಕೊಳ್ಳೆಹೊಡೆಯುತ್ತಾರೆ.

ಇಂಥ ಜಿಲ್ಲಾಧಿಕಾರಿಗಾಗಿ ಮೈಸೂರಿನ ಜನ ಊಟ ನಿದ್ರೆಬಿಟ್ಟು ಪ್ರತಿಭಟಿಸಿದ್ದರೆ? ಪ್ರಾಮಾಣಿಕವಾಗಿ ಜನೋದ್ಧಾರಕ್ಕಾಗಿ ದುಡಿಯುವ ವಾತಾವರಣವಿಲ್ಲದಿದ್ದರೆ ರಾಜೀನಾಮೆ ಕೊಟ್ಟು ಮನೆಗೆ ಹೋಗೋದು ಒಳ್ಳೆದಲ್ವೆ? ■

ಕರಂದ್ಲಾಜೆ ಮೈಸೂರಿನ ಉಸ್ತುವಾರಿ ಸಚಿವರಾಗುತ್ತಿದ್ದಂತೆ ಆಕೆಯ ಶಿಷ್ಯೋತ್ತಮ ಸಿದ್ದರಾಜು ಹುಲುಸಾಗಿ ಬೆಳೆಯುತ್ತಿದ್ದ ಮೈಸೂರಿನ ಭೂದಂಧೆಗೆ ಧುಮುಕಿದ್ದಾನೆ. ಇದರಿಂದ ರಾಮದಾಸ್ ಮತ್ತು ಸಾರಾ ಮಹೇಶ್‌ಗೆ ಭೂಕಬಳಿಕೆಯಲ್ಲಿ ಒಂದಿಷ್ಟು ಹಿನ್ನಡೆಯಾಗಿ ಸಿದ್ಧರಾಜು-ಶೋಭಕ್ಕರ ಜೋಡಿ ಮೇಲುಗೈ ಸಾಧಿಸುತ್ತದೆ; ಕೋಟ್ಯಂತರ ರೂ. ಬೆಲೆಬಾಳುವ ಸಾವಿರಾರು ಎಕರೆ ಭೂಮಿ ಈ ಜೋಡಿಯ ಪಾಲಾಗುತ್ತದೆ. ಪ್ರಾಮಾಣಿಕತೆ ಮತ್ತು ದಕ್ಷತೆಗೆ ಹೆಸರಾಗಿದ್ದ ಡೆಮಾಲಿಷನ್ ಖ್ಯಾತಿಯ ಮಣಿವಣ್ಣನ್ ಎಂಬ ಜಿಲ್ಲಾಧಿಕಾರಿ ಹಲ್ಲುಕಿತ್ತ ಹಾವಿನಂತಾಗಿ ಶೋಭಾ-ಸಿದ್ಧರಾಜು ಜೋಡಿಯ ಭೂಕೊಳ್ಳೆಗೆ ಬೆಂಗಾವಲಾಗಿ ನಿಲ್ಲುವ ಹೀನಸ್ಥಿತಿಗೆ ಬಂದಿದ್ದಾರೆ.




ತಲೆಯ ಮೇಲೊಂದು ಸೂರು ಮಾಡಿಕೊಳ್ಳಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ (ಮೂಡಾ) ಅರ್ಜಿಹಾಕಿ ಹದಿನೈದು ವರ್ಷಗಳಿಂದ ಕ್ಯೂನಲ್ಲಿ ನಿಂತಿರುವ ಜನ ಬೇಕಾದಷ್ಟಿದ್ದಾರೆ. ಆದರೆ, ಮೈಸೂರನ್ನೇ ನುಂಗಿ ನೀರು ಕುಡಿಯುವುದಕ್ಕೆ ತೊಡಗಿರುವ ನುಂಗಣ್ಣ ಅಧಿಕಾರಿಗಳೇ ಮೂಡಾದಲ್ಲಿ ತುಂಬಿಕೊಂಡಿರುವುದರಿಂದ ಜನರಿಗೆ ಸೈಟು ಸಿಗುವುದು ಕನಸಿನ ಮಾತಾಗಿದೆ. ಈ ನುಂಗಣ್ಣರನ್ನು ಬೆನ್ನಿಗಿಟ್ಟುಕೊಂಡಿರುವ ಭೂಮಾಫಿಯಾ ಮಹಾನುಂಗಣ್ಣರು ಮಾಡಬಾರದಷ್ಟು ಗೋಲ್‌ಮಾಲ್‌ಗಳನ್ನು ನಡೆಸಿ ಮೈಸೂರು ಸುತ್ತ 20 ಕಿ.ಮೀ. ರೇಡಿಯಸ್‌ನಲ್ಲಿರುವ ಸುಮಾರು ಐವತ್ತಾರು ಸಾವಿರ ಎಕರೆ ಭೂಮಿಯನ್ನು ಈಗಾಗಲೇ ಖರೀದಿಸಿಕೊಂಡುಬಿಟ್ಟಿದ್ದಾರೆಂದರೆ ಇನ್ನು ಬಡಬಗ್ಗರಿಗೆ ನಿವೇಶನ ಕೊಡುವುದಕ್ಕೆ ಜಾಗವಾದರೂ ಎಲ್ಲಿ ಉಳಿಯುತ್ತೆ?


ಮೈಸೂರು ನಗರವನ್ನು ಯೋಜನಾಬದ್ಧವಾಗಿ ನಿರ್ಮಿಸುವ ಸದುದ್ದೇಶದಿಂದ ಹಾಗೂ ಜನರಿಗೆ ತಲೆಯ ಮೇಲೊಂದು ಸ್ವಂತ ಸೂರು ನೀಡುವ ಮಾನವೀಯತೆಯೊಂದಿಗೆ 1903ರಲ್ಲೇ ಅಂದಿನ ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಸಿಟಿ ಇಂಪ್ರುಮೆಂಟ್ ಟ್ರಸ್ಟ್ ಬೋರ್ಡ್‌ಅನ್ನು ಸ್ಥಾಪಿಸಿದರು. ಮಹಾರಾಜರ ಆ ದೂರದೃಷ್ಟಿಯೊಂದಿಗೆ ಪ್ರಾರಂಭವಾದ ಈ ಸಂಸ್ಥೆ ಅಲ್ಲಿಂದ ಇಲ್ಲಿಯತನಕ ವಿವಿಧ ಹೆಸರುಗಳನ್ನು ಬದಲಿಸಿಕೊಂಡು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿ ಮಾರ್ಪಾಡಾಗಿದೆ. ದುರಂತ ಎಂದರೆ, ಮಹಾರಾಜರು ಯಾವ ಉದ್ದೇಶಕ್ಕಾಗಿ ಇದನ್ನು ಸ್ಥಾಪಿಸಿದ್ದರೋ ಅದಕ್ಕೆ ತದ್ವಿರುದ್ಧ ಕೆಲಸದಲ್ಲಿ ತೊಡಗಿರುವುದು ಮೈಸೂರಿನ ಜನರ ದೌರ್ಭಾಗ್ಯವೇ ಸರಿ.




ಮೂಡಾದ ಆಶಯವೀಗ ಸಂಪೂರ್ಣವಾಗಿ ಬದಲಾಗಿ ಹೋಗಿದೆ. ಬಡವರಿಗೆ ನಿವೇಶನ ಅಭಿವೃದ್ಧಿಪಡಿಸಿಕೊಡುವ ಆಶಯ ಕಾಗದದ ಮೇಲೆ ಮಾತ್ರ ಉಳಿದುಕೊಂಡಿದ್ದು ಕೋಟ್ಯಂತರ ರೂಪಾಯಿ ಬೆಲೆಬಾಳುವ ಭೂಮಿಯನ್ನು ಭೂಗಳ್ಳರಿಗೆ ಧಾರೆಯೆರೆಯುವುದೇ ಪ್ರಧಾನ ಕಸುಬಾಗಿಬಿಟ್ಟಿದೆ. ಕಳೆದ 2-3 ವರ್ಷಗಳಿಂದೀಚೆಗೆ ನೋಡುವುದಾದರೂ ಮೈಸೂರಿನಲ್ಲಿ ನಿವೇಶನಗಳ ಬೆಲೆ ಗಗನಕ್ಕೇರಿದೆ. ಪಕ್ಕಾ ಭೂಗಳ್ಳತನದಲ್ಲಿ ತೊಡಗಿರುವ ರಾಜಕಾರಣಿಗಳು ಮತ್ತು ಅವರ ಹಿಂಬಾಲಕರು 312ಕ್ಕೂ ಹೆಚ್ಚು ಗೃಹ ನಿರ್ಮಾಣ ಸಹಕಾರ ಸಂಘಗಳ ಹೆಸರಿನಲ್ಲಿ ನಗರದ 20 ಕಿ.ಮೀ. ರೇಡಿಯಸ್‌ನಲ್ಲಿ ಸುಮಾರು 56 ಸಾವಿರ ಎಕರೆ ಭೂಮಿಯನ್ನು ಖರೀದಿಸಿಬಿಟ್ಟಿದ್ದಾರೆ. ಇದರರ್ಥವಿಷ್ಟೆ: ಕಳೆದ 25 ವರ್ಷಗಳಿಂದಲೂ ಮೂಡಾಕ್ಕೆ 20x30, 30x40 ಅಳತೆಯ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಸುಮಾರು 1,50,000 ಜನರಿಗಾಗಿ ಲೇಔಟ್ ಮಾಡಲು ಮೈಸೂರಿನಲ್ಲೀಗ ಜಾಗವಿಲ್ಲ, ಮೂಡಾವೇ ಭೂಮಿ ಖರೀದಿಸಿ, ಲೇಔಟ್ ನಿರ್ಮಿಸಿ ಜನರಿಗೆ ನಿವೇಶನ ಹಂಚಬೇಕೆಂದುಕೊಂಡರೂ ಶ್ರೀರಂಗಪಟ್ಟಣ ದಾಟಿ ಹೋಗಬೇಕಾಗುತ್ತದೆ! ಜನರೂ ಕೂಡ ಖಾಸಗಿಯವರು ನಿರ್ಮಿಸಿದ ಲೇಔಟ್‌ಗಳಲ್ಲೇ ದುಬಾರಿ ದುಡ್ಡು ಕೊಟ್ಟು ನಿವೇಶನ ಕೊಂಡುಕೊಳ್ಳುವ ಅನಿವಾರ್ಯತೆಗೆ ಬದ್ಧಿದ್ದರಿಂದ ಮೂಡಾಕ್ಕೀಗ ಕೆಲಸವಿಲ್ಲದಂತಾಗಿದೆ.


ರಾಮದಾಸ್

ಅಸಲಿಗೆ ಜನರಿಗೆ ಇಂಥ ಹೀನ ಪರಿಸ್ಥಿತಿಯನ್ನು ತಂದಿಟ್ಟಿದ್ದು ಖುದ್ದು ಮೂಡಾವೆ. ಅದೇ ಅದರ ಕಳೆದ ಐದು ವರ್ಷಗಳ ಮಹತ್ಸಾಧನೆ. ಭೂಮಾಫಿಯಾದವರು ಮೂಡಾದೊಂದಿಗೆ ಸೇರಿ ಲೂಟಿ ಹೊಡೆಯುತ್ತಿರುವ ಪರಿಯನ್ನೇ ನೋಡಿ. ಮೂಡಾ ನಿವೇಶನಾಕಾಂಕ್ಷಿಗಳಿಗಾಗಿ ವಶಪಡಿಸಿಕೊಂಡ ಭೂಮಿಯನ್ನು ಮೂಡವೇ ಅಭಿವೃದ್ಧಿಪಡಿಸಿ, ಇನ್ನೇನು ನಿವೇಶನ ಹಂಚಬೇಕು ಎನ್ನುವ ಹಂತದಲ್ಲಿ ಭೂಮಾಫಿಯಾ ಮಧ್ಯಪ್ರವೇಶಿಸಿ ಡಿನೋಟಿಫೈ ಮಾಡಿಸಿ, ಕೃಷಿ ವಲಯದಿಂದ ವಸತಿ ವಲಯಕ್ಕೆ ಪರಿವರ್ತಿಸಿಕೊಳ್ಳುತ್ತಾರೆ. ಮೂಡಾದ ಅಧಿಕಾರಿಗಳೇ ಅವರ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತಾರೆ.


ಸಿದ್ಧರಾಜು


ಶ್ರೀಕಾಂತ್

ಮೂಡಾ ಸ್ವಾಧೀನಪಡಿಸಿಕೊಂಡಿರುವ ಭೂಮಿಯನ್ನು ಡಿನೋಟಿಫೈ ಮಾಡುವುದಕ್ಕೆ ಒಂದೊಂದು ಎಕರೆಗೆ ತಲಾ ಹತ್ತತ್ತು ಲಕ್ಷ, ಕೃಷಿಭೂಮಿಯನ್ನು ವಸತಿ ವಲಯಕ್ಕೆ ಪರಿವರ್ತಿಸುವುದಕ್ಕೆ ಎಕರೆಯೊಂದಕ್ಕೆ ತಲಾ ಇಪ್ಪತ್ತು ಲಕ್ಷ. ಈ ಎಲ್ಲ ಹಣವನ್ನು ಭೂಮಾಫಿಯಾ ನುಂಗಿ ನೀರು ಕುಡಿಯುತ್ತದೆ.

ಮೂಡಾದಿಂದ ನಿವೇಶನಕ್ಕಾಗಿ ಭೂಮಿಯನ್ನು ಸ... ಮಾಡಿ ನೋಟಿಫೈ ಮಾಡಲು ತಯಾರಿಸಿದ ವರದಿ ಮೊದ... ತಲುಪುವುದೇ ಭೂಮಾಫಿಯಾ ಧಣಿಗಳ ಮನೆಗಳಿ... ಈ ಮಾಫಿಯಾ ಡಾನ್‌ಗಳು ಮೂಡಾ ಅಧಿಕಾರಿಗ... ಒದಗಿಸಿದ ವರದಿಯನ್ನಾಧರಿಸಿ ನೋಟಿಫೈ ಆಗಲಿರು... ಜಮೀನುಗಳ ರೈತರ ಮನೆಗಳಿಗೆ ತೆರಳಿ 'ಸರಕಾರ ನಿಮ... ಕೊಡುವ ಹಣಕ್ಕಿಂತ ಎರಡು ಪಟ್ಟು ಹಣ ಕೊಡುತ್ತೇ... ಎಂದು ನಂಬಿಸಿ 5 ರಿಂದ 10 ಸಾವಿರ ಕೊಟ್ಟು ಬೇನಾ... ಹೆಸರಿನಲ್ಲಿ ಜಿಪಿಎ ಮಾಡಿಸಿಕೊಳ್ಳುತ್ತಾರೆ. ಆ ಜಾಗವ... ನೋಟಿಫೈ ಮಾಡಿಸಿಕೊಂಡು ಇವರೇ ಹುಟ್ಟುಹಾಕಿಕೊಂ... ಖಾಸಗಿ ಗೃಹನಿರ್ಮಾಣ ಸಂಘಗಳಿಗೆ ವರ್ಗಾಯಿಸುತ್ತಾ... ಆ ಸಂಘಗಳು ನಿವೇಶನಗಳನ್ನು ಮಾಡಿ ಸಾಮಾನ್ಯರಿ... ದುಬಾರಿ ಬೆಲೆಗೆ ಮಾರಿ ಕೋಟಿ ಕೋಟಿ ರೂಪಾಯಿಗಳನ... ಬಾಚಿಕೊಳ್ಳುತ್ತವೆ.

ಒಂದು ವೇಳೆ ಖಾಸಗಿಯವರೇ ಲೇಔಟ್ ನಿರ್ಮಾ... ಮಾಡಿದರೆ ಬೀದಿದೀಪ, ಒಳಚರಂಡಿ ವ್ಯವಸ್ಥೆ, ಕುಡಿಯು... ನೀರಿನ ಪೈಪ್‌ಲೇನ್ - ಹೀಗೆ ಎಲ್ಲ ಮೂ... ಭೂತ ಸೌಕರ್ಯಗಳನ್ನು ತಮ್ಮ ಸ್ವಂತ ದುಡ... ಖರ್ಚು ಮಾಡಿ ಒದಗಿಸಬೇಕಾಗುತ್ತದ... ಭೂಮಾಫಿಯಾದವರಿಗೆ ಅನುಕೂಲವಾ... ಲೆಂದೇ ಮೂಡಾದ ಅಧಿಕಾರಿಗಳು ಅದಕ್ಕ... ಒಂದು ಪರಿಹಾರ ಕಂಡುಕೊಂಡಿದ್ದಾರ... ಮೂಡಾದ ನಗರ ಯೋಜನಶಾಖೆಯ... ಅಧಿಕಾರಿಗಳು ತಾವು ತಯಾರಿಸಿದ ಬಡಾವಣ... ನಕ್ಷೆಯಲ್ಲಿ ಮುಖ್ಯರಸ್ತೆ ಹಾದುಹೋಗು... ಆಸುಪಾಸಿನ ಜಮೀನನ್ನು ಡಿನೋಟಿಫ... ಮಾಡಬೇಕಾದ ವಿಷಯವನ್ನು ಭೂಮಾಫಿಯಾ... ಒದಗಿಸುತ್ತಾರೆ. ಅದನ್ನಾಧರಿಸಿ ಮುಖ್ಯರಸ್ತೆಯ... ಆಸುಪಾಸಿನ ಜಮೀನನ್ನೆಲ್ಲಾ ಭೂಮಾಫಿಯ... ಮೊದಲೇ ಖರೀದಿಸಿಬಿಡುತ್ತದೆ. ಮುಖ್ಯರಸ್ತೆ... ಬೇಕಾಗುವ ಎಲ್ಲಾ ಮೂಲಭೂತ ಸೌಕರ್ಯ... ಗಳನ್ನು ಸಾರ್ವಜನಿಕರ ದುಡ್ಡಿನಿಂದ ಮೂಡ... ಮಾಡುತ್ತದೆ. ಅದರ ಅಕ್ಕಪಕ್ಕದ ಬೆಲೆಬಾಳು... ಸೈಟುಗಳು ಮಾತ್ರ ಭೂಮಾಫಿಯಾದ ಪಾಲಾ... ರುತ್ತವೆ! ಇದರಿಂದ ಮೂಡಾದ ಅಧಿಕಾರಿಗಳಿ... ಭೂಮಾಫಿಯಾ ಎಷ್ಟೊಂದು ಭಕ್ಷೀಸ... ಕೊಡುತ್ತದೆಯೆಂದರೆ ಅಧಿಕಾರಿಗಳು ಎಂಟ... ಗಂಟೆ ಕೆಲಸ ಮಾಡುವುದಕ್ಕೇ ಹಿಂದುಮುಂದ... ನೋಡುವ ಈ ಕಾಲದಲ್ಲಿ ಮೂಡಾದ... ಅಧಿಕಾರಿಗಳು ಹಗಲು ರಾತ್ರಿಯೆನ್ನದೆ ಕೆಲ... ಮಾಡುತ್ತಿದ್ದಾರೆ!

ಕೆಲವು ಉದಾಹರಣೆಗಳನ್ನೇ ನೋಡಿ... ಮೂಡಾವು 2006-07ನೇ ಸಾಲಿನಲ್ಲಿ ಬಡಾ... ವಣೆಗಳಿಗಾಗಿ ಜಮೀನುಗಳನ್ನು ಸ್ವಾಧೀನಪಡಿ... ಕೊಳ್ಳಲು ಹೊರಡಿಸಿದ ಪ್ರಾಥಮಿ... ಅಧಿಸೂಚನೆಯಿಂದ ಕೆಲವು ಸರ್ವೆ ನಂಬರುಗ... ಜಮೀನುಗಳನ್ನು ಸರ್ಕಾರ ಕೈಬಿಟ್ಟಿದೆ. ಅವುಗಳಲ್ಲಿ ನಾಲ್ವ... ಕೃಷ್ಣರಾಜ ಒಡಯರ್ ಬಡಾವಣೆ, ಸ್ವರ್ಣಜಯಂತಿ ನಗ...

▶▶▶

ಠಕ್ಕರ್‌ನ ಠಕ್ಕ!

ಹೆಸರಿಗೆ ತಕ್ಕಂತೆ ಕನ್ನ ಹಾಕುವುದು ಇವರ ಕುಲಕಸಬು. 2007 ರ ಮೇ 16 ರಂದು ಶ್ರೀ ಮಣಿಪಾಲ್ ಠಕ್ಕರ್ ಮತ್ತು ಶ್ರೀ ರಾಜೇಂದ್ರ ಶಂಕರ್‌ಲಾಲ್ ಠಕ್ಕರ್ ಇವರಿಗೆ ಉತ್ತನಹಳ್ಳಿ ಸರ್ವೆ ನಂ. 65/2, 66, 69/1 ಮತ್ತು ಲಲಿತಾದ್ರಿಪುರ ಗ್ರಾಮದ ಸರ್ವೆ ನಂ. 153/1, 153/2 ಮುಂತಾದ ಕಡೆ ಒಟ್ಟು 98 ಎಕರೆ 6.25 ಗುಂಟೆ, ಜಮೀನನ್ನು ಸರ್ಕಾರ ಡಿನೋಟಿಫೈ ಮಾಡಿದೆ. 2008 ಅಕ್ಟೋಬರ್ 14 ರಂದು ನಡೆದ ಮೂಡಾ ಸಭೆಯಲ್ಲಿ ಸಿದ್ಧರಾಜು ವಿಶೇಷ ಆಸಕ್ತಿ ವಹಿಸಿ ಇದನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಪರಿವರ್ತಿಸುವಲ್ಲಿ ಶ್ರಮವಹಿಸಿದ್ದಾರೆ. ರೈತರೇ ಅಲ್ಲದ ಆದರೂ ವ್ಯವಸಾಯ ಭೂಮಿಯ ಒಡೆಯರಾದ ಮಣಿಲಾಲ್ ಠಕ್ಕರ್ ನಂ. 757, 12 ನೇ ಮುಖ್ಯರಸ್ತೆ ನ್ಯೂ ಕಾಳಿದಾಸ ರಸ್ತೆ ವಿಜಯನಗರ 1 ನೇ ಹಂತ, ಮೈಸೂರು ಇಲ್ಲಿ ವಾಸವಿರುವುದಾಗಿ ಅಧಿಕೃತ ವಿಳಾಸ ಕೊಟ್ಟಿದ್ದಾರೆ. ಇದು ಬೋಗಸ್ ವಿಳಾಸ. ಅಲ್ಲಿ ಅವರು ವಾಸವಿಲ್ಲ, ಇದು ನೂರಾರು ಕೋಟಿ ಬೆಲೆಬಾಳುವ ಭೂಮಿ ಆಗಿದ್ದರೂ ನಾವೇ ಭೂ ಒಡೆಯರೆಂದು, ನಮ್ಮ ವಿಳಾಸ ಇದೆಂದು ಅವರು ಬೊಗಳೆ ಬಿಟ್ಟರೂ ಅದನ್ನು ಚೆಕ್ ಮಾಡುವ ಗೋಜಿಗೆ ಮೂಡಾ ಅಧಿಕಾರಿಗಳು ಹೋಗಿಲ್ಲ. ಈ ಜಾಣ ಕುರುಡು ಪ್ರದರ್ಶಿಸುವುದಕ್ಕೆ ಠಕ್ಕರ್ ಮೂಡಾ ಅಧಿಕಾರಿಗಳಿಗೆ ಅದೆಷ್ಟು ಅಮೇಧ್ಯ ತಿನ್ನಿಸಿದ್ದಾನೆಂಬುದು ಬಯಲಾಗಬೇಕಷ್ಟೆ.

ಈ ಸ್ಥಳ ನಗರದ ಆಯಕಟ್ಟಿನ ಜಾಗದಲ್ಲಿರುವ ಲಲಿತಮಹಲ್‌ಗೆ ಕೂಗಳತೆಯ ದೂರದಲ್ಲಿದ್ದು, ಈ ಭೂಮಿಯ ಸುತ್ತ ಮೂಡಾ ಲಲಿತಾದ್ರಿಪುರವೆಂಬ ಬಡಾವಣೆ ನಿರ್ಮಿಸಿ ನಿವೇಶನ ಹಂಚುವುದರಲ್ಲಿದೆ. ಈ ಲಲಿತಾದ್ರಿಪುರಕ್ಕೆ ಮೂಡಾ ತನ್ನ ಖರ್ಚಿನಲ್ಲಿ ನಾಗರಿಕ ಸೌಲಭ್ಯವಾದ ರಸ್ತೆ ನಿರ್ಮಿಸಿ ಕೊಟ್ಟಿದ್ದು ಮಾಲಿಕ ಠಕ್ಕರ್ ಜಮೀನು ಇದರ ಮಧ್ಯದಲ್ಲಿದೆ. ಹೀಗಾಗಿ ಮೂಡಾವು ಸಾರ್ವಜನಿಕರ ಕೋಟ್ಯಂತರ ರೂಪಾಯಿಗಳ ಖರ್ಚು ಮಾಡಿ ಠಕ್ಕರ್‌ಗೆ ರಸ್ತೆ ನಿರ್ಮಿಸಿಕೊಟ್ಟಂತಾಗುತ್ತದೆ.

ಇಂಥ ಜಮೀನಿಗೆ ಸಂಬಂಧಿಸಿದಂತೆ ಪ್ರಕಟಣೆ ಹೊರಡಿಸುವಾಗ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಪತ್ರಿಕೆಗಳಲ್ಲಿ ಮೂಡಾ ಪ್ರಕಟಣೆ ನೀಡಬೇಕು. ಆ ಮೂಲಕ ಸಾರ್ವಜನಿಕರ ಆಕ್ಷೇಪಣೆಗಳನ್ನು ಸ್ವೀಕರಿಸಬೇಕು. ಭೂದಂಧೆಯಲ್ಲಿ ಪಳಗಿರುವ ಮೂಡಾ ಅಧಿಕಾರಿಗಳು ಇಂಥ ವಿಚಾರವನ್ನು ಅದೆಷ್ಟು ಸಲೀಸಾಗಿ ನಿಭಾಯಿಸುತ್ತಾರೆಂದರೆ ಮೈಸೂರಿನ ಜನರಿಗೆ ಹೆಸರೇ ಗೊತ್ತಿಲ್ಲದ ಪುಡಿ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ ಶಾಸ್ತ್ರ ಮುಗಿಸುತ್ತಾರೆ.

ಲಲಿತಾದ್ರಿಪುರದಲ್ಲಿ 60x 40 ಅಳತೆಯ ನಿವೇಶನವೊಂದಕ್ಕೆ 10 ಲಕ್ಷ ರೂ.ಗಳಿದ್ದು ಠಕ್ಕರ್‌ನ 98 ಎಕರೆ ಜಮೀನಿನಲ್ಲಿ 60x40 ಅಳತೆಯ 1000ಕ್ಕೂ ಹೆಚ್ಚು ನಿವೇಶನಗಳನ್ನು ಮಾಡಬಹುದು. ಅಂದರೆ ಇದು ನೂರು ಕೋಟಿ ವ್ಯವಹಾರದ ಭೂಮಿ. ಇದನ್ನು ಸರಿಯಾದ ಒಂದು ವಿಳಾಸವೇ ಇಲ್ಲದ ಠಕ್ಕರ್ ತೆಕ್ಕೆಗೆ ತಳ್ಳಿದ ಮೂಡಾ ಸರ್ಕಾರಕ್ಕೆ, ಸಾರ್ವಜನಿಕರಿಗೆ ಸಲ್ಲಬೇಕಾಗಿದ್ದ ಅಷ್ಟೂ ಹಣವನ್ನು ಠಕ್ಕರ್ ಪಾಕಕ್ಕಿಟ್ಟಂತಾಯಿತು. ನೂರು ಕೋಟಿ ರೂಪಾಯಿಯ ಈ ಭೂಹಗರಣವನ್ನೇನಾದರೂ ಸಿಬಿಐ ತನಿಖೆ ಮಾಡಿದರೆ ಠಕ್ಕರ್ ಮತ್ತು ಅವನ ಅಮೇಧ್ಯ ತಿಂದ ಮೂಡಾ ಅಧಿಕಾರಿಗಳು ಜೈಲು ಸೇರಬೇಕಾಗುತ್ತದೆ. ■

ಭೂಮಾಫಿಯಾಕ್ಕೆ ಪಕ್ಷಭೇದವಿಲ್ಲ


ಮಹೇಶ್

ಮೈಸೂರಿನಲ್ಲಿರುವ ಭೂಮಾಫಿಯಾ ಡಾನ್‌ಗಳು ಮೇಲ್ನೋಟಕ್ಕೆ ಬೇರೆ ಬೇರೆ ಪಕ್ಷಗಳಲ್ಲಿರುವಂತೆ ಕಾಣುತ್ತಾರಾದರೂ ಭೂಕೊಳ್ಳೆಯ ವಿಚಾರಕ್ಕೆ ಬಂದರೆ ಪಕ್ಷಭೇದ ಮರೆತು ಒಗ್ಗಟ್ಟಾಗುತ್ತಾರೆ; ಪಕ್ಷದ ಹಿತಾಸಕ್ತಿಗಳನ್ನೇ ಮರೆತುಬಿಡುತ್ತಾರೆ.

ಒಂದು ಉದಾಹರಣೆಯನ್ನೇ ನೋಡಿ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ನಗರ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ವಿಶ್ವನಾಥ್, ಜೆಡಿಎಸ್‌ನಿಂದ ಸಾ.ರಾ.ಮಹೇಶ್ ಕಣಕ್ಕಿಳಿದಿದ್ದರು. ಈ ಕ್ಷೇತ್ರದಲ್ಲಿ ಕುರುಬ ಮತ್ತು ಒಕ್ಕಲಿಗ ಮತಗಳೇ ಪ್ರಬಲವಾಗಿರುವುದರಿಂದ ಕುರುಬ ಸಮುದಾಯದ ವಿಶ್ವನಾಥ್ ಅವರನ್ನು, ಒಕ್ಕಲಿಗ ಸಮುದಾಯದ ಸಾ.ರಾ.ಮಹೇಶ್‌ರನ್ನು ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಕಣಕ್ಕಿಳಿಸಿರುವುದರಲ್ಲಿ ಒಂದು ಅರ್ಥವಿತ್ತು, ಆದರೆ, ಬಿಜೆಪಿ ನೋಡಿ. ಬೆರಳೆಣಿಕೆಯಷ್ಟಿರುವ ಬಲಿಜ ಜಾತಿಯ ಕೆ.ಪಿ.ಮುಟ್ಟಸಿದ್ಧಶೆಟ್ಟಿಯವರನ್ನು ಕಣಕ್ಕಿಳಿಸಿತ್ತು.

ಕ್ಷೇತ್ರದಲ್ಲಿ ಬಿಜೆಪಿಗೆ ಒಕ್ಕಲಿಗ ಲೀಡರುಗಳಿದ್ದರೂ ಬೆರಳೆಣಿಕೆಯಷ್ಟಿರುವ ಬಲಿಜ ಜಾತಿಯ ಡಮ್ಮಿ ಕ್ಯಾಂಡಿಡೇಟ್ ಹಾಕಿದ ಬಿಜೆಪಿಯ ತಂತ್ರ ಅರ್ಥವಾಗದ ಮರ್ಮವೇನಲ್ಲ. ಒಕ್ಕಲಿಗ ಕ್ಯಾಂಡಿಡೇಟ್ ಹಾಕಿದ್ದರೆ ಒಕ್ಕಲಿಗ ಮತಗಳು ಒಡೆದು ಸಾ.ರಾ.ಮಹೇಶ್ ಸೋಲುತ್ತಿದ್ದರು. ಅದು ಬಿಜೆಪಿಗೆ ಬೇಕಿರಲಿಲ್ಲ. ವಿಶ್ವನಾಥ್ ವಿರುದ್ಧ ಅವರನ್ನು ಗೆಲ್ಲಿಸುವುದಕ್ಕಾಗಿಯೇ ಬಲಿಜ ಜಾತಿಯ ಮುಟ್ಟಸಿದ್ಧಶೆಟ್ಟಿಯನ್ನು ಬಲಿಕೊಟ್ಟರು. ಇದು ಮೈಸೂರು ಲ್ಯಾಂಡ್ ಮಾಫಿಯಾದ ಒಳ-ಒಪ್ಪಂದದ ಫಲಶ್ರುತಿ.

▶▶

...ಟಿ. ನಗರ, ಶಾಂತವೇರಿ ಗೋಪಾಲಗೌಡ ಬಡಾವಣೆ ...ೇ ಹಂತ, ಲಾಲ್‌ಬಹದ್ದೂರ್ ಶಾಸ್ತ್ರಿ ನಗರ 2ನೇ ...ಂತ, ಲಲಿತಾದ್ರಿ ನಗರ 2ನೇ ಹಂತ, ಉದ್ಯಾನವನ ...ತ್ತು ಬಯಲು ಪ್ರದೇಶ ಮುಂತಾದವುಗಳು ಸೇರಿವೆ. ...ವುಗಳಿಂದ ಒಟ್ಟು 3469 ಎಕರೆ 21 ಗುಂಟೆ ಭೂಮಿ ...ೋಟಿಫೈ ಆಗಿದ್ದರೆ, ಸರ್ಕಾರ ಕೈಬಿಟ್ಟಿರುವ ಒಟ್ಟು ...ೂಮಿ 879 ಎಕರೆ 35 ಗುಂಟೆ. ಅಂದರೆ ಮೂಡಾದ ...ದಲ್ಲಿ ಉಳಿದಿರುವ ಭೂಮಿ 2589 ಎಕರೆ 26 ಗುಂಟೆ.

...ಇದು 2006 ಮತ್ತು 2007ರ ...ಯಾದರೆ ಭೂಸ್ವಾಧೀನವಾದ ...ೇ ಭೂಮಿಯನ್ನು ಈಗ ಪರಿ...ಲಿಸಲು ಹೋದರೆ ಸಿಗುವ ...ಣವೇ ಬೇರೆ. ಉದಾಹರಣೆಗೆ ...ರ್ಜಯಂತಿ ನಗರದಲ್ಲಿ (ಚೌಡಳ್ಳಿ ...ಾಳು ಗ್ರಾಮಗಳು) ಮೂಡಾ ...ೋಟಿಫೈ ಮಾಡಿದ ಒಟ್ಟು ಭೂಮಿ ...4 ಎಕರೆ 03 ಗುಂಟೆ. ಅದರಲ್ಲಿ ...4 ಎಕರೆ ಹನ್ನೊಂದೂವರೆ ...ಂಟೆಯಷ್ಟು ಭೂಮಿಯನ್ನು ...ರ್ಕಾರ ಕೈಬಿಟ್ಟಿತ್ತು. 2008ರಲ್ಲಿ ಇದೇ ಚೌಡಳ್ಳಿ ಮತ್ತು ...ಾಳು ಗ್ರಾಮಗಳ ಡಿನೋಟಿಫೈ ಆದ ಜಮೀನನ್ನು ...ಶೀಲಿಸಿದರೆ 224 ಎಕರೆ ಡಿನೋಟಿಫೈ ಆಗಿ ಮೂಡಾ ...ದಲ್ಲಿದ್ದ 354 ಎಕರೆಯಲ್ಲಿ 130 ಎಕರೆ ಮೂಡಾ ...ದಲ್ಲಿ ಉಳಿದಿದೆ. ಅಂದರೆ ಶೇ.63ರಷ್ಟು ಭೂಮಿಯನ್ನು ...ೋಟಿಫೈ ಮಾಡಲಾಗಿದೆ. ಒಟ್ಟು ನೋಟಿಫೈ ಆದ ...69.21 ಎಕರೆ ಭೂಮಿಯಲ್ಲಿ ಶೇ.50 ಭಾಗ ...ೋಟಿಫೈ ಆಗಿದೆ. ಹೀಗೆ ಡಿನೋಟಿಫೈ ಮಾಡಲಾದ ...ಮಿ ಯಾರ ವಶದಲ್ಲಿದೆ ಎಂದು ಕೆದಕಿ ನೋಡಿ. ...ಲ್ಲವೂ ಜಿಲ್ಲಾ ಉಸ್ತುವಾರಿ ಮಂತ್ರಿ ಶೋಭಾ ...ರಂದ್ಲಾಜೆಯವರ ಆಪ್ತ ಕಾರ್ಯದರ್ಶಿ ಸಿದ್ದರಾಜು, ಆತನ ...ಂತ ಗೌತಮ್ ಚಂದ್, ಮುಖ್ಯಮಂತ್ರಿಗಳ ಸಂಸದೀಯ ...ರ್ಯದರ್ಶಿಗಳಾದ ಎಸ್.ಎ.ರಾಮದಾಸ್, ಆತನ ...ೋದರ ಶ್ರೀಕಾಂತ್, ಎಮ್‌ಎಲ್‌ಸಿ ಸಾರಾ ಮಹೇಶ್, ...ಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿ ...ೇಲುಂಡ ಬಿಜೆಪಿ ಕ್ಯಾಂಡಿಡೇಟ್ ...ಜೇಗೌಡ, ಜಿಲ್ಲಾ ಸಹಕಾರ ...ಂಕ್ ಅಧ್ಯಕ್ಷ ಹಾಗೂ ಪ್ರಮತಿ ...ವ್ಯೂ ಮಾಲಿಕ ಎಚ್.ವಿ. ...ಜೀವ್, ಐಶ್ವರ್ಯ ಡೆವಲಪರ್ಸ್‌ನ ...ಾಶ್, ಮಧುವನ ಟ್ರಸ್ಟ್‌ನ ...ವೇಂದ್ರ ಭಟ್, ತಡಗವಾಡಿ ...ಕಾಂತ್, ಸಿದ್ಧರಾಮಯ್ಯನವರ ... ಬೆಂಬಲಿಗ ಹಿನಕಲ್ ಪಾಪಣ್ಣ ... ಸಿದ್ಧುವಿನಿಂದ ದೂರ ಉಳಿದಿ... ಕೃಷ್ಣಮಾದೇಗೌಡ - ಹೀಗೆ ಮೈಸೂರಿನ ದೊಡ್ಡ ...ದ್ದ ಭೂಗಳ್ಳ ತಿಮಿಂಗಿಲಗಳ ಕಪಿಮುಷ್ಟಿಯಲ್ಲಿ ಭದ್ರವಾಗಿ ...ಕೊಂಡಿರುವ ಅಸಲೀ ಚಿತ್ರಣ ಸಿಗುತ್ತದೆ.

...ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿಂದಿನ ...ರ್ಮನ್ ಗೋವಿಂದರಾಜು ತನ್ನ ಬೇನಾಮಿ ...ಹಾರಕ್ಕಾಗಿ ತಮ್ಮ ಶಿಷ್ಯೋತ್ತಮರಾಗಿದ್ದ ರಾಮದಾಸ್ ...ತ್ತು ಸಾರಾ ಮಹೇಶ್ ಅವರನ್ನು ಬಳಸಿಕೊಂಡಿದ್ದರು. ...ದಂಧೆಯಲ್ಲಿ ಪಳಗಿದ ಈ ಶಿಷ್ಯೋತ್ತಮರು ಗುರುವಿಗೆ ...ಮಂತ್ರ ಹೇಳಿ ತಾವೇ ನೇರವಾಗಿ ಭೂದಂಧೆಯಲ್ಲಿ ...ಡಗಿ ಕೊಬ್ಬಿಹೋಗಿದ್ದಾರೆ.

...ಗೋವಿಂದರಾಜು ಇವರನ್ನು ಬೇನಾಮಿ ವ್ಯವಹಾರಕ್ಕೆ ...ಬಳಸಿಕೊಂಡ ಹಾಗೆಯೇ ಈ ಶಿಷ್ಯೋತ್ತಮರೂ ಸಹ ...ನಾಮಿ ಹೆಸರಿನಲ್ಲಿ ನಗರದ ಸುತ್ತಮುತ್ತಲ ಭಾರೀ ...ಬಾಳುವ ಸಾವಿರಾರು ಎಕರೆ ಭೂಪ್ರದೇಶವನ್ನು ...ಸಿದ್ದಾರೆ. ತ.ಮ. ವಿಜಯ ಭಾಸ್ಕರ್ ಅವರ ಕಾಲದಲ್ಲೇ

ರಾಮದಾಸರ ಭೂಗಳ್ಳತನ ಮುಗಿಲುಮುಟ್ಟಿದ್ದು ಆ ಹಗರಣಗಳನ್ನು ಕೆದಕುವ ಗೋಜಿಗೆ ಸರ್ಕಾರ ಹೋಗುತ್ತಿಲ್ಲ, ಕೆದಕಿದರೆ ರಾಮದಾಸ್ ಪರ್ಮನೆಂಟಾಗಿ ಜೈಲುಪಾಲಾಗಬೇಕಾಗುತ್ತದೆ. ರಾಮದಾಸ್ ಈಗ ವ್ಯವಹಾರ ಮಾಡುವ ವಿಧಾನವನ್ನೇ ಬದಲಿಸಿಕೊಂಡುಬಿಟ್ಟಿದ್ದಾರೆ. ತಾವೇ ನೇರವಾಗಿ ಎಂದೂ ಭೂಗಳ್ಳತನದಲ್ಲಿ ಪಾಲ್ಗೊಳ್ಳುವುದಿಲ್ಲ, ಅದಕ್ಕಾಗಿಯೇ ತನ್ನ ತಮ್ಮ ಶ್ರೀಕಾಂತ್‌ನನ್ನು ಮುಂದೆಬಿಟ್ಟಿದ್ದಾರೆ. ಅಂದರೆ, ತೆರೆಯ ಮೇಲೆ ಶ್ರೀಕಾಂತ್ ನಾಟಕ, ತೆರೆಮರೆಯಲ್ಲಿ ರಾಮದಾಸ್ ಕೈಚಳಕ! ಈ ಕಳ್ಳ-ಮಳ್ಳ ಜೋಡಿಯ "ಎಸ್ ಅಂಡ್ ಎಸ್ ಇಂಫ್ರಾಸ್ಟಕ್ಚರ್" ಎಂಬ ಸಂಸ್ಥೆ ಪ್ರತೀದಿನ ಕೋಟಿಕೋಟಿ ವ್ಯವಹಾರ ನಡೆಸುತ್ತಾ ಮೂಡ ಬಾರದಷ್ಟು ಭೂಹಗರಣಗಳನ್ನು ನಡೆಸುತ್ತದೆ. ಇಂಥ ರಾಮದಾಸ್ ಕಳೆದ ಬಾರಿ ಚುನಾವಣೆಗೆ ನಿಂತಿದ್ದಾಗ ತನಗೆ ವಾಸ ಮಾಡಲು ಒಂದು ಸ್ವಂತ ಮನೆಯಿಲ್ಲ ಎಂದು ಅಫಿಡವಿಟ್ ಕೊಟ್ಟಿದ್ದರು! ಚುನಾವಣೆ ಖರ್ಚಿಗೆ ದುಡ್ಡಿಲ್ಲ ಎಂದು ಗೋಗರೆದಿದ್ದರು!


ಶ್ರೀಕಾಂತ್‌ನ ಎಸ್ ಅಂಡ್ ಎಸ್ ಇಂಫ್ರಾಸ್ಟಕ್ಚರ್

ಇವರ ತಮ್ಮ ಶ್ರೀಕಾಂತ್‌ನ ಕತೆ ಕೇಳಿ. 300 ಕೋಟಿ ಗುಳುಂ ಮಾಡಿದ ಕರ್ನಾಟಕ ರಾಜ್ಯ ಟೆಲಿಕಾಂ ನೌಕರರ ಸಹಕಾರಿ ಸಂಘಕ್ಕೂ ರಾಮದಾಸ್ ತಮ್ಮ ಶ್ರೀಕಾಂತನೇ ಸೂತ್ರಧಾರ. ಬಯಲಿಗೆ ಬಂದ ಒಂದೇ ಹಗರಣದಲ್ಲಿ ಬರೊಬ್ಬರಿ ಮುನ್ನೂರು ಕೋಟಿ ನುಂಗಿ ನೀರು ಕುಡಿದಿದ್ದಾನೆಂದರೆ ಬಯಲಿಗೆ ಬಾರದ ಇಂಥ ಅದೆಷ್ಟು ಪ್ರಕರಣಗಳಿವೆಯೋ ಆ ರಾಮದಾಸನೇ ಬಲ್ಲ. ಈತನ ಸಂಸ್ಥೆ ಮೈಸೂರಿನಾದ್ಯಂತ ಹತ್ತಾರು ಲೇಔಟ್‌ಗಳನ್ನು ನಿರ್ಮಿಸುತ್ತಿದೆ. ಶ್ರೀಕಾಂತ್ ಶಿಷ್ಯ ಮಾಜಿ ಕಮ್ಯೂನಿಸ್ಟ್ ಲೀಡರ್ ಪದ್ಮನಾಭ್ ಕೂಡ ರಾಮದಾಸ್ ನಡೆಸುತ್ತಿರುವ ಭೂದಂಧೆಯ ಬೇನಾಮಿ ಕುಳಗಳಲ್ಲಿ ಒಬ್ಬನಾಗಿದ್ದಾನೆ. ಈತ ವೆಂಕಟೇಶ್ವರ ಸಹಕಾರಿ ಗೃಹನಿರ್ಮಾಣ ಸಂಸ್ಥೆಗೆ ಸೂತ್ರದಾರ.



ಸಿದ್ದರಾಜುವಿನ ಸುಖಿ ಕನ್‌ಸ್ಟ್ರಕ್ಷನ್ಸ್ ಅಂಡ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್

ಸಾರಾ ಮಹೇಶನ ಡಿನೋಟಿಫಿಕೇಷನ್ ದಂಧೆಗಳು

ಮಾಸ್ಟರ್‌ಜೀ ಕುಮಾರಸ್ವಾಮಿಯವರ ಅಧಿಕಾರಾವಧಿಯಲ್ಲಿ ಡಿನೋಟಿಫೈ ದಂಧೆಯಲ್ಲಿ ಪಳಗಿದ್ದ ಸಾ.ರಾ.ಮಹೇಶ್ ಮಾಡಿರುವ ಡಿನೋಟಿಫಿಕೇಶನ್ ದಂಧೆಯ ಸ್ಯಾಂಪಲ್‌ಗಳನ್ನು ನೋಡಿ.

ತ.ಮ. ವಿಜಯಭಾಸ್ಕರ್ ವರದಿಯಲ್ಲಿ ರಾಮದಾಸ್ ಹೆಸರು ಕೇಳಿಬರುತ್ತಿದ್ದಂತೆಯೇ ಸಾ.ರಾ.ಮಹೇಶ್ ತನ್ನೆಲ್ಲಾ ವ್ಯವಹಾರಗಳನ್ನು ಗೌಪ್ಯವಾಗಿರಿಸಿದ್ದ. ಕುಮಾರಸ್ವಾಮಿ ಮುಖ್ಯಮಂತ್ರಿಯಾದೊಡನೆ ಬಿಜೆಪಿಯಿಂದ ದಳಕ್ಕೆ ಹಾರಿದ ಸಾ.ರಾ.ನನ್ನು ಕುಮಾರಸ್ವಾಮಿ ಮೂಡಾಕ್ಕೆ ಚೇರ್ಮನ್ ಆಗಿ ನೇಮಿಸಿದ್ದು, ಕುರಿಯನ್ನು ಕಾಯಲು ತೋಳನನ್ನು ನೇಮಿಸಿದಂತಾಗಿತ್ತು. 2007ರ ಮೇ 10 ರಂದು ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆಂದು ಮೀಸಲಿಟ್ಟಿದ್ದ ಬಂಡೀಪಾಳ್ಯ ಸರ್ವೆ ನಂ. 111 ರಲ್ಲಿ 8.28 ಎಕರೆ ಜಾಗವನ್ನು ರಾಮದಾಸ್‌ಗಾಗಿ ಡಿನೋಟಿಫೈ ಮಾಡಿಸಲಾಗಿದೆ. 16-07-2007ರಂದು ಮಣಿಪಾಲ್ ಠಕ್ಕರ್, ರಾಜೇಂದ್ರ ಲಾಲ್ ಠಕ್ಕರ್ ಎಂಬುವವರಿಗೆ ಸರ್ವೆ ನಂ 153/1, 153/2 ಇತ್ಯಾದಿಗಳಲ್ಲಿ 98 ಎಕರೆ (ಟಕ್ಕರ್ ಪ್ರಕರಣದ ಬಾಕ್ಸ್ ಐಟಮ್ ನೋಡಿ) ಡಿನೋಟಿಫೈ ಮಾಡಲಾಗಿದೆ. ಅದೇ ವರ್ಷ ಜೂನ್ 20 ರಂದು ವೈ.ವಿ. ರಾವ್ ಮೆ॥ ಬಿ.ವಿ.ಎಲ್. ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಇವರ ಹೆಸರಿನಲ್ಲಿ ಚಿಕ್ಕಳ್ಳಿ ಗ್ರಾಮದ ಸರ್ವೆ ನಂ. 68 ಮತ್ತು ಚೋರನಹಳ್ಳಿ ಗ್ರಾಮದ ಸರ್ವೆ ನಂ. 8, 10, 20 ರಿಂದ 91 ರವರೆಗೆ 120 ಎಕರೆ ಭೂಪ್ರದೇಶವನ್ನು ಡಿನೋಟಿಫೈ ಮಾಡಲಾಗಿದೆ. ಅಸಲಿಗೆ ವೈ.ವಿ.ರಾವ್ ಹೆಸರಿನಲ್ಲಿ ಡಿನೋಟಿಫೈ ಆಗಿದೆಯಾದರೂ ಇದರ ನಿಜವಾದ ವಾರಸುದಾರ ರಾಮದಾಸ್ ಶಿಷ್ಯನಾದ ಮಧುವನ ಗೃಹನಿರ್ಮಾಣ ಸಂಘದ ಡಿ.ಟಿ.ಪ್ರಕಾಶ್.

2007ರ ಜೂನ್ 21 ರಂದು ಸಹೃದಯ ಗೃಹ ನಿರ್ಮಾಣ ಸಹಕಾರ ಸಂಘಕ್ಕಾಗಿ ಸರ್ವೆ ನಂ. 65/1, 70/2 ರಲ್ಲಿನ ಜಮೀನನ್ನು ಪ್ರಾಧಿಕಾರದ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆಯಾದರೂ ಬೇಕಂತಲೇ ಎಷ್ಟು ಎಕರೆ ಎಂಬುದನ್ನು ನಮೂದಿಸಿಲ್ಲ, 27-09-2007ರಲ್ಲಿ ಭಾರತೀ ಯೋಗಧಾಮಕ್ಕೆ 21 ಎಕರೆ, 21-09-2007ರಲ್ಲಿ ಯಾಂದಳ್ಳಿ ಗ್ರಾಮದ ಸರ್ವೆ ನಂ. 19, 20, ಮತ್ತಿತರೆಗಳಲ್ಲಿ 22 ಎಕರೆ ಡಿನೋಟಿಫೈ ಮಾಡಿಸಿದ್ದಲ್ಲದೆ ದಿನಾಂಕ 06-10-2007 ರಲ್ಲಿ ವಿವಿಧ ಸರ್ವೆ ನಂಬರುಗಳಿಗೆ ಸಂಬಂಧಿಸಿದ 15 ಪ್ರಕರಣಗಳನ್ನು ಒಂದೇ ದಿನದಲ್ಲಿ ಡಿನೋಟಿಫೈ ಮಾಡಿಸಿ ತಂದಿರುತ್ತಾರೆ! ಜನತಾದಳ ಸರ್ಕಾರಾವಧಿಯ ಕೊನೆ ಗಳಿಗೆಯಲ್ಲಿ ಆತುರಾತುರವಾಗಿ ಮೂಡಾಕ್ಕೆ ಒಕ್ಕರಿಸಿದ ಈ ದಗಾಕೋರ ಕೆಲವೇ ದಿನಗಳಲ್ಲಿ ರೈತರ ಜಮೀನುಗಳನ್ನು ಅನಾಯಾಸವಾಗಿ ಭೂಗಳ್ಳರ ಕೈಸೇರುವಂತೆ ನೋಡಿಕೊಂಡಿದ್ದಾನೆ. ಇದೆಲ್ಲ ಸಾ.ರಾ. ಮಹೇಶನ ಅಧಿಕಾರಾವಧಿಯ ಭ್ರಷ್ಟಾಚಾರಕ್ಕೆ ಹಿಡಿದ ಸರಳಗನ್ನಡಿ.

ಶೋಭಕ್ಕ - ಸಿದ್ದರಾಜು ಜೋಡಿಯ ಹಗಲುದರೋಡೆಗಳು

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಸೋತು ಸುಣ್ಣವಾಗಿ ಕುಮಾರಸ್ವಾಮಿ ದರ್ಬಾರು ಮುಗಿಯುತ್ತಿದ್ದಂತೆ ಅಧಿಕಾರದ ಚುಕ್ಕಾಣಿ ಹಿಡಿದ ಬಿಜೆಪಿ, ಶೋಭಾ ಕರಂದ್ಲಾಜೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವೆಯನ್ನಾಗಿ ನೇಮಿಸಿದ್ದಲ್ಲದೆ, ಮೈಸೂರಿನವರೇ ಅಲ್ಲದ ಆಕೆಯನ್ನು ಮೈಸೂರು ಉಸ್ತುವಾರಿ ಸಚಿವೆಯನ್ನಾಗಿ ನೇಮಿಸಲಾಯಿತು. ಅದರ ಹಿಂದೆ ಸ್ಥಳೀಯರಾದ ಶಂಕರಲಿಂಗೇಗೌಡ ಮತ್ತು ರಾಮದಾಸ್ ಅವರನ್ನು ತುಳಿದು ಮೈಸೂರನ್ನು ಹಿಡಿತಕ್ಕೆ ತೆಗೆದುಕೊಳ್ಳಬೇಕೆಂಬ ಯಡ್ಡಿಯ ರಾಜಕೀಯ ಲೆಕ್ಕಾಚಾರಗಳು ಇದ್ದವು.

ಕರಂದ್ಲಾಜೆ ಉಸ್ತುವಾರಿ ಸಚಿವರಾಗುತ್ತಿದ್ದಂತೆ ಆಕೆಯ ಶಿಷ್ಯೋತ್ತಮ ಸಿದ್ದರಾಜು ಹುಲುಸಾಗಿ ಬೆಳೆಯುತ್ತಿದ್ದ ಮೈಸೂರಿನ ಭೂದಂಧೆಗೆ ಧುಮುಕಿದ್ದಾನೆ. ಇದರಿಂದ ರಾಮದಾಸ್ ಮತ್ತು ಸಾರಾ ಮಹೇಶ್‌ಗೆ ಭೂಕಬಳಿಕೆಯಲ್ಲಿ ಒಂದಿಷ್ಟು ಹಿನ್ನಡೆಯಾಗಿ ಸಿದ್ಧರಾಜು-ಶೋಭಕ್ಕರ ಜೋಡಿ ಮೇಲುಗೈ ಸಾಧಿಸುತ್ತದೆ; ಕೋಟ್ಯಂತರ ಬೆಲೆಬಾಳುವ ಸಾವಿರಾರು ಎಕರೆ ಭೂಮಿ ಈ ಜೋಡಿಯ ಪಾಲಾಗುತ್ತದೆ. ಪ್ರಾಮಾಣಿಕತೆ ಮತ್ತು ದಕ್ಷತೆಗೆ ಹೆಸರಾಗಿದ್ದ ಡೆಮಾಲಿಷನ್ ಖ್ಯಾತಿಯ ಮಣಿವಣ್ಣನ್ ಎಂಬ ಜಿಲ್ಲಾಧಿಕಾರಿ ಹಲ್ಲುಕಿತ್ತ ಹಾವಿನಂತಾಗಿ ಶೋಭಾ-ಸಿದ್ಧರಾಜು ಜೋಡಿಯ ಭೂಕೊಳ್ಳೆಗೆ ಬೆಂಗಾವಲಾಗಿ ನಿಲ್ಲುವ ಹೀನಸ್ಥಿತಿಗೆ ಬಂದಿದ್ದಾರೆ.

ಸಿದ್ದರಾಜುನ ಹಗಲು ದರೋಡೆಯ ಪಾರ್ಟನರ್ ಎಂದರೆ ಅವನ ಮಾರ್ವಾಡಿ ಗೆಳೆಯ ಗೌತಮ್‌ಚಂದ್. ಇವರಿಬ್ಬರು ಜಂಟಿಯಾಗಿ ನಡೆಸುತ್ತಿರುವ ಸುಖೀ ಕನ್‌ಸ್ಟ್ರಕ್ಷನ್ಸ್ ಅಂಡ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆ ಅದೆಷ್ಟು ಸಾವಿರ ಎಕರೆಯನ್ನು ನುಂಗಿಹಾಕಿದೆ ಎಂಬ ಲೆಕ್ಕಾಚಾರ ಖುದ್ದು ಮಣಿವಣ್ಣನ್‌ಗೂ ಗೊತ್ತಿಲ್ಲ. ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘ, ರೂಪಾ ಹೌಸಿಂಗ್ ಬಿಲ್ಡಿಂಗ್ ಸೊಸೈಟಿ, ಮೈಸೂರು ತಾಲ್ಲೂಕು ಕೊ ಆಪರೇಟೀವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್, ದೀಪಾ ಹೌಸ್ ಬಿಲ್ಡಿಂಗ್ ಸೊಸೈಟಿ, ಪರಶುರಾಮ ಹೌಸ್ ಬಿಲ್ಡಿಂಗ್ ಸೊಸೈಟಿ, ಗಾನಭಾರತಿ ಹೌಸ್ ಬಿಲ್ಡಿಂಗ್ ಸೊಸೈಟಿ, ಹೆಲ್ತ್ ಅಂಡ್ ಫ್ಯಾಮಿಲಿ ವೆಲ್ಫೇರ್ ಹೌಸ್ ಬಿಲ್ಡಿಂಗ್ ಸೊಸೈಟಿ ಸೇರಿದಂತೆ 15 ಕ್ಕೂ ಹೆಚ್ಚು ಸಹಕಾರಿ ಗೃಹನಿರ್ಮಾಣ ಸಂಸ್ಥೆಗಳಿಗೆ ಸುಖೀ ಕನ್‌ಸ್ಟ್ರಕ್ಷನ್ ಭೂ ಅಭಿವೃದ್ಧಿ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ.

ಕರಂದ್ಲಾಜೆ ಕೃಪಾಕಟಾಕ್ಷದಿಂದ ಸಿದ್ದರಾಜು ಎಂಎಲ್‌ಸಿ ಆಗಿ ಕೂಡ ಸದಸ್ಯತ್ವ ಪಡೆದುಕೊಂಡಿದ್ದಾನೆ. ರಾಜಕೀಯಕ್ಕಿಳಿದಾಗ ತಾನೊಬ್ಬ ಲ್ಯಾಂಡ್ ಡೆವಲಪ್ಪರ್ ಆಗಿರುವುದರಿಂದ ಆಕ್ಷೇಪಗಳು ಕೇಳಿಬರುವ ಸಾಧ್ಯತೆಯಿರುವುದರಿಂದ ತನ್ನ ಗೆಬರು ಅಡ್ಡೆ ಸುಖೀ ಕನ್‌ಸ್ಟ್ರಕ್ಷನ್‌ಗೆ ರಾಜೀನಾಮೆ ಕೊಟ್ಟು ತನ್ನ ಬಾಮೈದುನನ್ನು ಕಾರ್ಯನಿರ್ವಾಹಕ ನಿರ್ದೇಶಕನನ್ನಾಗಿ ಕೂರಿಸಿ ಬೇನಾಮಿ ದಂಧೆಯಲ್ಲಿ ತೊಡಗಿದ್ದಾನೆ.

ಮೂಡಾದ ಅಧಿಕಾರಿಗಳು ಭೂದಂಧೆಯಲ್ಲಿ ಎಷ್ಟರ ಮಟ್ಟಿಗೆ ಪಳಗಿದ್ದಾರೆಂದರೆ ಅವರಿಗೆ ಎಲ್ಲೆಲ್ಲಿ ಯಾವ್ಯಾವ ನಿಯಮಗಳನ್ನು ಹೇಗೆ ಉಲ್ಲಂಘಿಸಬೇಕೆಂಬುದು ಕರಗತವಾಗಿಬಿಟ್ಟಿದೆ. ಒಂದು ಉದಾಹರಣೆಯನ್ನೇ ನೋಡಿ. ಯಾವುದೇ ಪ್ರಮುಖ ವಿಚಾರವನ್ನು ಮೂಡಾದ ಪೂರ್ಣ ಸಭೆಯಲ್ಲಿ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕು. ಆದರೆ, ಎಲ್ಲರೂ ಇದ್ದಾಗ ಪ್ರಮುಖ ವಿಚಾರಗಳನ್ನು ಚರ್ಚೆಗೆ ತೆಗೆದುಕೊಂಡರೆ ಇವರ ಭೂದಂಧೆ ಹೊರಬೀಳುತ್ತದೆ, ಸಭೆಯಲ್ಲಿದ್ದವರು ವಿರೋಧ ವ್ಯಕ್ತಪಡಿಸಬಹುದು ಎಂಬ ಕಾರಣಕ್ಕೆ ಇಂತಹ ವಿಚಾರಗಳನ್ನು ಮೂಡಾ ಸಭೆಯ ನಂತರ ಹೆಚ್ಚುವರಿ ವಿಷಯಗಳಾಗಿ ಚರ್ಚಿಸಿ ನಿರ್ಣಯ ತೆಗೆದುಕೊಳ್ಳುತ್ತಾರೆ.

2008ರ ಡಿಸೆಂಬರ್ 18 ರಂದು ನಡೆದ ಮೂಡಾ ಸಭೆ ಇದಕ್ಕೊಂದು ಸ್ಪಷ್ಟ ಉದಾಹರಣೆ. ಅಂದು ಎಲ್ಲಾ ಸದಸ್ಯರೂ ಮಧ್ಯಾಹ್ನ ಊಟ ಮುಗಿಸಿ ಹೋದ ಮೇಲೆ ಪ್ರಮುಖ ವಿಷಯಗಳನ್ನೇ ಹೆಚ್ಚುವರಿ ವಿಷಯವನ್ನಾಗಿ ಎರಡನೇ ಅಧಿವೇಶನದಲ್ಲಿ ಮಂಡಿಸುತ್ತಾರೆ. ಆಗ ಇದ್ದವರು ನಾಲ್ಕೇ ಜನ: ಮಣಿವಣ್ಣನ್, ಮೂಡಾ ಆಯುಕ್ತ ಜಯಣ್ಣ, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಮತ್ತು ಸಿದ್ದರಾಜು. ಹೆಚ್ಚುವರಿಯಾಗಿ ಇಟ್ಟ ಹತ್ತು ವಿಷಯಗಳಲ್ಲಿ ಪ್ರಮುಖವಾದದ್ದು ಠಕ್ಕರ್‌ಲಾಲ್‌ನ 98 ಎಕರೆ, ಸರ್ಕಾರಿ ನೌಕರರ ಗೃಹನಿರ್ಮಾಣ ಸಹಕಾರ ಸಂಘದ 130 ಎಕರೆ ಹಾಗೂ ರಾಮಕೃಷ್ಣ ಗೃಹನಿರ್ಮಾಣ ಸಂಘದ 50 ಎಕರೆ 16 ಗುಂಟೆ ಸೇರಿದಂತೆ ನಗರಕ್ಕೆ ಹತ್ತಿರವಾದ ಅತ್ಯಂತ ಬೆಲೆಬಾಳುವ 156 ಎಕರೆ ಭೂಮಿಯನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಪರಿವರ್ತಿಸುವ ನಿರ್ಣಯ ಕೈಗೊಂಡಿರುವುದು. 2008 ರ ಸೆಪ್ಟಂಬರ್ 15 ರಂದು 73 ಹೆಚ್ಚುವರಿ ವಿಷಯಗಳನ್ನು ತಂದು ಅದರಲ್ಲಿ ಮರಟಿಕ್ಯಾತನಹಳ್ಳಿ ಬಳಿಯ ಸಿದ್ದರಾಜುವಿನ ಸುಖೀ ಕನ್‌ಸ್ಟ್ರಕ್ಷನ್ ಡೆವಲಪರ್ಸ್‌ನ ಯೋಜನೆಯಾಗಿರುವ ದೀಪಾ ಗೃಹನಿರ್ಮಾಣ ಸಹಕಾರ ಸಂಘಕ್ಕೆ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಇದಕ್ಕೆ ಸಂಬಂಧಿಸಿದ ಶುಲ್ಕವನ್ನು ಪಾವತಿಸಿಕೊಂಡು ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡುವಂತೆ ತೀರ್ಮಾನಿಸಲಾಗಿದೆ. 126 ಎಕರೆ 35 ಗುಂಟೆ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಪರಿವರ್ತನೆಗೆ ನಿರ್ಣಯ ತೆಗೆದುಕೊಳ್ಳುತ್ತಾರೆ. ಆದರೆ ಮೂಡಾಕ್ಕೆ, ದೀಪಾ ಹೌಸಿಂಗ್ ಸೊಸೈಟಿ ಪಾವತಿಸಬೇಕಾದ ಶುಲ್ಕದಲ್ಲಿ ಭಾರೀ ಅವ್ಯವಹಾರ ನಡೆದಿದ್ದು ನಗರದ ಭೂಮಾಫಿಯಾ ಬುಸುಗುಡುತ್ತಿದೆ.

ಸಾರಾಂಶದಲ್ಲಿ ಹೇಳುವುದಾದರೆ ಮೈಸೂರಿನ ಭೂಮಾಫಿಯಾಕ್ಕೆ ಬಡ ಮೈಸೂರಿಗರು ಬಲಿಯಾಗಿ ಹೋಗಿದ್ದಾರೆ. ತಲೆ ಮೇಲೊಂದು ಸ್ವಂತ ಸೂರಿಗಾಗಿ ಇಪ್ಪತ್ತೈದು ವರ್ಷಗಳಿಂದ ಕ್ಯೂನಲ್ಲಿ ನಿಂತಿರುವ ಒಂದೂವರೆ ಲಕ್ಷ ಮೈಸೂರಿಗರು ಎಷ್ಟೂ ಅಂತ ಸಹಿಸಿಕೊಂಡಿರುತ್ತಾರೆ. ಅವರ ಸಹನೆಯ ಕಟ್ಟೆಯೊಡೆಯುವ ದಿನಗಳು ಹತ್ತಿರವಾಗುತ್ತಿವೆ. ಅಂದರೆ, ಮೈಸೂರಿನ ಭೂಮಾಫಿಯಾ ದೊರೆಗಳೆಲ್ಲರನ್ನೂ ಬೀದಿಯಲ್ಲಿ ಅಟ್ಟಾಡಿಸಿಕೊಂಡು ಬಡಿಯುವ ದಿನಗಳು ಹತ್ತಿರವಾಗುತ್ತಿವೆಯೆಂದೇ ಅರ್ಥ.

■ ಮಹಿಂಷ, ಮೈಸೂರು


ಹೆಂಗಿದ್ದ ರಾಮದಾಸ್ ಹೆಂಗಾದ ಗೊತ್ತಾ?

ಮೈಸೂರಿನ ಆಗರ್ಭ ಶ್ರೀಮಂತ ಕೋಟ್ಯಾಧಿಪತಿಗಳಲ್ಲಿ ಒಬ್ಬನಾಗಿರುವ ಬಿಜೆಪಿ ಎಮ್ಮೆಲ್ಲೆ ಹಾಗೂ ಯಡ್ಡಿಯ ಸಂಸದೀಯ ಕಾರ್ಯದರ್ಶಿ ರಾಮದಾಸ್ ಈ ಹೊತ್ತು ಏನಿಲ್ಲವೆಂದರೂ ನಾಲ್ಕು ಸಾವಿರ ಕೋಟಿ ರೂಪಾಯಿಗೆ ತೂಗುತ್ತಾನೆ. ಆದರೆ, ಈತ ಎಷ್ಟು ಚಾಲಾಕಿ ಎಂದರೆ ಈ ಯಾವ ಆಸ್ತಿಯನ್ನೂ ಆತ ತನ್ನ ಸ್ವಂತ ಹೆಸರಿನಲ್ಲಿಟ್ಟುಕೊಂಡಿಲ್ಲ, ಎಲ್ಲವೂ ನಡೆಯುತ್ತಿರುವುದು ಇವನ ತಮ್ಮ ಶ್ರೀಕಾಂತ್ ಹೆಸರಿನಲ್ಲಿ, ಶ್ರೀಕಾಂತ್ ತೆರೆಯ ಮೇಲೆ ಕುಣಿಯುತ್ತಿದ್ದರೆ ತೆರೆಯ ಹಿಂದೆ ರಾಮದಾಸನ ಕೈಚಳಕ ನಡೆಯುತ್ತಿರುತ್ತದೆ.

ಆದ್ದರಿಂದಲೇ ಕಳೆದ ಚುನಾವಣೆಯಲ್ಲಿ ರಾಮದಾಸ್ ತನಗೊಂದು ಸ್ವಂತ ಮನೆಯಿಲ್ಲ ಎಂದು ತನ್ನ ಆಸ್ತಿವಿವರಗಳ ಅಫಿಡವಿಟ್ ಕೊಟ್ಟಿದ್ದ, ಚುನಾವಣಾ ಖರ್ಚಿಗಾಗಿ ಆಯೋಗ ನಿಗದಿ ಮಾಡಿದ ಹಣವನ್ನು ಖರ್ಚು ಮಾಡುವುದಕ್ಕೂ ತನ್ನಲ್ಲಿ ದುಡ್ಡಿಲ್ಲ ಎಂದು ಗೋಗರೆಯುವ ನಾಟಕವಾಡಿದ್ದ.

ರಾಮದಾಸ್ ಹುಟ್ಟುತ್ತಲೇ ಕುಬೇರನಾಗಿ ಹುಟ್ಟಿದವನಲ್ಲ, ಅವರಪ್ಪ 'ನಾದ ಬ್ರಹ್ಮ' ಬ್ರ್ಯಾಂಡ್ ಅಗರ್‌ಬತ್ತಿ ಬಂಡಲ್‌ಗಳನ್ನು ಸೈಕಲ್ ಮೇಲೆ ಹಾಕಿಕೊಂಡು ಮನೆ ಮನೆ ತಿರುಗಿ ಮಾರುತ್ತಿದ್ದರು. ಈ ರೀತಿ ಕಡು ಬಡತನದಲ್ಲಿ ಬದುಕುತ್ತಿದ್ದ ರಾಮದಾಸ್ ಕುಟುಂಬ ಈ ಹೊತ್ತು ನಾಲ್ಕು ಸಾವಿರ ಕೋಟಿ ರೂಪಾಯಿಗಳಷ್ಟು ಅಗಾಧ ಸಂಪತ್ತಿನ ಒಡೆಯನಾಗಿದ್ದ ಎಂದರೆ ಮೈಸೂರನ್ನು ಅವರು ಅದೆಷ್ಟು ಕೊಳ್ಳೆ ಹೊಡೆದಿರಬೇಡ? ■

ಮಂಡ್ಯ: ಹೆಂಗಿದ್ದ ಮಾದೇಗೌಡರು ಹೆಂಗಾಗಿ ಹೋದ್ರು!


ಮಾದೇಗೌಡ


ಒಂದು ಕಾಲದಲ್ಲಿ ಜಿ.ಮಾದೇಗೌಡರು ಎಂದರೆ ಮಂಡ್ಯ ಜಿಲ್ಲೆಯಾದ್ಯಂತ ಅಪಾರ ಗೌರವವಿತ್ತು, ಮಂಡ್ಯದಲ್ಲಿನ ರಾಜಕೀಯ ವ್ಯವಸ್ಥೆಯೇ ಕೊಳೆತ ಕೊಚ್ಚೆಗುಂಡಿಯಂತಾಗಿದ್ದರೂ ಗಾಂಧಿವಾದಿ ಮಾದೇಗೌಡರು ಒಂದಿಷ್ಟು ಮರ್ಯಾದೆ ಕಾಪಾಡಿಕೊಂಡು ಬಂದಿದ್ದರು. ಆದರೆ ಈ ಹೊತ್ತು ಅವರ ಪರಿಸ್ಥಿತಿ ಎಷ್ಟು ಹೀನಾಯವಾಗಿದೆ ಎಂದರೆ ಮದ್ದೂರು ಉಪಚುನಾವಣೆಯ ಫಲಿತಾಂಶ ಹೊರಬಿದ್ದು ಜೆಡಿಎಸ್‌ನ ಕಲ್ಪನಾ ಸಿದ್ದರಾಜು ಬಿಜೆಪಿಯ ತಮ್ಮಣ್ಣರ ವಿರುದ್ಧ ಜಯ ಗಳಿಸುತ್ತಿದ್ದಂತೆಯೇ ಸೋತ ಬಿಜೆಪಿಯ ತಮ್ಮಣ್ಣನ ಗ್ಯಾಂಗು ಮಾದೇಗೌಡರನ್ನು ಅವರದ್ದೇ ಗಾಂಧಿಭವನದಲ್ಲಿ ಎಳೆದಾಡಿ, ಮೈಮೇಲಿನ ಬಟ್ಟೆ ಹರಿದು ಬಡಿದಿದ್ದರೂ ಅವರ ಪರವಾಗಿ ಮಾತನಾಡಲು ಒಂದು ಹುಳ ಕೂಡ ಬಂದಿಲ್ಲ. ಕೆಲ ರಾಜಕಾರಣಿಗಳು ಈ ಘಟನೆಯನ್ನು ಖಂಡಿಸಿರುವುದನ್ನು ಬಿಟ್ಟರೆ ಮಂಡ್ಯದ ಜನಸಾಮಾನ್ಯ ಮಾತ್ರ 'ಅವರಿಗೆ ಹಾಗಾಗಿದ್ದು ಒಳ್ಳೆಯದೇ ಆಯ್ತು ಬಿಡಿ' ಎನ್ನುವಷ್ಟರ ಮಟ್ಟಿಗೆ ಮಾದೇಗೌಡರ ಜನಪ್ರಿಯತೆ ಮಣ್ಣುಪಾಲಾಗಿದೆ. ಅದಕ್ಕೆ ಮೂಲ ಕಾರಣ ಮಾದೇಗೌಡರೇ ಮಾಡಿದ ಹೊಲಸು ರಾಜಕಾರಣ ಎಂದರೆ ತಪ್ಪಾಗಲಾರದು.

ಮಾದೇಗೌಡರ ಮಗ ಮಧು, ತಮ್ಮಿಂದ ಕೋಟಿಗಟ್ಟಲೆ ಹಣ, ಎಂಎಲ್‌ಸಿಗಿರಿ ಎಲ್ಲವನ್ನೂ ಪಡೆದು ಚುನಾವಣೆಯಲ್ಲಿ 'ಒಳೇಟು' ಕೊಟ್ಟದ್ದೇ ತಾನು ಸೋಲಲು ಕಾರಣ ಎಂದು ತಮ್ಮಣ್ಣ ಮತ್ತು ಸ್ಥಳೀಯ ಬಿಜೆಪಿ ನಾಯಕರು ಅಂದುಕೊಂಡಿದ್ದಾರೆ. ಈ ಒಳೇಟಿಗೆ ಪ್ರತ್ಯುತ್ತರವಾಗಿಯೇ ಮಾದೇಗೌಡರಿಗೆ ಹೊರೇಟು ಕೊಡಲಾಗಿದೆ.

ಯಾವ ರೀತಿ ನೋಡಿದರೂ ತಮ್ಮಣ್ಣನ ಸೋಲಿಗೆ ಮಾದೇಗೌಡರು ಮುಖ್ಯ ಕಾರಣ ಅಲ್ಲವೇ ಅಲ್ಲ, 19 ಸಾವಿರಕ್ಕೂ ಹೆಚ್ಚು ಮತಗಳಿಂದ ಗೆದ್ದಿರುವ ಕಲ್ಪನಾ ಗೆಲುವಿಗೆ ಮೊಟ್ಟ ಮೊದಲಿನ ಕಾರಣ ತಮ್ಮಣ್ಣ ಹಾಗೂ ಬಿಜೆಪಿಯ ಹಣದ ಮದ ಹಾಗೂ ಹಲ್ಕಟ್ ರಾಜಕೀಯವೇ ಆಗಿದೆ. ಇಲ್ಲವಾದರೆ ಒಳೇಟಿನಿಂದಲೇ 19 ಸಾವಿರ ಲೀಡ್ ಕೊಡಿಸಬಲ್ಲ ಸಾಮರ್ಥ್ಯ ಮಾದೇಗೌಡರಿಗಾಗಲೀ ಅಥವಾ ಅವರ ಮಗ ಮಧುಗಾಗಲೀ ಇಲ್ಲ. ಹತ್ತು ವರ್ಷದ ಹಿಂದೆಯೇ ಮಾದೇಗೌಡರು ಮಂಡ್ಯದಲ್ಲಿ ಅಂತಹ ತಾಕತ್ತನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಆದ್ದರಿಂದಲೇ ತಮ್ಮ ಗತ್ತನ್ನು ಬಿಟ್ಟುಕೊಡದಿದ್ದರೂ, ರಾಜಕೀಯವನ್ನು ಮಗನಿಗೆ ಬಿಟ್ಟ ಗೌಡರು, ಗಾಂಧಿಭವನ ಕಟ್ಟಿಕೊಂಡು ಭಜನೆ ಮಾಡುತ್ತಾ ಕಾಲಕಳೆಯುತ್ತಿದ್ದರು. ಅದೇ ಗಾಂಧಿಭವನದ ಗಾಜುಗಳನ್ನೇ ಪುಡಿಗೈದು, ಮಾದೇಗೌಡರಿಗೆ ಹೀನಾಮಾನಾ ಬೈದು ಅವರ ಮೇಲೆ ಹಲ್ಲೆ ನಡೆಸುವಷ್ಟರ ಮಟ್ಟಿಗೆ ಪರಿಸ್ಥಿತಿ ಬಂದದ್ದು ಹೇಗೆ ಎಂಬುದು ನೋಡಬೇಕೆಂದರೆ ತಮ್ಮಣ್ಣ ಮತ್ತು ಮಾದೇಗೌಡರ ಜಿದ್ದಾಜಿದ್ದಿಯನ್ನು ಒಮ್ಮೆ ಅವಲೋಕಿಸಬೇಕು.

ಮದ್ದೂರು ಮತ್ತು ಮಳವಳ್ಳಿ ತಾಲೂಕುಗಳೆರಡರಲ್ಲೂ ಪಾಲು ಹೊಂದಿದ್ದ ಕಿರುಗಾವಲು ಕ್ಷೇತ್ರದಿಂದಲೇ ಜಿ.ಮಾದೇಗೌಡರು ದಶಕಗಳ ಹಿಂದೆ ವಿಧಾನಸಭೆಗೆ ಆರಿಸಿ ಬಂದಿದ್ದರು. ಮದ್ದೂರು ತಾಲೂಕಿನ ಚಿಕ್ಕರಸಿನಕೆರೆ ಹೋಬಳಿಯ ಮೂಲದ ಮಾದೇಗೌಡರು ಇಲ್ಲಿಂದಲೇ ಗೆದ್ದು ಮಂತ್ರಿಯೂ ಆಗಿ ನಂತರ ಎಂಪಿಗೆ ಪ್ರಮೋಷನ್ ತೆಗೆದುಕೊಂಡಿದ್ದರು. ಆ ನಂತರ ಇಲ್ಲಿಂದ ಕೆ.ಎನ್. ನಾಗೇಗೌಡರೂ ಸೇರಿದಂತೆ ಹಲವರು ಆರಿಸಿ ಬಂದಿದ್ದರು. ಕಾವೇರಿ ಚಳವಳಿಯ ಕಾರಣದಿಂದ ರಾಜ್ಯಮಟ್ಟದ ಪ್ರಚಾರ ಗಿಟ್ಟಿಸಿದ್ದ ಮಾದೇಗೌಡರಿಗೆ ಜಿಲ್ಲೆಯಲ್ಲಿ ಆತ್ಮಾನಂದ ಬಿಟ್ಟರೆ ಸ್ವಂತ ಹಿಂಬಾಲಕರು ಅನ್ನಲಿಕ್ಕೆ ಇನ್ಯಾವ ನಾಯಕರೂ ಇರಲಿಲ್ಲ, ತನ್ನ ಕಾಲ ಮುಗಿಯಿತು ಎಂದು ಲೆಕ್ಕ ಹಾಕಿ ಮನೆಯಲ್ಲಿ ಕೂರಲು ತಯಾರಾಗುವಷ್ಟರಲ್ಲಿ ಮಗ ಮಧು ತಯಾರಾಗಿದ್ದ. ಎಲ್ಲಾ ಪಿತಾಶ್ರೀಗಳಂತೆ ಮಾದೇಗೌಡರೂ ತಮ್ಮ ಪುತ್ರರತ್ನನಿಗೆ ಕಿರುಗಾವಲಿನ ಸಿಂಹಾಸನ ಬಿಟ್ಟುಕೊಡಬೇಕೆಂದುಕೊಂಡು ನೋಡಿದರೆ, ಅಲ್ಲಿ ಡಿ.ಸಿ.ತಮ್ಮಣ್ಣ ವಿರಾಜಮಾನರಾಗಿದ್ದರು.

ಈ ತಮ್ಮಣ್ಣನೂ ಚಿಕ್ಕರಸಿನಕೆರೆಯ ಮೂಲದವರೇ. ಕೆಐಎಡಿಬಿಯಲ್ಲಿ ಯಥೇಚ್ಛ ಅಮೇಧ್ಯ ತಿಂದು ಕೊಬ್ಬಿದ್ದ ತಮ್ಮಣ್ಣ ಮಾದೇಗೌಡರ ದಶಕಗಳ ರಾಜಕಾರಣ ಮತ್ತು ನಾಗೇಗೌಡರ ಡೈನಾಮಿಸಂಅನ್ನೂ ಮೀರಿಸುವಂತೆ ಕಿರುಗಾವಲನ್ನು ಆವರಿಸಿಕೊಂಡಿದ್ದರು. ಎಸ್.ಎಂ.ಕೃಷ್ಣರ ಗೆಳೆತನ ಮತ್ತು ದೇವೇಗೌಡರ ಬೀಗತನದ ರಕ್ಷೆಯೂ ಜೊತೆಗಿತ್ತು. ಹೀಗಾಗಿ ಮಧುವಿನ ಆರಂಗೇಟ್ರಂಗೆ ಕಾಂಗ್ರೆಸ್ಸಿನೊಳಗೆ ತಮ್ಮಣ್ಣ ದೊಡ್ಡ ಅಡ್ಡಿಯಾಗಿದ್ದರು. ಇಷ್ಟು ವರ್ಷಗಳ ಕಾಲ ಕಾಂಗ್ರೆಸ್ ರಾಜಕಾರಣ ಬಿಟ್ಟು ಬೇರೆ ಪಕ್ಷಗಳ ಕಡೆಗೆ ಮಾದೇಗೌಡರೂ ನೋಡಲಿಲ್ಲ. ಹೋಗಬೇಕೆಂದುಕೊಂಡರೂ ಅಲ್ಲಿ ನಾಗೇಗೌಡರು ಮತ್ತು ಅವರ ಸಾವಿನ ನಂತರ ನಾಗಮಣಿ ನಾಗೇಗೌಡರು ಕಿರುಗಾವಲಿನಲ್ಲಿದ್ದರು.


ಡಿ.ಸಿ. ತಮ್ಮಣ್ಣ

ಹೀಗಾಗಿ ತಮ್ಮಣ್ಣನ ಮೇಲೆ ಮಾದೇಗೌಡರಿಗೆ ಅಂದಿನಿಂದಲೂ ಸಿಟ್ಟು ವಿಪರೀತ. ಆತನನ್ನು ಅಲ್ಲಿಂದ ಎತ್ತಾಕಲು ಅಂದು ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣರ ಶ್ರೀರಕ್ಷೆ ಅಡ್ಡಿಯಾಗಿತ್ತು, ಈ ಕಾರಣಕ್ಕೂ ಎಸ್.ಎಂ. ಮೇಲೆ ಮಾದೇಗೌಡರು ಮುನಿಸಿಕೊಂಡಿದ್ದರು. ಆದರೆ ಇದೇ ಸಂದರ್ಭದಲ್ಲಿ ಬರಗಾಲ ಮತ್ತು ಕಾವೇರಿ ಚಳವಳಿಯು ಅವರಿಗೆ ವರದಾನವಾಗಿ ಬಂತು. ಬರವಿದ್ದುದರಿಂದ ತಮಿಳುನಾಡಿಗೆ ನೀರು ಬಿಡಲು ಮಂಡ್ಯದಲ್ಲಿ ತೀವ್ರ ವಿರೋಧವಿತ್ತು. ಸುಪ್ರೀಂಕೋರ್ಟ್ ನಿರ್ದೇಶನ ಪಾಲಿಸಬೇಕಿದ್ದ ಮುಖ್ಯಮಂತ್ರಿ ಕೃಷ್ಣರಿಗೆ ಇದು ತೀವ್ರ ಮುಜುಗರ ತಂದಿತ್ತು. ನೀರು ಬಿಟ್ಟು ವಿರೋಧ ಕಟ್ಟಿಕೊಂಡ ಮೇಲೆ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆಯನ್ನು ಹಾಕಿಕೊಂಡರು. ಅದು ಬಿಡದಿ ತಲುಪುವಷ್ಟರಲ್ಲಿ ಮಾದೇಗೌಡರನ್ನು ಕರೆಸಿಕೊಂಡು ಮಾತನಾಡಿದರು. ಆಗಲೇ ಇಬ್ಬರ ನಡುವೆ ಒಂದು ಹಂತಕ್ಕೆ ವ್ಯವಹಾರ ಕುದುರಿಕೊಂಡಿತ್ತು, ಮಂಡ್ಯದಲ್ಲೇ ಸಮಾವೇಶವೊಂದನ್ನು ನಡೆಸಿದ ಕೃಷ್ಣರ ವಿರುದ್ಧ ಹೆಚ್ಚಿನ ವಿರೋಧವನ್ನು ಮಾದೇಗೌಡರು ಮಾಡಬಾರದು, ಬದಲಿಗೆ ಮಧು ಮಾದೇಗೌಡನಿಗೆ ಮುಂದಿನ ಚುನಾವಣೆಯಲ್ಲಿ ಕಿರುಗಾವಲಿನಿಂದ ಟಿಕೆಟ್ ಕೊಡಬೇಕೆಂದು 'ಒಳಒಪ್ಪಂದ' ಆಯಿತು.

ಆದರೆ ತಮ್ಮಣ್ಣನನ್ನು ಕೈಬಿಡದ ಕೃಷ್ಣ ಆತನಿಗೆ ಮದ್ದೂರು ಕ್ಷೇತ್ರದ ಟಿಕೆಟ್ ಕೊಟ್ಟರು. 2004ರ ಚುನಾವಣೆಯಲ್ಲಿ ತಮ್ಮಣ್ಣ ಮದ್ದೂರಿನಿಂದ ಗೆದ್ದುಬಂದರೆ, ಮಧು ಕಿರುಗಾವಲಿನಲ್ಲಿ ಸೋತರು. ಈ ಸೋಲಿಗೂ ತಮ್ಮಣ್ಣ ಕಾರಣ ಎಂದು ಮಾದೇಗೌಡರು ನಂಬಿಕೊಂಡಿದ್ದರು. ಅದರ ಜೊತೆಗೆ ಮಾದೇಗೌಡರ ಮೇಲೆ ಈ ಹಿಂದೆಯೇ ಒಮ್ಮೆ ಭಾರತೀನಗರದಲ್ಲಿ ತಮ್ಮಣ್ಣ ಹಲ್ಲೆ ಮಾಡಿಸಿದ್ದರು. ಇವೆಲ್ಲದರಿಂದ ಕುದಿಯುತ್ತಿದ್ದ ಮಧು ಮತ್ತು ಮಾದೇಗೌಡರಿಗೆ ಮತ್ತೆ ಕಷ್ಟ ಬಂದಿದ್ದು 2008ರಲ್ಲಿ ಕಿರುಗಾವಲು ಕ್ಷೇತ್ರವೇ ರದ್ದಾದಾಗ. ಈಗ ಮತ್ತೆ ಮದ್ದೂರಿನ ಟಿಕೆಟ್‌ಗಾಗಿ ತಮ್ಮಣ್ಣ ಮತ್ತು ಮಧು ನಡುವೆ ಕುಸ್ತಿ ನಡೆಯಿತು. ಎಲ್ಲಾ ಕಡೆ ಸಿಟಿಂಗ್ ಎಂಎಲ್‌ಎಗಳಿಗೇ ಟಿಕೆಟ್ ಕೊಡಬೇಕೆಂಬ ಕಾಂಗ್ರೆಸ್ ಹೈಕಮಾಂಡ್‌ನ ತೀರ್ಮಾನದಿಂದಾಗಿ ತಮ್ಮಣ್ಣರಿಗೇ ಟಿಕೆಟ್ ಸಿಕ್ಕಿತು. ಮಧು ಬಿಜೆಪಿ ಸೇರಿ ಅಲ್ಲಿಂದ ಟಿಕೆಟ್ ತಂದರು. ಈ ನಡುವೆ ಸ್ವತಃ ಮಾದೇಗೌಡರೇ ಕೆಐಎಡಿಬಿಯ ತಮ್ಮಣ್ಣರ ಅಕ್ರಮಗಳ ತನಿಖೆಗೆ ಒತ್ತಾಯಿಸಿ ಹೈಕೋರ್ಟಿನಲ್ಲಿ ಕೇಸು ಜಡಿದಿದ್ದರು.

ವಾಸ್ತವದಲ್ಲಿ ಮಗ ಬಿಜೆಪಿ ಸೇರುವುದು ಮಾದೇಗೌಡರಿಗೆ ಅಷ್ಟು ಇಷ್ಟವಿರಲಿಲ್ಲ. ಆದರೆ ಬೇರೆ ದಾರಿಯಿರಲಿಲ್ಲ, 40-50 ವರ್ಷ ಕಾಂಗ್ರೆಸ್‌ನಲ್ಲಿದ್ದ ಮಾದೇಗೌಡರಿಗೆ ಬಿಜೆಪಿ ಸರಿ ಹೊಂದುತ್ತಲೂ ಇರಲಿಲ್ಲ. ಅದರ ಜೊತೆಗೆ ಗಾಂಧಿವಾದಿ ಮಾದೇಗೌಡರು ಗಾಂಧಿಯನ್ನು ಕೊಂದ ಪಕ್ಷಕ್ಕೆ ಹೋಗಿ ಸೇರಿಕೊಂಡರು ಎಂಬ ಅಪವಾದವನ್ನೂ

ಮತ ಮಾರಾಟದಲ್ಲಿ ರಾಜ್ಯ ನಂಬರ್ 1

ಇದು ರಾಜ್ಯ ರಾಜಕಾರಣಕ್ಕೆ ಬಿಜೆಪಿ ಕೊಡುಗೆ!


ಇತ್ತೀಚೆಗೆ ಉಪ ಚುನಾವಣೆ ನಡೆದ ಒಟ್ಟು ಎಂಟು ಕ್ಷೇತ್ರಗಳ ಪೈಕಿ ಐದು ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದೆ. ಈ ಗೆಲುವಿಗಾಗಿ ಪಕ್ಷ ಮಾಡಿದ ಖರ್ಚು ಬರೋಬ್ಬರಿ ನೂರು ಕೋಟಿ! ಇದನ್ನು ಪಕ್ಷದ ನಾಯಕರೇ ಒಪ್ಪಿಕೊಳ್ಳುತ್ತಿದ್ದಾರೆ. ಪ್ರತಿ ಕ್ಷೇತ್ರದಲ್ಲಿಯೂ ನೀರಿನಂತೆ ದುಡ್ಡು ಸುರಿದ ಬಿಜೆಪಿ ಕೊನೆಗೂ ರಾಜ್ಯದಲ್ಲಿ ಬಹುಮತ ಪಡೆಯುವಲ್ಲಿ ಯಶಸ್ವಿಯಾಗಿದೆ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮಾತ್ರ ಕತ್ತುಹಿಸುಕಿ ಕೊಂದಿದೆ.

ಕಳೆದ ಮೇ ತಿಂಗಳಿನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿಯೇ ಬಿಜೆಪಿ ಹಣದ ಹೊಳೆ ಹರಿಸಿತ್ತು, ಜ್ಯಾತ್ಯತೀತ ಜನತಾದಳ ಮತ್ತು ಕಾಂಗ್ರೆಸ್ ಕೂಡ ಈ ವಿಷಯದಲ್ಲಿ ಬಹಳ ಹಿಂದೆಯೇನೂ ಬಿದ್ದಿರಲಿಲ್ಲ, ಹೀಗಾಗಿ ಆಗ ಚಲಾವಣೆಗೊಂಡ ಹೆಚ್ಚಿನ ಮತಗಳು 'ಮಾರಾಟಗೊಂಡಿದ್ದವು'. ಹಿಂದೆಂದೂ ಇಷ್ಟೊಂದು ಪ್ರಮಾಣದಲ್ಲಿ ಮತಗಳು ಮಾರಾಟವಾಗಿರಲಿಲ್ಲ ಎಂದು ಈ ಕುರಿತು ಅಧ್ಯಯನ ನಡೆಸಿದ ದೆಹಲಿ ಮೂಲದ ಸರ್ಕಾರೇತರ ಸಂಸ್ಥೆ 'ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್' ಹೇಳಿದೆ. ಇದರಿಂದಾಗಿ ಬಿಜೆಪಿ ಹಣ ಸುರಿದೇ ದಕ್ಷಿಣ ಭಾರತದಲ್ಲಿ ಗದ್ದುಗೆಗೆ ಏರಿದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

ಈ ಅಧ್ಯಯನ ವರದಿಯ ಪ್ರಕಾರ, ನಿರ್ದಿಷ್ಟ ಪಕ್ಷಕ್ಕೆ ಮತ ಹಾಕುವಂತೆ ಹಣ ಕೊಟ್ಟು ಮತದಾರರನ್ನು ಖರೀದಿಸುವ ಪಾಪದ ಕೆಲಸದಲ್ಲಿ ಕರ್ನಾಟಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ರಾಜ್ಯದಲ್ಲಿ ಶೇ. 47ರಷ್ಟು ಮತದಾರರು ಹಣಕ್ಕೆ ತಮ್ಮ ಮತವನ್ನು ಮಾರಿಕೊಳ್ಳುತ್ತಾರೆ. ನಂತರದ ಸ್ಥಾನ ತಮಿಳುನಾಡಿನದು. ಈ ರಾಜ್ಯದ ಶೇ.34 ರಷ್ಟು ಮತದಾರರು ಮತ ಮಾರಿಕೊಳ್ಳುತ್ತಾರೆ. ಇತ್ತೀಚೆಗೆ ಚುನಾವಣೆ ನಡೆದು, ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದಿರುವ ಮಧ್ಯ ಪ್ರದೇಶ ಮೂರನೇ ಸ್ಥಾನದಲ್ಲಿದೆ. ಇಲ್ಲಿ ಶೇ.33 ರಷ್ಟು ಮತದಾರರು ಮತ ಮಾರಿಕೊಳ್ಳುತ್ತಿದ್ದಾರೆ. ಬಿಹಾರ (ಶೇ.31), ಒರಿಸ್ಸಾ (ಶೇ.27), ದೆಹಲಿ (ಶೇ.25), ಗುಜರಾತ್ (ಶೇ.24), ಛತ್ತೀಸ್‌ಗಢ (ಶೇ.22) ನಂತರದ ಸ್ಥಾನಗಳಲ್ಲಿವೆ.

'ಕರ್ನಾಟಕದಲ್ಲಿ 2008ರ ಮೇ ತಿಂಗಳಿನಲ್ಲಿ ನಡೆದ ಚುನಾವಣೆಯು ಮತ ಖರೀದಿಯಲ್ಲಿ ಹೊಸ ವಿಕ್ರಮವನ್ನೇ ಸ್ಥಾಪಿಸಿದೆ' ಎಂದು ಅಧ್ಯಯನದ ವರದಿಯಲ್ಲಿ ವಿಶ್ಲೇಷಿಸಲಾಗಿದೆ. ಈ ವಿಕ್ರಮಕ್ಕೆ ಗಣಿಧಣಿಗಳೇ ಕಾರಣ ಎಂದು ಇಲ್ಲಿ ಬಿಡಿಸಿ ಹೇಳಬೇಕಾಗಿಲ್ಲ.

ಈ ಅಧ್ಯಯನದ ಪ್ರಕಾರ, ಮೊನ್ನೆ ಉಪ ಚುನಾವಣೆ ನಡೆದ ಎಂಟು ಕ್ಷೇತ್ರಗಳ ಪೈಕಿ, ಕಳೆದ



ಮೇ ಚುನಾವಣೆಯಲ್ಲಿ, ಅತಿಹೆಚ್ಚು ದುಡ್ಡು ಕೊಟ್ಟು ಮತ ಖರೀದಿಸಿದ ಕ್ಷೇತ್ರವೆಂದರೆ ದೊಡ್ಡಬಳ್ಳಾಪುರ. ಈ ಕ್ಷೇತ್ರದಲ್ಲಿ ಶೇ.57ರಷ್ಟು ಮತಗಳು ಮಾರಾಟವಾಗಿದ್ದವಂತೆ. ಉಪ ಚುನಾವಣೆ ನಡೆದ ಸಂದರ್ಭದಲ್ಲಿ ಮಾರಾಟದ ಪ್ರಮಾಣ ಇನ್ನಷ್ಟು ಹೆಚ್ಚಿತ್ತು ಎಂಬುದರಲ್ಲಿ ಅನುಮಾನವಿಲ್ಲ, ಈ ಕ್ಷೇತ್ರದಲ್ಲಿ ಬಿಜೆಪಿ ಗೆದ್ದಿದೆ. ಹೇಗೆ ಎಂಬುದೀಗ ಸ್ಪಷ್ಟವಾಗಿದೆ.

ಈ ಕ್ಷೇತ್ರ ಮಾತ್ರವಲ್ಲ ಅರಭಾವಿ, ದೇವದುರ್ಗ ಕ್ಷೇತ್ರಗಳಲ್ಲಿಯೂ ಹಣ ಹಂಚಿಕೆಯಲ್ಲಿ ಬಿಜೆಪಿ ಕಳೆದಬಾರಿಯೇ ಮುಂದಿತ್ತು ಎಂದು ಈ ಅಧ್ಯಯನ ಸ್ಪಷ್ಟವಾಗಿ ಬೊಟ್ಟು ಮಾಡಿದೆ. ಆದರೂ ಈ ಎರಡೂ ಕ್ಷೇತ್ರದಲ್ಲಿ ಪಕ್ಷ ಸೋತಿತ್ತು, ಆದರೆ ಈ ಬಾರಿ ಬಿಜೆಪಿ ಅಭ್ಯರ್ಥಿಗಳಿಗೆ ಅಧಿಕಾರದಲ್ಲಿದ್ದ ಸರ್ಕಾರವೇ ಬೆಂಬಲಕ್ಕೆ ನಿಂತಿತ್ತು, ಹೀಗಿರುವಾಗ ಸಹಜವಾಗಿಯೇ ಈ ಕ್ಷೇತ್ರಗಳಲ್ಲಿ ಹಣದ ಹೊಳೆ ಹೆಚ್ಚಾಗಿಯೇ ಹರಿದಿದೆ. ನಿರೀಕ್ಷೆಯಂತೆಯೇ ಬಿಜೆಪಿ ಗೆದ್ದಿದೆ.

ಮೇ ಚುನಾವಣೆಯಲ್ಲಿ ಹುಕ್ಕೇರಿಯಲ್ಲಿ ಶೇ.35, ಅರಭಾವಿಯಲ್ಲಿ ಶೇ.16, ದೇವದುರ್ಗದಲ್ಲಿ ಶೇ.39, ಕಾರವಾರದಲ್ಲಿ ಶೇ.43, ತುರುವೆಕೆರೆಯಲ್ಲಿ ಶೇ.38, ಮಧುಗಿರಿಯಲ್ಲಿ ಶೇ.29ರಷ್ಟು ಮತಗಳು ಮಾರಾಟವಾಗಿದ್ದವಂತೆ.

ಇನ್ನು ಈ ಅಧ್ಯಯನದ ಪ್ರಕಾರ ಕಳೆದ ಮೇ ಚುನಾವಣೆಯಲ್ಲಿ ಅತಿ ಹೆಚ್ಚು ಹಣ ಹಂಚಿದವರ ಪಟ್ಟಿಯಲ್ಲಿ ಪ್ರಮುಖವಾಗಿದ್ದದ್ದು ಮಾಜಿ ಸಚಿವ ಸಿ.ಚೆನ್ನಿಗಪ್ಪ ಹೆಸರು. ಅವರು ಈ ಉಪಚುನಾವಣೆಯಲ್ಲಿ ಮಧುಗಿರಿಯಿಂದ ಸ್ಪರ್ಧಿಸಿದ್ದರು. ಈ ಬಾರಿಯೂ ಹಣದ ಹೊಳೆಯನ್ನೇ ಹರಿಸಿದ್ದರು. ಹೀಗಾಗಿಯೇ 'ಅಣ್ಣನ ನೋಟು, ಅಕ್ಕಗೆ ಓಟು' ಎಂಬ ಮಾತು ಈ ಕ್ಷೇತ್ರದಲ್ಲಿ ಜನಪ್ರಿಯವಾಗಿತ್ತು, ಈ ಕ್ಷೇತ್ರದಲ್ಲಿ ಜೆಡಿಎಸ್ ಗೆದ್ದಿದ್ದರೂ, 'ದುಡ್ಡೇ ದೊಡ್ಡಪ್ಪ'ನಾಗಿದ್ದ ಎಂಬುದರಲ್ಲಿ ಅನುಮಾನವಿಲ್ಲ.

ಮದ್ಯ ಮತ್ತಿತರ ಆಮಿಷವೊಡ್ಡಿ ಮತ ಖರೀದಿಸಿರುವ ವಿವರವನ್ನು ಈ ಅಧ್ಯಯನ ಒಳಗೊಂಡಿಲ್ಲ, ಕೇವಲ ದುಡ್ಡಿಗಾಗಿ ಮತ

...ಬೇಕಾಯಿತು. ಮಾದೇಗೌಡರ ಶತಪ್ರಯತ್ನದಿಂದ ...ವನ್ನಂತೂ ಗೆಲ್ಲಿಸಲಾಗಲಿಲ್ಲ. ತಮ್ಮಣ್ಣರೂ ಸೋತರು. ...ಜು ಗೆದ್ದರು.

...ದ್ದ ಸಿದ್ದರಾಜು, ಮೂರು ತಿಂಗಳಲ್ಲೇ ಸತ್ತಾಗ ... ಬಿಜೆಪಿಯ ಟಿಕೆಟ್ ತಮಗೇ ಎಂದು ಮಧು ...ಕೊಂಡಿದ್ದರು. ಆದರೆ ಚುನಾವಣೆಯಲ್ಲಿ ...ಸಲಿಲ್ಲವೆಂದು ಕೃಷ್ಣರ ಬಗ್ಗೆ ಮುನಿಸಿಕೊಂಡಿದ್ದ ...ಲ್ಲಿ ಬಿಜೆಪಿಯ ಕಡೆ ನೋಡುತ್ತಿದ್ದರು. ಅಕ್ರಮವಾಗಿ ...ಗಳಿಸಿದ ದೊಡ್ಡ ಕುಬೇರರೆಲ್ಲರಿಗೂ ಇಂದು ...ಯೇ ಮೊದಲ ಆಯ್ಕೆ ಆಗಿರುವುದರಿಂದ ತಮ್ಮಣ್ಣ ... ಬಿಜೆಪಿಯ ಕೂಡಾವಳಿ ನಡೆದೇ ಹೋಯಿತು. ...ಮಾದೇಗೌಡರ ತೀವ್ರ ಪ್ರತಿಭಟನೆಯ ಕಾರಣದಿಂದ ...ಬವರೆ ವರ್ಷದ ಎಂಎಲ್‌ಸಿಗಿರಿಯ ತುಪ್ಪವನ್ನು ...ಗೆ ಸವರಲಾಯಿತು. ಟಿಕೆಟ್ ಮಾತ್ರ ತಮ್ಮಣ್ಣರಿಗೇ ...ಾಯಿತು.

...ಮ್ಮೆ ಕ್ಷೇತ್ರವನ್ನು ಬಿಟ್ಟುಕೊಟ್ಟರೆ ಮತ್ತೆ ಅದು ...ಪಾಲಿಗೆ ಸಿಗದು ಎಂದು ಬಗೆದ ಮಾದೇಗೌಡರ ...ವಿ ಒಳೇಟು ಕೊಡಲು ತೀರ್ಮಾನಿಸಿತು. 'ಲಂಕೇಶ್' ...ಪತ್ರಿಕೆಯ ಕಳೆದ ಸಂಚಿಕೆಗಳಲ್ಲಿ ಬರೆದಿರುವಂತೆ ...ನಕೆರೆ ಹೋಬಳಿಯ ತಮ್ಮ ಹಿಂಬಾಲಕರಲ್ಲಿ ಕೆಲವರಿಗೆ ...ಗಿ ಜೆಡಿಎಸ್ ಪರ ಪ್ರಚಾರ ಮಾಡಲು ಸೂಚಿಸಿದರೆ, ...ಹಲವೆಡೆ ಕೊನೆ ಘಳಿಗೆಯಲ್ಲಿ ತಮ್ಮಣ್ಣರ ವಿರುದ್ಧ ... ಹಾಕಲು ಮಾದೇಗೌಡರ ...ವಿ ಸೂಚಿಸಿತು. ತಮ್ಮಣ್ಣ ಇದೆಲ್ಲ ... ಅರಿಯದಷ್ಟು ದಡ್ಡರೇನಲ್ಲ. ...ವಣೆ ಪ್ರಕ್ರಿಯೆ ಮುಗಿದ ...ೇ ಇದರ ಬಗ್ಗೆ ಮಾತನಾಡಿ, ...ತಿ ಮೋಸ ಮಾಡಿದವರನ್ನು ...ಶ ಬಂದ ನಂತರ ನೋಡಿ ...ವುದಾಗಿ ಎಚ್ಚರಿಕೆ ನೀಡಿದ್ದರು. ...ಲಿತಾಂಶ ಬಂದಾಗ ತಮ್ಮಣ್ಣ ...ಹೋದರು. ಬರೋಬ್ಬರಿ 25 ... ಹಣ ಅವರ ಕೈ ಬಿಟ್ಟಿತ್ತು, ...ಸಾವಿರ ಮತಗಳಿಂದ ...ಯಾಗಿತ್ತು. ವಾಸ್ತವದಲ್ಲಿ ತಮ್ಮಣ್ಣ ...ಮ್ಮ ಇದೇ ದುಡ್ಡಿನ ಅಬ್ಬರದಿಂದ.


ಕಲ್ಪನಾ ಸಿದ್ದರಾಜು

... ಮತ್ತು ಬಿಜೆಪಿ ಹಣ ಚೆಲ್ಲುತ್ತಿದ್ದ ರೀತಿ ನೋಡಿ ... ಅಸಹ್ಯ ಪಟ್ಟುಕೊಂಡಿದ್ದರು. ಅಷ್ಟು ಮಟ್ಟಕ್ಕೆ ...ಬಿಯ ಉಸ್ತುವಾರಿಯ ನೀಚತನ ಮತ್ತು ತಮ್ಮಣ್ಣರ ...ದ್ದದ ಹಣ ಕ್ಷೇತ್ರದ ತುಂಬೆಲ್ಲಾ ಹರಿದಾಡಿತ್ತು. ...ಜೊತೆಗೆ ಬಿಜೆಪಿ ನಡೆಸಿದ ಜಾತಿ ಸಮಾವೇಶಗಳೂ ...ದರ ವಿರುದ್ಧ ಜನಾಭಿಪ್ರಾಯವನ್ನು ಹರಡಿತ್ತು. ...ವೇಶದಲ್ಲಿ ಭಾಗವಹಿಸಿದ ಜಾತಿಗಳವರೂ ಓಟು ...ಲ್ಲ, ಅದೇ ಸಂದರ್ಭದಲ್ಲಿ ಒಕ್ಕಲಿಗರ ಮತಗಳೂ ದೇವೇಗೌಡ, ಕುಮಾರಸ್ವಾಮಿ ಫ್ಯಾಕ್ಟರ್‌ನಿಂದಾಗಿ ಜೆಡಿಎಸ್ ಪರವಾಗಿ ಧ್ರುವೀಕರಣಗೊಂಡವು.

ಹಣದ ಅಮಲು ನೆತ್ತಿಗೇರಿರುವ ತಮ್ಮಣ್ಣ ಇದನ್ನೆಲ್ಲಾ ಅರ್ಥ ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿರಲಿಲ್ಲ. ಬದಲಿಗೆ ಮಾದೇಗೌಡರೇ ಇದಕ್ಕೆಲ್ಲಾ ಕಾರಣ ಎಂದು ತಮ್ಮ ಬೆಂಬಲಿಗರನ್ನು ಛೂಬಿಟ್ಟರು. ಫಲಿತಾಂಶ ಹೊರಬಂದು ಇನ್ನೂ ಮೂರು ಗಂಟೆಗಳಾಗಿರಲಿಲ್ಲ, ಅಷ್ಟರಲ್ಲಿ ಮಾದೇಗೌಡರು ಗಾಂಧಿಭವನದಲ್ಲೇ ಸದಾಕಾಲ ಇರುತ್ತಾರೆಂದು ಗೊತ್ತಿದ್ದ ತಮ್ಮಣ್ಣನ ಪುಂಡ ಚೇಲಾಗಳು ಆ ಕಡೆ ನುಗ್ಗಿದರು. ಇಳಿವಯಸ್ಸಿನ ಮಾದೇಗೌಡರನ್ನು ಎಳೆದಾಡಿದರು, ಅವರ ಮೈಮೇಲಿನ ಬಟ್ಟೆ ಹರಿದು ಗುದ್ದಿದರು. ಗಾಂಧಿಭವನದ ಗಾಜುಗಳು ಮತ್ತು ಹೊರಗೆ ನಿಂತಿದ್ದ ಕಾರಿನ ಗಾಜುಗಳನ್ನು ಪುಡಿಗೈದರು.

ದೇವೇಗೌಡ, ಎಸ್.ಎಂ.ಕೃಷ್ಣಾದಿಯಾಗಿ ಎಲ್ಲಾ ಪಕ್ಷಗಳ ನಾಯಕರು ಬಂದು ಮಾದೇಗೌಡರನ್ನು ಭೇಟಿಯಾಗಿ ಹೋದರು. ಆದರೆ ಕ್ರಮ ಕೈಗೊಳ್ಳುವುದಾಗಿ ಹೇಳಿದ ಯಡಿಯೂರಪ್ಪ ಶ್ರೀರಂಗಪಟ್ಟಣಕ್ಕೆ ಬಂದರೂ ಮಂಡ್ಯದಲ್ಲಿ ಇಳಿದು ಭೇಟಿಯಾಗಲಿಲ್ಲ. ಬದಲಿಗೆ ಬಿಜೆಪಿ ನಾಯಕರು ಮಧು ಮಾದೇಗೌಡ ಎಂಎಲ್‌ಸಿಗಿರಿಗೆ ರಾಜೀನಾಮೆ ನೀಡಬೇಕೆಂದು ಒಂದಾದ ಮೇಲೆ ಒಂದು ಹೇಳಿಕೆಗಳನ್ನು ನೀಡುತ್ತಲೇ ಇದ್ದಾರೆ. ಎಂಎಲ್‌ಸಿಗಿರಿಯೇನೂ ಯಡಿಯೂರಪ್ಪನ ಮನೆ ಆಸ್ತಿ ಅಲ್ಲ ಎಂದು ಮಾದೇಗೌಡರು ಈಗಾಗಲೇ ಗುಡುಗಿಯಾಗಿದೆ. ತಮ್ಮಣ್ಣನ ಪರ ನಿಂತರೇನೇ ಹೆಚ್ಚು ಲಾಭ ಎಂದು ಬಿಜೆಪಿಯವರು ತಿಳಿದಿರುವುದರಿಂದ ಮಧು ಪಕ್ಷ ಬಿಡುವುದು ಹೆಚ್ಚು ಕಡಿಮೆ ಖಾತ್ರಿಯಾಗಿದೆ.

ಬಿಜೆಪಿಯ ರಕ್ಕಸ ರಾಜಕಾರಣಕ್ಕೆ ಮಂಡ್ಯ ಜಿಲ್ಲೆಯಲ್ಲಂತೂ ಅವಕಾಶವಿಲ್ಲ ಎಂಬುದು ಇದರಿಂದ ಮತ್ತೊಮ್ಮೆ ರುಜುವಾತಾಗಿದೆ. ಆದರೆ ಮಾದೇಗೌಡರ ಫ್ಯಾಮಿಲಿ ತಾವು ಗಾಂಧಿ ಕೊಂದವರ ವಿರುದ್ಧ ನಿಲ್ಲುತ್ತೇವೋ ಇಲ್ಲವೋ ಎಂಬುದನ್ನು ಇನ್ನೂ ಸ್ಪಷ್ಟವಾಗಿ ರುಜುವಾತು ಪಡಿಸಬೇಕಿದೆ. ಇದರ ಜೊತೆಗೆ ಮಂಡ್ಯದಲ್ಲಿ ಚಾಲ್ತಿಯಲ್ಲಿರುವ ಇನ್ನೊಂದು ಮಾತಿಗೂ ಅವರ ಸಮಜಾಯಿಷಿ ಬರಬೇಕಿದೆ - 'ತಮ್ಮಣ್ಣನ ಹತ್ತಿರ ಎರಡು ಕೋಟಿ ದುಡ್ಡೀಸಗೊಂಡು ಕೆಲ್ಸಾನೂ ಮಾಡ್ಲಿಲ್ಲ ಅಂದ್ರೆ ಶ್ಯಾಪ ಬತ್ತದೋ ಇಲ್ವೋ, ಅದ್ಕೇ ಪದಪದವೆ' ಎನ್ನುತ್ತಿದ್ದಾರೆ. ಇಸಗೊಂಡ ಹಣಕ್ಕೆ ನಿಷ್ಠರಾಗಿ ಬಿಜೆಪಿಯಲ್ಲೇ ಇರುತ್ತಾರೋ ಅಥವಾ ಬಿಜೆಪಿಯ ವಿರುದ್ಧ ತೊಡೆ ತಟ್ಟಿ ನಿಲ್ಲುತ್ತಾರೋ ಎಂಬುದರ ಮೇಲೆ ಇದಕ್ಕೆ ಉತ್ತರ ಸಿಗಬೇಕಷ್ಟೇ.

■ ವರದಿಗಾರ

...ಕೊಳ್ಳುವವರ ಬಗ್ಗೆ ಮಾತ್ರ ಮಾಹಿತಿ ...ಸಲಾಗಿತ್ತು. ಕೇವಲ ಹಣಕ್ಕಾಗಿಯೇ ...ದು ಪ್ರಮಾಣದಲ್ಲಿ ಮತ ...ಟಗೊಳ್ಳುತ್ತಿವೆ ಎಂದಾದರೆ, ಉಳಿದ ...ಗಳಿಗಾಗಿ ಬಿಕರಿಯಾಗುವ ಮತಗಳ ಪ್ರಮಾಣ ...ಬಹುದು. ಒಟ್ಟಾರೆಯಾಗಿ ಹೇಳುವುದಾದರೆ ...ರ್ನಾಟಕದಲ್ಲಿ ಚಲಾವಣೆಗೊಳ್ಳುತ್ತಿರುವ ...ಂದು ಮತವೂ ಈ ರೀತಿ ಒಂದಲ್ಲಾ ಒಂದು ...ಮಾರಾಟವಾಗಿರುತ್ತವೆ. ಇದನ್ನು ಪ್ರಜಾಪ್ರಭುತ್ವ ... ಸಾಧ್ಯವೇ?

...ಲೋಕಸಭಾ ಚುನಾವಣೆ ಬರುತ್ತಿದೆ. ದುಡ್ಡು ... ಓಟು ಕೊಳ್ಳುವ ಪರಿಪಾಠ ...ಮುವರೆಯಲಿದೆ. 2008ರಲ್ಲಿ ಈ ಅಧ್ಯಯನ ...ಾಗ ಬಿಜೆಪಿ ಗೆದ್ದಿರುವ ಲೋಕಸಭಾ ...ಲ್ಲಿ ಹೆಚ್ಚಿನ ಮತಗಳು ಮಾರಾಟವಾಗುತ್ತವೆ ...ಅಂಶ ಬೆಳಕಿಗೆ ಬಂದಿದೆ. ಕಳೆದ ಹತ್ತು ...ರಿಂದ ಬಿಜೆಪಿ ಗೆದ್ದಿರುವ ಲೋಕಸಭಾ ...ಲ್ಲಿ ಶೇ.25 ಮತಗಳು ಮಾರಾಟವಾಗುತ್ತಿದ್ದರೆ, ... ಗೆದ್ದಿರುವ ಕ್ಷೇತ್ರಗಳಲ್ಲಿ ಶೇ. 19 ಮತಗಳು ...ಟವಾಗಿವೆ. ಇತರ ಪಕ್ಷಗಳು ...ಸುತ್ತಿರುವ ಕ್ಷೇತ್ರಗಳಲ್ಲಿ ಶೇ.21 ಮತಗಳು ...ಟವಾಗುತ್ತಿವೆ. ಇನ್ನು ಎನ್‌ಡಿಎ ...ದಲ್ಲಿರುವ ರಾಜ್ಯಗಳಲ್ಲಿ ಶೇ.27, ಯುಪಿಎ ...ದಲ್ಲಿರುವ ರಾಜ್ಯಗಳಲ್ಲಿ ಶೇ.21ರಷ್ಟು ...ಂ ಮಾರಾಟವಾಗುತ್ತವೆ ಎಂದು ಈ ...ನ ವಿವರಿಸಿದೆ.

...ಿತ್ತಿ ಹೇಳುವುದಾದರೆ, ಮುಂದಿನ ಲೋಕಸಭಾ ...ಣೆಯಲ್ಲಿ ಯಾರು ಹೆಚ್ಚು ಮತಗಳನ್ನು ...ತ್ತಾರೆಯೋ ಅವರೇ ಗೆಲ್ಲುತ್ತಾರೆ. ಕೇವಲ ದುಡ್ಡು ಹಂಚಿದರೆ ಸಾಲದು, ಅವುಗಳನ್ನು ಮತಗಳಾಗಿ ಪರಿವರ್ತಿಸುವ (ಕೊಂಡುಕೊಳ್ಳುವ ವ್ಯವಹಾರ) ಚಾಕಚಕ್ಯತೆ ಇದ್ದವರಿಗೆ ಗೆಲುವು ನಿಶ್ಚಿತ.


ಕರ್ನಾಟಕದಲ್ಲಿ ಕಡು ಬಡ ಕುಟುಂಬದ ಮತಗಳು ಹೆಚ್ಚು ಮಾರಾಟವಾಗುತ್ತಿವೆ. ಶೇ. 73ರಷ್ಟು ಕಡು ಬಡವರು ಮತಗಳನ್ನು ಮಾರಿಕೊಳ್ಳುತ್ತಿದ್ದಾರೆ. ಕುತೂಹಲದ ವಿಷಯವೆಂದರೆ, ಗ್ರಾಮೀಣ ಪ್ರದೇಶಕ್ಕಿಂತ ನಗರದ ಮತದಾರರೇ ಹೆಚ್ಚಾಗಿ ಮತ ಮಾರಿಕೊಳ್ಳುತ್ತಿದ್ದಾರೆ ಎನ್ನುತ್ತದೆ ಈ ಅಧ್ಯಯನ. ಶೇ. 23ರಷ್ಟು ನಗರದ ಮತದಾರರ ಮತ ಮಾರಿಕೊಂಡರೆ, ಗ್ರಾಮೀಣದ ಶೇ.21 ರಷ್ಟು ಮತದಾರರು ಮತಗಳನ್ನು ಮಾರಿಕೊಳ್ಳುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕಾರ್ಮಿಕರಿಗಿಂತ (ಶೇ 19) ಸಣ್ಣ ರೈತರೇ (ಶೇ.25) ಹೆಚ್ಚಾಗಿ ಮತ ಮಾರಿಕೊಳ್ಳುತ್ತಿದ್ದಾರೆ. ಮತಗಳನ್ನು ಮಾರಿಕೊಳ್ಳುವವರಲ್ಲಿ ವಿದ್ಯಾರ್ಥಿಗಳೂ ಹಿಂದೆ ಬಿದ್ದಿಲ್ಲ, ಶೇ.22 ರಷ್ಟು ವಿದ್ಯಾರ್ಥಿಗಳು ತಮ್ಮ ಮತಗಳನ್ನು ಮಾರಾಟಕ್ಕಿಟ್ಟಿದ್ದಾರೆ.

ಈಗ ಹೇಳಿ, ಈ ದೇಶದ ಪ್ರಜಾಪ್ರಭುತ್ವ ದುಡ್ಡಿದ್ದವರದಲ್ಲದೆ ಬೇರೆ ಯಾರದ್ದು? ಇಲ್ಲಿ ವಿಚಾರಗಳಿಗೆ, ಸೈದ್ಧಾಂತಿಕ ಪ್ರಶ್ನೆಗಳಿಗೆ ಯಾವ ಬೆಲೆ ಇದೆ? ಅತಿ ಹೆಚ್ಚು ಸಾಕ್ಷರರನ್ನು ಹೊಂದಿರುವ, ಪ್ರಜ್ಞಾವಂತರ ರಾಜ್ಯ ಎನಿಸಿಕೊಂಡಿರುವ ಕರ್ನಾಟಕವೇ ಮತಗಳ ಮಾರಾಟದಲ್ಲಿ ಮೊದಲ ಸ್ಥಾನದಲ್ಲಿದೆ ಎಂದಾದರೆ...

ಕನ್ನಡಿಗರು ಎಚ್ಚೆತ್ತುಕೊಳ್ಳಬೇಕು ಬಿಜೆಪಿ ಮತ್ತು ಇತರ ರಾಜಕೀಯ ಪಕ್ಷಗಳಿಗೆ ನಮ್ಮ ರಾಜಕೀಯ ವ್ಯವಸ್ಥೆಯನ್ನು ಈ ಪಾಟಿ ಮಲಿನಗೊಳಿಸಲು ಬಿಡಬಾರದು. ■

"ಇದು ವೈಶ್ಯ ಯುಗವಲ್ಲ ಬ್ರಾಹ್ಮಣಯುಗ ಕಂಡ್ರೀ"

ನಮ್ಮ ಜ್ಞಾನಪೀಠದ ಅನಂತಮೂರ್ತಿಯವರು "ಈಗ ಬಂದಿರುವುದು ವೈಶ್ಯ ಯುಗ. ಸಾಮಾನ್ಯರ ಕೊಳ್ಳುಬಾಕ ಸಂಸ್ಕೃತಿಯನ್ನು ತಣಿಸಲು ವ್ಯಾಪಾರಿಗಳು ಮಾರದ ಪದಾರ್ಥವಿಲ್ಲ, ಮಾಡದ ವ್ಯವಹಾರವಿಲ್ಲ" ಎಂದು ಹೇಳುತ್ತಿರುವಾಗ ಅತ್ತ ಯಡ್ಡಿ ಸಂಪುಟದ ಯಡವಟ್ ಮಂತ್ರಿಯೊಂದು "ಇದು ಬ್ರಾಹ್ಮಣ ಯುಗ. ಈಗ ನೀವು ಎಲ್ಲಿ ನೋಡಿದರೂ ಬ್ರಾಹ್ಮಣರೇ ಕಾಣುತ್ತಾರೆ" ಎಂದು ಹೇಳಿ ಅಚ್ಚರಿ ಹುಟ್ಟಿಸಿದನಂತಲ್ಲಾ. ಸಚಿವನ ಮಾತನ್ನು ಗಂಭೀರವಾಗಿ ಪರಿಗಣಿಸಿದ ಶೂದ್ರರು ಕಣ್ಣುಬಿಟ್ಟು ನೋಡಿ ಸುಸ್ತು ಹೊಡೆದು ಕಣ್ಣುಮುಚ್ಚಿದರಂತಲ್ಲಾ. ಬೆಳಗ್ಗೆ ಎದ್ದು ಕಟಿಂಗ್ ಶಾಪಿಗೆ ಹೋಗಿ ಪತ್ರಿಕೆ ತೆರೆದರೆ ಇತ್ತ



ಸುಳ್ಳುಭಟ್ಟನ ಪತ್ರಿಕೆ; ಅತ್ತ ಮತ್ತೊಬ್ಬ ಬ್ರಾಹ್ಮಣನ ವಾರಪತ್ರಿಕೆ. ಇದ್ಯಾವುದು ಬೇಡ ಎಂದು ಟಿ.ವಿ. ಹಾಕಿದರೆ ಹಣೆಗೆ ಹಲವು ತರದ ಹೇಸಿಗೆ ಹಚ್ಚಿಕೊಂಡ ಜೋತಿಷಿಗಳು. ಚಾನಲ್ ಬದಲಾಯಿಸಿದರೆ ವಾಸ್ತು ಪೀಡಿತ ಪಿಂಡಗಳು. ಸುದ್ದಿ ಓದುವವನೂ ಅವನೇ. ಬೇಡ ಎಂದು ಧಾರಾವಾಹಿ ನೋಡಿದರೆ ಟಿವಿ ಪರದೆಯ ಮೇಲೆ ಇಡೀ ಬ್ರಾಹ್ಮಣ ಕುಟುಂಬವೇ ಇದೆ. ಧಾರಾವಾಹಿ ತೆಗೆದು ತೋರುವವನೂ ಬ್ರಾಹ್ಮಣನೆ. "ರಾಮ ರಾಮಾ, ಏನು ಬ್ರಾಹ್ಮಣರ ಹಾವಳಿರೀ? ಇಷ್ಟು ಕಡಿಮೆ ಸಂಖ್ಯೆಯ ಜನ ಈ ರೂಪದಲ್ಲಿ ಹರಡಿಹೋಗಿದ್ದಾರಲ್ಲ, ಶೂದ್ರ ಸಮೂಹ ಉಳಿಯುವುದುಂಟೆ" ಎಂದು ಸಿಟ್ಟಿನಿಂದ ಛಾನಲ್ ಬದಲಿಸಿದರೆ ಅಲ್ಲೂ ವಿಪ್ರರ ಗೋಷ್ಠಿ ನಡೆದಿತ್ತಂತಲ್ಲಾ, ಥೂತ್ತೇರಿ!

* * * * *

ಒಂದು ಸಣ್ಣಜಾತಿ ಈ ರೂಪದಲ್ಲಿ ಭರತಭೂಮಿಯನ್ನ ಆವರಿಸಿರುವ ಬಗ್ಗೆ ಬರಗೂರ್ ಕಡೆಯ ಬಂಡಾಯ ಸಾಹಿತಿಗಳು ಒಂದು ಒಳ್ಳೆ ಸೆಮಿನಾರ್ ಮಾಡಿ, ಇದಕ್ಕೆ ಕಾರಣವೇನೆಂದು ಪತ್ತೆಹಚ್ಚಿ, ಉತ್ತಮಮಟ್ಟದ ನಿರ್ಣಯ ಕೈಗೊಳ್ಳಬೇಕೆಂದು ಹೊರಟರಂತಲ್ಲಾ, ಅವರು ಬಾರ್ ಅಂಡ್ ರೆಸ್ಟೋರೆಂಟಿನ ಮಂದ ಬೆಳಕಲ್ಲಿ ಕೊರೆದು ನಿಲ್ಲಿಸಿದ

ಥೂತ್ತೇರಿ

ಯಾಹೂ

ನಗೆಯೊಡನೆ ಚರ್ಚಿಸುತ್ತಿರಬೇಕಾದರೆ ರಾಮಚಂದ್ರಪುರ ಮಠದ ವಾರೆನೋಟದ ವಯ್ಯಾರಿ "ಜಾತಿ ಪದ್ಧತಿಯನ್ನು ತಂದವರು ಬ್ರಿಟಿಷರು ಕಂಡ್ರಿ. ಮೊದಲು ನಮ್ಮ ಎಲ್ಲಾ ದೇವಸ್ಥಾನದಲ್ಲೂ ಹೊಲೆ ಮಾದಿಗರೆ ಪೂಜಾರಿಕೆ ಮಾಡುತ್ತಿದ್ದರು. ಬ್ರಿಟಿಷರು ಬಂದವರೆ ಅವರನ್ನೆಲ್ಲಾ ಗುಡಿಯಿಂದ ಆಚೆ ದಬ್ಬಿ ಮಲ ಹೊರಲು, ಮೆಟ್ಟು ಹೊಲೆಯಲು ನೇಮಿಸಿದರು. ನಮ್ಮನ್ನ ಪೂಜೆಗೆ ಹಚ್ಚಿ ಹೆಗ್ಗೂಡಲು ಬೆಳೆಸಿಕೊಂಡವರನ್ನು ಕುರಿ ಕಾಯಲು ಕಳುಹಿಸಿ, ತೋಳುಬಲದವರನ್ನು ಹೊಲ ಉಳಲು ಕಳುಹಿಸಿ, ಹೆಂಗಸರೊಡನೆ ಸಲಿಗೆಯಿಂದಿದ್ದವರನ್ನು ಮಡಿವಾಳರೆಂದು ನೇಮಿಸಿ, ಏನು ಸಿಕ್ಕಿದರೂ ಬುಡಸಮೇತ ಎರೆಯುತ್ತಿದ್ದವರನ್ನ ಕ್ಷೌರಿಕರೆಂದು ಮಾಡಿಬಿಟ್ಟರು ಕಂಡ್ರೀ" ಎಂದು ಹೊಸ ವ್ಯಾಖ್ಯಾನ ಮಾಡಿದನಂತಲ್ಲಾ. ಇದನ್ನು ಕೇಳಿಸಿಕೊಂಡ ಚೆಡ್ಡಿಗಳು "ಬ್ರಿಟಿಷರು ಜಾತಿಪದ್ಧತಿ ತಂದ ವಿಷಯವನ್ನು ನಾವು ಹಳ್ಳಿಹಳ್ಳಿಗಳಿಗೆ ಹೋಗಿ ಹೇಳುತ್ತೇವೆ. ಹಳ್ಳಿಗಳಲ್ಲಿ ನಮಗೆ ಸೂಕ್ತ ರಕ್ಷಣೆ ಮತ್ತು ಪ್ರವಾಸ ಹಾಗು ವಸತಿಭತ್ಯೆಯನ್ನು ಎಡೂರಪ್ಪನಿಂದ ಮಂಜೂರು ಮಾಡಿಸಿ" ಎಂದು ಹೇಳಿ ಚೆಡ್ಡಿ ಕೊಡವಿಕೊಂಡು ಹೊರಟೇಬಿಟ್ಟವಂತಲ್ಲಾ, ಥೂತ್ತೇರಿ!


* * * * *

"ಭಾರತದ ಜಾತಿಪದ್ಧತಿಗೆ ಬ್ರಿಟಿಷರೇ ಕಾರಣವೆಂದು ಬೆಲ್ಜಿಯಂನಲ್ಲಿ ಕುಳಿತು ನಮ್ಮವರೊಬ್ಬರು ಅಧ್ಯಯನ ಮಾಡಿ ತಿಳಿಸಿದ್ದಾರೆ. ಸದ್ಯದಲ್ಲೇ ಅವರು ತಮ್ಮ ಪ್ರಖರವಾದ ಹತಾರಗಳನ್ನು ಹಿಡಿದುಬರುತ್ತಾರೆ. ಆಗ ಸತ್ಯಸಂಗತಿ ಹೊರಬರುತ್ತವೆ. ಅಷ್ಟರಲ್ಲಿ ನಾವು ಹಳ್ಳಿಗಳನ್ನು ತಿರುಗಿ ಜಾತಿಪದ್ಧತಿ ಮಾಡಿ ಅಮಾಯಕ ಪುರೋಹಿತಶಾಹಿಗಳನ್ನು ಅನ್ಯಾಯವಾಗಿ ಹಾಳುಮಾಡಿದ ಬ್ರಿಟಿಷರ ಕುತಂತ್ರಗಳನ್ನು ಬಯಲಿಗೆಳೆಯುತ್ತೇವೆ. ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸುತ್ತೇವೆ. ಬ್ರಿಟಿಷರಿಂದ ಬ್ರಾಹ್ಮಣರಿಗಾದ ಅನ್ಯಾಯವನ್ನು ಇಡೀ ದೇಶಕ್ಕೆ ಮನವರಿಕೆ ಮಾಡಿಕೊಟ್ಟು, ಹಿಂದಿನ ಕಾಲದಿಂದಲೂ ಅಧಿಕಾರ, ಅಂತಸ್ತು ಮತ್ತು ಮೀಸಲಾತಿಯಿಂದ ವಂಚನೆಗೆ ಒಳಗಾಗಿರುವ ಪುರೋಹಿತರ ಮಕ್ಕಳಿಗೆ ಈಗಲಾದರೂ ನ್ಯಾಯ ದೊರಕುವಂತೆ ಮಾಡುತ್ತೇವೆ" ಎಂದು ಚೆಡ್ಡಿಗಳು ಪಣ ತೊಟ್ಟವೆಯಂತಲ್ಲಾ. ಚೆಡ್ಡಿಗಳ ಇಂತಹ ಉತ್ಸಾಹವನ್ನು ನೋಡಿದ ರಾಮಚಂದ್ರಾಪುರದ ವಯ್ಯಾರಿ "ನಿಮ್ಮ ಹೋರಾಟದ ಲಾಟಿಯಾಗಿ ನಾನಿರುತ್ತೇನೆ. ನನ್ನನ್ನ ಚೆನ್ನಾಗಿ ಬಳಸಿಕೊಳ್ಳಿ" ಎಂದನಂತಲ್ಲಾ, ಥೂತ್ತೇರಿ!!

* * * * *

ಇತ್ತ ಕರ್ನಾಟಕದ ರಾಜಕಾರಣ ಶಾನೆ ಸ್ವಾರಸ್ಯಕರವಾಗಿ ಕಂಗೊಳಿಸಲು ಯತ್ನಿಸುತ್ತಿದೆಯಂತಲ್ಲಾ. ಕಳೆದ ವರ್ಷ ಏಕಕಾಲಕ್ಕೆ ದೇವೇಗೌಡ, ರೇವಣ್ಣ, ಕುಮಾರಣ್ಣನ ದನಿಯಾಗಿ ಹಾರಾಡಿದ್ದ ಜಯಕುಮಾರನೆಂಬ ಪೊಲೀಸ್ ಪೇದೆ ಜೆಡಿಎಸ್‌ನಿಂದ ದೂರ ಹೋಗಿದ್ದು, ಸುಧಾರಿಸಿಕೊಂಡ ನಂತರ ಮತ್ತೆ ಬಂದು ದೇವೇಗೌಡರ ಮನೆಬಾಗಿಲ ಬಳಿ ನಿಂತು "ಅದ್ನೆ ತಿಂತಿನಿ ಕದ ತಗಿ ಅಪ್ಪಾಜಿ" ಎಂದನಂತಲ್ಲಾ. ಅತ್ತ ಬಂಗಾರಿ ಎಂಬ ಹೈಲುಪೈಲಿನ ಗಿರಾಕಿ "ಈ ಅಲೆಮಾರಿ ರಾಜಕಾರಣ ಸಾಕಾಗಿದೆ. ಖಂಡಿತ ನನಗೊಂದು ನೆಲೆಬೇಕಾಗಿದೆ. ಏನಾದರೂ ಉಪಾಯ ಮಾಡಿ ತಿಮ್ಮಪ್ಪ" ಎಂದು ತಿಂದೋಡು ರಾಮಪ್ಪನನ್ನು ಕಾಡಿದರಂತಲ್ಲಾ. 'ಬಂ' ಸ್ಥಿತಿಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿರುವ ತಿಮ್ಮಪ್ಪ "ಆಯ್ತು ಬನ್ನಿ" ಎಂದು ಕರೆದು, ಮುಗ್ಗುಲುಬಿದ್ದ ಮೈಸೂರುಪಾಕು ಚೂರನ್ನು ಬಂ ಬಾಯಿಗೆ ಪಶ್ಚಿಮದಿಂದ ತುರುಕಿ "ನೀವೇನೂ ಯೋಚನೆ ಮಾಡಬೇಡಿ. ಆ ಸಿದ್ದರಾಮಯ್ಯ ತಾನೇ ಹೊರಗೋಗುವಂತೆ ನಾನು, ಖರ್ಗೆ, ದೇಶಪಾಂಡೆ ಸಂಚು ಮಾಡಿದ್ದೇವೆ. ಇಂದಲ್ಲ ನಾಳೆ ಹೋಗೇ ಹೋಗುತ್ತಾನೆ. ಆಗ ನೀನು ಬಂದು ಹಿಂದುಳಿದ ವರ್ಗದ ಗುರಾಣಿ ಹಿಡಿದು ಕಾಂಗ್ರೆ ಪಾಳಯದಲ್ಲಿ ಅಡ್ಡಾಡಬಹುದು" ಎಂದರಂತಲ್ಲಾ. ಇದಕ್ಕೆ ಹರ್ಷಗೊಂಡ 'ಬಂ' ಮೈಸೂರುಪಾಕನ್ನು ಚಪ್ಪರಿಸುತ್ತ "ತಿಮ್ಮಪ್ಪ, ನಾನಾಗೇ ಕಾಂಗ್ರೆಸ್ಸಿಗೆ ಬರುವುದು ಅಷ್ಟು ಸರಿಯಲ್ಲ. ಮೊದಲು ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ನನ್ನನ್ನು ಆಹ್ವಾನಿಸುವಂತೆ ಮಾಡಿ. ನಂತರ ರಾಜ್ಯ ನಾಯಕರು ನನ್ನ ಆಗಮನದ ಅನಿವಾರ್ಯತೆ ಬಗ್ಗೆ ಮಾತನಾಡುವಂತೆ ಮಾಡಿ. ಆನಂತರ ನಾನು ಈ ಬಗ್ಗೆ ಯೋಚಿಸುವಂತೆ ಮಾಡುತ್ತೇನೆ. ಇಲ್ಲ ನೀವು ಬರಲೇಬೇಕು ಎನ್ನುವಂತೆ ನೀವು ಮಾಡಿ. ಯಾವುದ್ಕು ನಾನು ಸೋನಿಯಾ ಬೇಟಿಯಾಗ್ತಿನಿ. ಯಾಕಂದ್ರೆ ಅವ್ರುರನ್ನ ತುಂಬ ಟೀಕೆ ಮಾಡಿದ್ನೆ. ಪಾಪ ತುಂಬ ಒಳ್ಳೆ ಮಹಿಳೆ" ಎಂದು ಹೋದರಂತಲ್ಲಾ, ಥೂತ್ತೇರಿ!! ■

ಡ್ರ್ಯಾಗ್ ರೇಸ್: ವೇಗದ ಕಿಕ್ಕು ಪ್ರಾಣಕ್ಕೆ ಕುತ್ತು





ಡ್ರ್ಯಾಗ್ ರೇಸ್ ಹದಿಹರೆಯದ ಹುಡುಗರ ಪಾಲಿಗೆ ದೊಡ್ಡ ಶತ್ರು. ಯೌವನದ ಉನ್ಮಾದ ಮತ್ತು ಥ್ರಿಲ್, ಜೊತೆಗೊಂದು ಮೋಟಾರ್ ಬೈಕ್ ಇದ್ದು ಬಿಟ್ಟರೆ ಮುಗಿದೇಹೋಯಿತು. ನಡುರಸ್ತೆ ಆಕ್ಸಿಡೆಂಟಿಗೆ ಬಲಿಯಾದ ಮಗನನ್ನು ಹಾಸ್‌ಮ್ಯಾಟ್ ಆಸ್ಪತ್ರೆಯಲ್ಲೋ ಅಥವಾ ನಿಮ್ಹಾನ್ಸ್‌ನ ಇಂಟೆನ್ಸಿವ್ ಕೇರ್ ವಾರ್ಡಿನಲ್ಲಿ ಕೋಮಾ ಸ್ಥಿತಿಯಲ್ಲೋ ಕಂಡಾಗಲಷ್ಟೇ ಅಪ್ಪಅಮ್ಮಂದಿರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ!

■ ರಾ. ಸೋಮನಾಥ್

ಕತ್ತಲಾಗುತ್ತಿದ್ದಂತೆ ತನ್ನ ಬೈಕೆತ್ತಿಕೊಂಡು ನಾಪತ್ತೆಯಾಗುವ ಮಗ ಎಷ್ಟು ಹೊತ್ತಿಗೆ ಬಂದು ಮಲಗಿದ? ಎಲ್ಲಿಗೆ ಹೋಗಿದ್ದ? ಏನು ಮಾಡುತ್ತಿದ್ದ? ಎಂಬ ಬಗ್ಗೆ ತಲೆ ಕೆಡಿಸಿಕೊಳ್ಳಲು ಯಾವ ತಂದೆ ತಾಯಿಗೆ ತಾನೇ ಟೈಮಿದೆ?

ಮುದ್ದು ಮಗ, ಏನೋ ಸಹವಾಸ ದೋಷ, ಅಮ್ಮಾಮ್ಮಾ ಎಂದರೆ ಬ್ರಿಗೇಡ್ ರೋಡಿಗೋ, ಬೆಂಗಳೂರು ಹೊರವಲಯದ ಯಾವುದಾದರೂ ಡಾಬಾಕ್ಕೋ ಹೋಗಿ ತಿಂಡಿ ತಿನ್ನಬಹುದಷ್ಟೇ. ಅಥವಾ ಗೆಳೆಯರ ಜೊತೆ ಕಂಪ್ಯೂಟರ್ ಮುಂದೆ ಕುಳಿತಿರಬೇಕಷ್ಟೆ. ನಡುರಾತ್ರಿ ಬೈಕೆತ್ತಿಕೊಂಡು ಹೋಗಿ ಬೇರೆ ಏನು ತಾನೇ ಮಾಡಲು ಸಾಧ್ಯ? ಡಿಸ್ಕೋಥೆಕ್‌ಗಳು ನಡೆಯುತ್ತಿಲ್ಲ, ಲೈವ್‌ಬ್ಯಾಂಡಿಗೆ ಹೋಗಲು ಬ್ಯಾಂಡುಗಳು ಇಲ್ಲ ಮತ್ತು ವಯಸ್ಸೂ ಅಲ್ಲ, ಇನ್ನು ಬಾರು, ಪಬ್‌ಗಳೇ ರಾತ್ರಿ ಹತ್ತಕ್ಕೇ ಮುಚ್ಚುತ್ತವೆಯಾದ್ದರಿಂದ ನಡುರಾತ್ರಿ ತನ್ನ ಬೈಕೆತ್ತಿಕೊಂಡು ಮಗ ಇನ್ನೆಲ್ಲಿಗೆ ತಾನೇ ಹೋಗಲು ಸಾಧ್ಯ.

ಇದು ಬೆಂಗಳೂರಿನ ಪ್ರತಿಯೊಬ್ಬ ಸ್ಥಿತಿವಂತ, ಪ್ರತಿಷ್ಠಿತ ಅಪ್ಪ-ಅಮ್ಮಂದಿರ ಲೆಕ್ಕಾಚಾರ ಮತ್ತು ಮೌಢ್ಯ ಕೂಡ. ಇದೇ ಡಿಸೆಂಬರ್ 28 ರ ಭಾನುವಾರ ರಾತ್ರಿ ಟ್ರಿನಿಟಿ ಸರ್ಕಲ್‌ನ ಮಿಲಿಟರಿ ಫ್ಲ್ಯಾಗ್‌ಹೌಸ್ ಕಾಂಪೌಂಡಿನಲ್ಲಿ ಮಿಲಿಟರಿ ಅಧಿಕಾರಿಯೊಬ್ಬರ ಗುಂಡಿಗೆ ಆಹುತಿಯಾದ ಮುಕ್ರಂ ಪಾಷ ಎಂಬ ಇಪ್ಪತ್ತರ ಯುವಕನ ದುರಂತಕ್ಕೆ ಕಾರಣವಾದ ಡ್ರ್ಯಾಗ್ ರೇಸ್ ಪಿಡುಗಿನ ಬಗ್ಗೆ ಬಹುಶಃ ಈಗಲೂ ಅಪ್ಪಅಮ್ಮಂದಿರಿಗೆ ಜ್ಞಾನೋದಯವಾದಂತಿಲ್ಲ.


ಡ್ರ್ಯಾಗ್ ರೇಸ್ ಹದಿಹರೆಯದ ಹುಡುಗರ ಪಾಲಿಗೆ ದೊಡ್ಡ ಶತ್ರು. ಯೌವನದ ಉನ್ಮಾದ ಮತ್ತು ಥ್ರಿಲ್, ಜೊತೆಗೊಂದು ಮೋಟಾರ್ ಬೈಕ್ ಇದ್ದು ಬಿಟ್ಟರೆ ಮುಗಿದೇಹೋಯಿತು. ನಡುರಸ್ತೆ ಆಕ್ಸಿಡೆಂಟಿಗೆ ಬಲಿಯಾದ ಮಗನನ್ನು ಹಾಸ್‌ಮ್ಯಾಟ್ ಆಸ್ಪತ್ರೆಯಲ್ಲೋ ಅಥವಾ ನಿಮ್ಹಾನ್ಸ್‌ನ ಇಂಟೆನ್ಸಿವ್ ಕೇರ್ ವಾರ್ಡಿನಲ್ಲಿ ಕೋಮಾ ಸ್ಥಿತಿಯಲ್ಲೋ ಕಂಡಾಗಲಷ್ಟೇ ಅಪ್ಪಅಮ್ಮಂದಿರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ!

ಬೈಕ್ ಎಂಬ ಹುಚ್ಚು

ಬೆಂಗಳೂರಿನ ವಸಂತನಗರದ ಮೌಂಟ್ ಕಾರ್ಮೆಲ್, ಜ್ಯೋತಿ ನಿವಾಸ್, ಮಲ್ಲೇಶ್ವರದ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ, ವೀವಿಪುರಂನ ಮಹಾವೀರ್ ಜೈನ್ ಕಾಲೇಜ್, ವಿಜಯನಗರ ಬಿಎಸ್‌ವಿ, ಬಸವನಗುಡಿಯ ಬಿಎಂಎಸ್, ಜಯನಗರದ ಎನ್‌ಎಂಕೆಆರ್‌ವಿ, ಕೋರಮಂಗಲದ ಕ್ರೈಸ್ಟ್ ಕಾಲೇಜ್ ಇತ್ಯಾದಿ ಯಾವುದೇ ಹುಡುಗಿಯರ ಕಾಲೇಜಿನ ಆಸುಪಾಸಿನ ಪಡ್ಡೆಗಳ ಅಡ್ಡೆಯನ್ನು ಗಮನಿಸಿ. ಡ್ರ್ಯಾಗ್ ರೇಸ್‌ನ ಪೂರ್ತಿ ಚಿತ್ರಣವಲ್ಲದಿದ್ದರೂ ಅದರ ಉನ್ಮಾದದ ಚಿತ್ರಣವೊಂದು ಗೋಚರಿಸುತ್ತದೆ.

ಅದು ಬೈಕ್‌ನ ಹುಚ್ಚು. ಹಿಂದಿಯ 'ಧೂಮ್' ಚಿತ್ರದ ಹೃತಿಕ್ ರೋಷನ್ ಬೈಕ್ ಹತ್ತಿ 'ವೀಲಿಂಗ್' ಮಾಡಿದಂತೆಯೇ ಮುಂದಿನ ಚಕ್ರವನ್ನು ಮೇಲಕ್ಕೆತ್ತಿ ಕೇವಲ ಹಿಂದಿನ ಚಕ್ರದಲ್ಲಷ್ಟೇ ಎಷ್ಟು ದೂರದ ತನಕ ಬೈಕ್ ಓಡಿಸುತ್ತಾನೆಂಬುದರ ಮೇಲೆ ಆತನ ಪೌರುಷತ್ವ ಲೆಕ್ಕಾಚಾರವಾಗುತ್ತದೆ. ರೊಯ್ಯಂತ ಬೈಕ್‌ನ ಆಕ್ಸಿಲೇಟರ್ ತಿರುವಿ ವೀಲಿಂಗ್ ಮಾಡಿ ಗಕ್ಕನೇ ಬ್ರೇಕ್ ಹಾಕಿದನೆಂದರೆ ಅದೆಂಥಾ ಹುಡುಗಿಯೂ ಬಿದ್ದೇಬೀಳುತ್ತಾಳೆ. ಇದು ಈ ಕಾಲದ ಪಡ್ಡೆಹುಡುಗರ ಬಲವಾದ ನಂಬಿಕೆ.

Of course ಕೆಲ ಹುಡುಗಿಯರಿಗೆ ಈ ಥರದ ಬೈಕ್ ವೀರರೆಂದರೇನೇ ಇಷ್ಟ. ನಿಜ ಕೆಲ ಹುಡುಗಿಯರೇ ಬೈಕ್‌ನ ಹಿಂದೆ ಕೂತು ವಿಪರೀತ ಸ್ಪೀಡಿನಲ್ಲಿ ಓಡಿಸುವಂತೆ ಹುರಿದುಂಬಿಸುತ್ತಾರೆ. ಹಿಂದೆ ಕೂತು ಹುಡುಗಿಯೊಬ್ಬಳು ತನ್ನನ್ನು ತಬ್ಬಿಕೊಂಡ ಸ್ಪೀಡಿಗೆ ಥ್ರಿಲ್ಲು ಬೀಳುತ್ತಿದ್ದರೆ ತಾನು ಜಗದೇಕವೀರನಂತೆ ಪೋಜು ಕೊಡುವ ಯಾವ ಬೈಕ್ ವೀರ ತಾನೇ ತನ್ನ ಕೈಕಾಲಿನ ಮೂಳೆಗೆ ರಾಡು ಹಾಕಿಸಿಕೊಳ್ಳದೆ ಬಚಾವಾಗಿದ್ದಾನೆ?



Speed thrills but kills ಎಂಬುದು ಪರಮ ಸತ್ಯ. ಹೀಗೆ ಹೆಣ್ಣುಮಕ್ಕಳ ಕಾಲೇಜಿನ ಮುಂದೆ ಬೈಕ್ ಷೋ ಕೊಟ್ಟ ಯಾರೇ ಒಬ್ಬಾತನೂ ಈತನಕ ಆಕ್ಸಿಡೆಂಟಿನಿಂದ ಬಚಾವಾಗಿಲ್ಲ, ಮೂಳೆ ಮುರಿದುಕೊಂಡು ಆಸ್ಪತ್ರೆಯಲ್ಲಿ ಮಲಗಿದ್ದು ಬಂದವರ್‍ಯಾರೂ ಮತ್ತೆ ಬೈಕ್ ಶೋಕಿಗೆ ಇಳಿದಿಲ್ಲ.

ನಿಗೂಢ ಜಾಲ

ಆದರೆ ಬೈಕ್ ವ್ಯಸನಿಗಳದೇ ವಿಚಿತ್ರ ಗುಂಪೊಂದು ಇದೆ. ಅದನ್ನು ಡ್ರ್ಯಾಗ್ ರೇಸ್ ಎನ್ನುತ್ತಾರೆ. ಪ್ರತಿ ಶನಿವಾರ ಅಥವಾ ಭಾನುವಾರದಂದು ಜಕ್ಕೂರು ಏರೋಡ್ರಮ್‌ನಲ್ಲೋ, ಗುಟ್ಟಹಳ್ಳಿಯ ಅರಮನೆ ಮೈದಾನದಲ್ಲೋ ಅಥವಾ ಮೈಸೂರಿನ ಲಲಿತಾಮಹಲ್ ಪ್ಯಾಲೇಸ್‌ನ ಹೆಲಿಪ್ಯಾಡ್‌ನಲ್ಲೋ ಜಮೆಯಾಗುವ ಐನೂರಕ್ಕೂ ಹೆಚ್ಚು ಪಡ್ಡೆ ಹುಡುಗರನ್ನು ಅದ್ಯಾರು ಸಂಘಟಿಸುತ್ತಾರೊ ಗೊತ್ತಿಲ್ಲ. ಅಲ್ಲಿ ಚಿತ್ರವಿಚಿತ್ರ ಬೈಕುಗಳಿರುತ್ತವೆ. ಯಾರು ಅತ್ಯಂತ ಕಡಿಮೆ ಅವಧಿಯಲ್ಲಿ ನಿರ್ದಿಷ್ಟ ದೂರವನ್ನು ಮುಟ್ಟುತ್ತಾನೋ ಅವನೇ ಚಾಂಪಿಯನ್.

ಇದು ಡ್ರ್ಯಾಗ್‌ರೇಸ್‌ನ ಸಂಕ್ಷಿಪ್ತ ರೂಪವಾದರೂ ಇತ್ತೀಚೆಗೆ ಕರ್ನಾಟಕದ ಕೆಲ ನಗರಗಳಲ್ಲಿ ನಡೆಯುತ್ತಿರುವ ಇಂಥ ಪಿಡುಗಿನ ಆಳ ವಿಸ್ತಾರವೂ ದೊಡ್ಡದಿದೆ. ಬೆಂಗಳೂರಿನ ಒಂದಿಬ್ಬರು ತಿಂಗಳಿಗೊಮ್ಮೆಯೋ ಎರಡು ತಿಂಗಳಿಗೊಮ್ಮೆಯೋ ಇಂಥ ರೇಸ್ ಸಂಘಟಿಸುತ್ತಾರೆ. ಜಕ್ಕೂರು ಏರೋಡ್ರಮ್ ಅದಕ್ಕೆ ಹೇಳಿಮಾಡಿಸಿದ ಜಾಗ. ನಿರ್ದಿಷ್ಟ ಮೊತ್ತದ ಬಾಡಿಗೆಯನ್ನು ತೆತ್ತು ಏರೋಡ್ರಮ್‌ನ ಡಾಂಬರೀಕೃತ ಟ್ರ್ಯಾಕುಗಳನ್ನು ಬುಕ್ ಮಾಡಿಕೊಂಡು ರೇಸ್ ನಡೆಸುವವರಿಗೆ ಮುಂಬಯಿ, ಚೆನ್ನೈ, ಕೊಯಂಬತ್ತೂರುಗಳ ಡ್ರ್ಯಾಗ್ ರೇಸ್ ಸಂಘಟಕರೊಂದಿಗೂ ನಂಟಿರುತ್ತದೆ.

ಮುಂಬಯಿಯಲ್ಲಿ ಎಂಆರ್‌ಎಫ್, ಜೇಕೆ ಟೈರ್‌ನಂತಹ ಟೈರ್ ಕಂಪೆನಿಗಳು ಇದಕ್ಕಂತಲೇ ಊರ ಹೊರಗೆ ಟ್ರ್ಯಾಕುಗಳನ್ನು ನಿರ್ಮಿಸಿರುತ್ತವೆ. ಚೆನ್ನೈನಲ್ಲೂ ಪ್ರತ್ಯೇಕ ಡ್ರ್ಯಾಗ್ ರೇಸ್ ತಾಣಗಳಿವೆ. ಆದರೆ ಬೆಂಗಳೂರಿನಲ್ಲಿ ಇಂಥ ಟ್ರ್ಯಾಕುಗಳಿಲ್ಲ. ಇದು ಇಡೀ ಡ್ರ್ಯಾಗ್‌ರೇ... ಪಿಡುಗಿನ ಒಂದು ಮುಖವಾದರೆ ಮತ್ತೊಂದ... ಮುಖ ಬೆಂಗಳೂರಿನ ಆಯಾ ಏರಿಯಾಗ... ಬೈಕ್ ಮೆಕ್ಯಾನಿಕ್‌ಗಳದ್ದು!

ರೇಸ್ ಕುದುರೆಯೊಂದನ್ನು ಪಳಗಿ... ಅಣಿಗೊಳಿಸುವ ಟ್ರೈನರ್ ಎಷ್ಟು ಮುಖ್ಯನೋ... ಅಷ್ಟೇ ಅದನ್ನು ಓಡಿಸುವ ಜಾಕಿಯೂ ಮುಖ... ವಾಗುತ್ತಾನೆ. ಹಾಗೇ ಬೈಕ್‌ನ ರೈಡರ್ ಎಷ... ಕಿಲಾಡಿಯೋ ಅಷ್ಟೇ ಮುಖ್ಯ ಪಾತ್ರ... ವಹಿಸುವವನು ಅದರ ಮೆಕ್ಯಾನಿಕ್.

ಬೈಕ್ ಮೇನಿಯಾ

ಪ್ರತಿ ಡ್ರ್ಯಾಗ್ ರೇಸ್‌ನಲ್ಲಿ ಯಾರು... ಚಾಂಪಿಯನ್ ಆಗುತ್ತಾನೋ ಆತನ ಬೈಕ್... ಅನ್ನು ಅಂಥದೊಂದು ಯಮವೇಗಕ್ಕೆ ಟ್ಯೂನ್... ಅಪ್ ಮಾಡುವ ಮೆಕ್ಯಾನಿಕ್ ಕೂಡ ಬೆಸ್ಟ್ ಟ್ಯೂನರ್ ಎಂಬ ಹೆಗ್ಗಳಿಕೆಗೆ ಪಾತ್ರನಾಗುತ್ತಾನೆ... ಮೋಟೋಕ್ರಾಸ್, ಆಟೋಕ್ರಾಸ್ ರೇಸುಗಳಿರುವಂತೆಯೇ 'ಡ್ರ್ಯಾಗ್ ರೇಸ್' ಎಂಬುದು ಕೂಡ ಪಾಶ್ಚಾತ್ಯ ದೇಶಗಳಲ್ಲಿ ಹುಚ್ಚೆಬ್ಬಿಸುತ್ತಿರುವ ಗೀಳೇ. ಇದಕ್ಕೆಂತಲೇ ಕ್ಲಬ್ಬುಗಳಿವೆ. ಹಾಲಿವುಡ್‌ನ 'ಮಿಷನ್ ಇಂಪಾಸಿಬಲ್' ಚಿತ್ರದಲ್ಲಿ ಟಾಮ್ ಕ್ರೂಯಿಸ್, ಜಾಕಿಚಾನ್ ಚಿತ್ರಗಳಲ್ಲಿನ ಸ್ಟಂಟ್ ನೋಡಿದ... ಯಾರೇ ಪಡ್ಡೆ ಹುಡುಗನಿಗೂ ತಾನು ಕೂಡ ಹಾಗೇ ಬೈಕ್ ಓಡಿಸಬೇಕೆಂಬ ಹುಚ್ಚೇರುತ್ತದೆ.

ಅದು ಬೈಕ್ ಮೇನಿಯಾ. ಡ್ರ್ಯಾಗ್ ರೇಸ್ ಎಂಬುದು ಈ ಥರದ ಮೈಕ್ ಮೇನಿಯಾದ ನಾಗರಿಕ ಮುಖ... ಅಥವಾ ಕಾನೂನುಬದ್ಧ ರೂಪವಾದರೆ ಇದರ ಹುಚ್ಚಿಗೆ ಬಿದ್ದು ತುಂಬಿದ ಸಂಚಾರಿ ರಸ್ತೆಗಳಲ್ಲೋ, ಆಯಾ ಏರಿಯಾಗಳ ಹುಡುಗಿಯರ ಕಾಲೇಜುಗಳ ಆಜೂಬಾಜಿನ ರಸ್ತೆಗಳಲ್ಲೋ ಪೋಜು ಕೊಡುವವರದೇ ಪ್ರತ್ಯೇಕ ಗ್ಯಾಂಗಿದೆ. ಹುಡುಗಿಯರನ್ನು ಕಂಡಾಕ್ಷಣವೇ ವೀಲಿಂಗ್ ಮಾಡುವುದು, ತುಂಬಿದ ರಸ್ತೆಯಲ್ಲಿ ಯಮವೇಗದಿಂದ ಕರ್ಕಶ ಸದ್ದಿನಿಂದ ಬೈಕ್ ಓಡಿಸುವುದು ಮತ್ತು ಆಕ್ಸಿಡೆಂಟಿಗೀಡಾಗುವ ಇಂಥ ಪಡ್ಡೆಗಳ ಸಾಲಿಗೆ ಮಂತ್ರಿ ರಾಮಚಂದ್ರಗೌಡರ ಮಗ ಗಿರೀಶ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯ ಮಗ ನಿಖಿಲ್ ಗೌಡ, ಖದೀಮ ಐಎಎಸ್ ಅಧಿಕಾರಿ ಮತ್ತು ಕಾಂಗ್ರೆಸ್ ಪುಢಾರಿ ಅಲೆಕ್ಸಾಂಡರ್ ಮಕ್ಕಳಾದ ಜೋಸ್ ಅಲೆಕ್ಸಾಂಡರ್ ಮತ್ತು ಜಾನ್ಸನ್ ಅಲೆಕ್ಸಾಂಡರ್ ಇತ್ಯಾದಿಗಳಲ್ಲದೇ ಪೊಲೀಸ್ ಅಧಿಕಾರಿಗಳ ಮಕ್ಕಳು, ಐಎಎಸ್ ಅಧಿಕಾರಿಗಳ ಪುತ್ರರತ್ನರು, ಶ್ರೀಮಂತರ ಮಕ್ಕಳು, ಮೆಡಿಕಲ್, ಇಂಜಿನಿಯರಿಂಗ್ ವಿದ್ಯಾರ್ಥಿಗಳು, ಪೋರ್ಕಿಗಳು, ಕಾಲೇಜು ಡ್ರಾಪ್ ಔಟುಗಳು ಎಲ್ಲರೂ ಇದ್ದಾರೆ.

ಖರ್ಚಿಗೆ ದುಡ್ಡಿದೆ. ಜೊತೆಗೆ ಯೌವನದ ಉನ್ಮಾದವಿದೆ. ಬೆಂಗಳೂರಿನ ಪಡ್ಡೆ ಹುಡುಗರ ಪೈಕಿ ರೌಡಿಗಳಾಗುವ ಹುಚ್ಚು ಎಷ್ಟು ಜನಕ್ಕಿದೆಯೋ ಅಷ್ಟೇ ಸಂಖ್ಯೆಯಲ್ಲಿ ಬೈಕ್ ಮೇನಿಯಾಕ್ಕೆ ಬೀಳುತ್ತಾರೆ. ಪ್ರತಿ ಶನಿವಾರ ಮತ್ತು ಭಾನುವಾರವಾದರೆ ಸಾಕು; ದೇವನಹಳ್ಳಿ ಏರ್‌ಪೋರ್ಟ್ ಆಜೂಬಾಜಿನ ಖಾಲಿ ರಸ್ತೆಗಳು, ತುಮಕೂರು ನೈಸ್ ರಸ್ತೆ, ಸರ್ಜಾಪುರ ರಿಂಗ್‌ರೋಡ್, ಮಾರತಹಳ್ಳಿ ರಿಂಗ್ ರೋಡ್‌ಗಳಲ್ಲಿ ಮುನ್ನೂರರಿಂದ ನಾನೂರು ಬೈಕ್‌ಗಳು ಸೇರುತ್ತವೆ.

ವಿಚಿತ್ರ ಬೆಟ್ಟಿಂಗ್!

ಅಲ್ಲಿ ಶುರುವಾಗುತ್ತದೆ ಡ್ರ್ಯಾಗ್ ರೇಸ್. ಕೆಲವರು ಟೈಮರ್ ಮೂಲಕ ಒಂದು ಫರ್ಲಾಂಗ್ ಅಥವಾ ಎರಡು ಫರ್ಲಾಂಗ್ ದೂರಕ್ಕೆ ಲೆಕ್ಕ ಹಾಕುತ್ತಾರೆ. ಏಕಕಾಲಕ್ಕೆ ಇಬ್ಬರ ಮಧ್ಯೆ ಬೆಟ್ಟಿಂಗ್ ಶುರುವಾಗುತ್ತದೆ. ಅದೂ ಅಂತಿಂಥಾ ಬೆಟ್ಟಿಂಗ್ ಅಲ್ಲ. ಸಾವಿರ ರೂಪಾಯಿಯಿಂದ ಹಿಡಿದು ಐವತ್ತು ಸಾವಿರ, ಕೆಲವೊಮ್ಮೆ ಲಕ್ಷದ ತನಕವೂ ಬೆಟ್ಟಿಂಗ್ ನಡೆಯುತ್ತದೆ. ಒಂದು ಫರ್ಲಾಂಗ್ ದೂರವನ್ನು ಒಂದೇ ಸಲಕ್ಕೆ ಯಾರು ಮೊದಲು ಮುಟ್ಟುತ್ತಾನೋ ಅವನೇ ವಿನ್ನರ್.

ಕೋಳಿ ಪಡೆಯಂತೆ ಕೆಲವೊಮ್ಮೆ ಸೋತವನು ತನ್ನ ಬೈಕನ್ನೇ ಗೆದ್ದವನಿಗೆ ಬಿಟ್ಟುಕೊಡಬೇಕು. ಓಡಿಸುವುದು ಬೈಕೇ ಆದರೂ ಕುಬೇರರ ಮಕ್ಕಳು ತಮ್ಮ ಐಷಾರಾಮಿ ಕಾರುಗಳನ್ನೇ ಬೆಟ್ಟಿಂಗಿಗೆ ಇಡುತ್ತಾರೆ. ಹಾಗೇ ರಿಂಗ್ ರಸ್ತೆಗಳಲ್ಲಿ ನೂರಾರು ಬೈಕುಗಳು ಜಮೆಯಾಗಿ ಡ್ರ್ಯಾಗ್ ರೇಸ್ ನಡೆಯುತ್ತಿದೆ ಎಂಬ ಮಾಹಿತಿ ಟ್ರಾಫಿಕ್ ಪೊಲೀಸರಿಗೆ ಸಿಕ್ಕಿದ್ದೇ ತಡ ಅಲ್ಲಿಗೆ ಪೊಲೀಸರು ಧಾವಿಸಿಬರುತ್ತಾರೆ. ಸಿಕ್ಕಸಿಕ್ಕವರನ್ನು ಲಾಠಿ ಬೀಸಿ ಓಡಿಸುತ್ತಾರೆ. ಮೊದಲೇ ಬೈಕ್ ವೀರರು. ಇನ್ನು ಪೊಲೀಸರ ಕೈಗೆ ಸಿಕ್ಕುವುದುಂಟೆ?

▶▶▶



ಬೈಕಿಗೂ ವಯಸ್ಸಿಗೂ ಮತ್ತು ಸಾವಿಗೂ ಎಂಥಾ ಅನುಬಂಧ ಗೊತ್ತೆ?

ಬೈಕ್ ಮೇನಿಯಾ ಎಂಬುದು ಎಂಥ ಅನಾಹುತಕಾರಿ ಪಿಡುಗಾಗಿದೆ ಎಂಬುದಕ್ಕೆ 2008 ರ ಟ್ರಾಫಿಕ್ ಪೊಲೀಸ್ ಅಂಕಿಅಂಶಗಳೇ ಸಾಕಷ್ಟು ಪುರಾವೆ ಒದಗಿಸುತ್ತವೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಲಾರಿ ಮತ್ತು ಕಾರುಗಳ ಅಪಘಾತಕ್ಕೆ ಸರಿಸಮ ಪೈಪೋಟಿ ಕೊಡುವುದು ಬೈಕ್‌ವೀರರೇ. 2008 ರಲ್ಲಿ ರಸ್ತೆ ಅಪಘಾತಕ್ಕೆ ಸಿಲುಕಿ ಸತ್ತ 820 ಮಂದಿಯ ಪೈಕಿ ಲಾರಿ ಆಕ್ಸಿಡೆಂಟ್‌ಗೆ ಬಲಿಯಾದವರು ನೂರಾ ನಲವತ್ತೆರಡು ಮಂದಿಯಾದರೆ. ಎರಡನೇ ಸ್ಥಾನ ಮೋಟಾರ್ ಬೈಕುಗಳದ್ದೇ. ಅಂದರೆ ಬೈಕ್ ಆಕ್ಸಿಡೆಂಟ್‌ನಲ್ಲಿ ಸಿಕ್ಕಿ ಸತ್ತವರು ನೂರಾ ಹದಿನೈದು ಮಂದಿ!

ಇಷ್ಟೇ ಸಂಖ್ಯೆಯಲ್ಲಿ ಕಾರ್ ಅಪಘಾತದಲ್ಲೂ ಜನ ಸತ್ತಿದ್ದಾರಾದರೂ ಬೈಕ್ ವೀರರು ಈ ಪ್ರಮಾಣದಲ್ಲಿ ಸಾಯುತ್ತಿರುವುದು ಆತಂಕಕಾರಿಯೇ. ಇದೇ ವರ್ಷ ದಾಖಲಿಸಿದ ಆಕ್ಸಿಡೆಂಟ್ ಸಂಬಂಧಿ ಕೇಸುಗಳ ಪೈಕಿ ಕಾರ್ ಅಪಘಾತಕ್ಕೆ ಸಂಬಂಧಪಟ್ಟಂತೆ 1983 ಮೊಕದ್ದಮೆಗಳು ದಾಖಲಾದರೆ ಬೈಕ್ ಸಂಬಂಧಿ 1316 ಕೇಸುಗಳು ದಾಖಲಾಗಿವೆ. ಇಲ್ಲಿಯೂ ಬೈಕ್‌ಗಳದ್ದೇ ಎರಡನೇ ಸ್ಥಾನ.

ಇನ್ನು 2007 ರ ಲೆಕ್ಕಾಚಾರಕ್ಕೆ ಬಂದರೆ ಲಾರಿಗಳಿಂದಾಗಿ ಆ ವರ್ಷ 180 ಮಂದಿ ಬಲಿಯಾದರೆ ಬೈಕ್‌ಗಳಿಂದಾಗಿ 154 ಮಂದಿ ಸತ್ತಿದ್ದಾರೆ. ಇಲ್ಲೂ ಎರಡನೇ ಸ್ಥಾನದಲ್ಲಿ ಬೈಕುಗಳಿವೆ. ಸತ್ತವರದು ಒಂದು ಪಟ್ಟಾದರೆ ಗಾಯಗೊಂಡವರು ಅದರ ನಾಲ್ಕು ಪಟ್ಟು. ಬೆಂಗಳೂರು ಪೂರ್ವ ವಲಯದಲ್ಲಿ 2006 ರಲ್ಲಿ ಕಾರು, ಟ್ಯಾಕ್ಸಿಗಳಿಂದಾಗಿ 2063 ಅಪಘಾತಗಳಾಗಿದ್ದರೆ, ಬೈಕ್‌ಗಳಿಂದಾಗಿ 1752 ಅಪಘಾತಗಳಾಗಿವೆ. 2008 ರ ನವೆಂಬರ್ ತನಕ 2196 ಕಾರು, ಟ್ಯಾಕ್ಸಿ ಅಪಘಾತಗಳಾದರೆ ಬೈಕು ಇತರೆ ದ್ವಿಚಕ್ರಗಳಿಂದಾಗಿ 1602 ಅಪಘಾತಗಳಾಗಿವೆ. ಈ ಪ್ರಮಾಣಕ್ಕೆ ಹೋಲಿಸಿದರೆ ಬಸ್ಸು, ಆಟೋರಿಕ್ಷಾ, ಟೆಂಪೋ, ಮ್ಯಾಕ್ಸಿ ಕ್ಯಾಬ್ ಅಪಘಾತಗಳು ಏನೇನೂ ಅಲ್ಲ.

ಬೆಂಗಳೂರು ಪೂರ್ವ ವಲಯವೊಂದರ ಅಂಕಿಅಂಶಗಳೇ ಹೇಳುವಂತೆ 2005 ರಲ್ಲಿ 18 ವರ್ಷದೊಳಗಿನ 46 ಮಂದಿ, 19 ರಿಂದ 30 ರ ಒಳಗಿನ 257 ಮಂದಿ ಮತ್ತು 31 ರಿಂದ 50 ರ ವಯೋಮಾನದ 240 ಮಂದಿ ಆಕ್ಸಿಡೆಂಟಿಗೆ ಬಲಿಯಾಗಿದ್ದಾರೆ. ಇದರರ್ಥ 19 ರಿಂದ 30 ರ ಹರೆಯದವರೇ ಹೆಚ್ಚಾಗಿ ಅಪಘಾತಕ್ಕೆ ಬಲಿಯಾಗುತ್ತಿದ್ದಾರೆ. 2008 ರ ಅಂಕಿಅಂಶಗಳು ಇನ್ನೂ ಬೆಚ್ಚಿ ಬೀಳಿಸುತ್ತವೆ. ಅಂದರೆ 18 ವರ್ಷದೊಳಗಿನ 279 ಮಂದಿ ಮತ್ತು 31 ರಿಂದ 50 ರ ಒಳಗಿನ 1575 ಮಂದಿ ಅಪಘಾತದಲ್ಲಿ ಬಲಿಯಾದರೆ 19 ರಿಂದ 30 ರೊಳಗಿನ ಸತ್ತವರ ಸಂಖ್ಯೆ 1967,

ಬೈಕ್ ಸಂಬಂಧಿ ಅಪಘಾತಗಳಿಗೂ ಮತ್ತು ಸತ್ತವರ ವಯಸ್ಸಿಗೂ ಇರುವ ಸಂಬಂಧವೊಂದೇ ಸಾಕು ವೇಗದ ಹುಚ್ಚು ಅದೆಷ್ಟು ಅಪಾಯಕಾರಿ ಎಂಬುದಕ್ಕೆ. ■

ಯಾವತ್ತು ನೈಸ್ ರಸ್ತೆಯಲ್ಲೋ, ರಿಂಗ್‌ರಸ್ತೆಗಳಲ್ಲೋ ಡ್ರ್ಯಾಗ್ ...ೇಸ್ ನಡೆಯುತ್ತಿದೆಯೆಂಬ ಮಾಹಿತಿ ಸಿಕ್ಕಿ ಪೊಲೀಸರು ಧಾವಿಸು...ತ್ತಾರೋ ರೇಸಿಗೆ ಬಂದ ಪಡ್ಡೆಗಳ ಹಿಂಡು ಯಮ ವೇಗದಲ್ಲಿ ...ಪರಾರಿಯಾಗುತ್ತದೆ. ಹಾಗೊಮ್ಮೆ ಬೈಕ್ ಸಮೇತ ಪೊಲೀಸ ...ಗೇನಾದರೂ ಸಿಕ್ಕಿಬಿದ್ದ ...ಂದರೆ ಕತೆ ಮುಗಿ...ಂತೆಯೇ. ಇಂಥ ಬೈಕ್ ...ೋಕಿಲಾಲರ ಬಗ್ಗೆ ...ೂಡಲೇ ಸಿಟ್ಟಿಗೇಳುವ ...ಪೊಲೀಸರು ಇಂಥವರು ...ಕ್ಕಿದ್ದೇ ತಡ ಹಿಗ್ಗಾಮುಗ್ಗಾ ...ಬ್ಬುತ್ತಾರೆ. ಸಾಲದ್ದಕ್ಕೆ ಅಂಥ ...ರ ಅಪ್ಪ ಅಮ್ಮಂದಿರನ್ನೂ ...ಪೊಲೀಸ್ ಠಾಣೆಗೆ ಕರೆಸಿ ...ರ್ನ್ ಮಾಡಿ, ಬೈಕನ್ನೂ ...ಪ್ತಿ ಮಾಡಿಕೊಳ್ಳುತ್ತಾರೆ.



ಗಾಯಗೊಂಡಿರುವ ಮುಕ್ರಂನ ಸ್ನೇಹಿತ ಶಂಶೀರ್ ಅಹ್ಮದ್



ರೋಧಿಸುತ್ತಿರುವ ಮುಕ್ರಂನ ತಂದೆ-ತಾಯಿ


ಕಳೆದೆರಡು ವರ್ಷಗಳಿಂದ ಬೆಂಗಳೂರಿನ ಪೊಲೀಸರಿಗೆ ಈ ...ರದ ಡ್ರ್ಯಾಗ್ ರೇಸ್ ಪಿಡುಗು ಅದೆಷ್ಟು ತಲೆನೋವಾಗಿದೆಯೆಂದರೆ ...ೈಕ್ ಸಮೇತ ಸಿಕ್ಕಿಬಿದ್ದ ಬಹುತೇಕ ಹುಡುಗರು ಒಂದೋ ...ರ್ಕಾರದ ಉನ್ನತ ಅಧಿಕಾರಿಗಳ ಮಕ್ಕಳಾಗಿರುತ್ತಾರೆ ಅಥವಾ ...ಶ್ರೀಮಂತರ ಮಕ್ಕಳಾಗಿರುತ್ತಾರೆ. ಇತ್ತೀಚೆಗಷ್ಟೇ ವಾಲಂಟರಿ ರಿಟೈರ್...ಮೆಂಟ್ ಪಡೆದು ನಿವೃತ್ತರಾದ ...ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರು ...ಮ್ಮ ಮಗನಿಗೆ 14 ಲಕ್ಷದ ...ಬೈಕ್ ಕೊಡಿಸಿದ್ದರೆಂದರೆ ...ಕ್ಕಹಾಕಿ. ಬೈಕ್ ಮೇನಿಯಾ ...ಎಂಬುದು ಪಡ್ಡೆಹುಡುಗರ ...ಹಿರೋಯಿಸಂ' ಆಕರ್ಷಣೆಗಿಂತಲೂ ...ಅಪಾಯಕಾರಿ.

...ಸುರಕ್ಷಿತ ವ್ಯವಸ್ಥೆ?


'ಧೂಮ್' ಚಿತ್ರದ ಹೃತಿಕ್ ...ರೋಷನ್‌ನಂತೆಯೋ ...ಜಾಕಿಚಾನ್‌ನಂತೆಯೋ ದಿಲ್ದಾಗಿ ...ಬೈಕ್ ಓಡಿಸಲು ಹೋಗಿ ...ವರ್ಷಂಪ್ರತಿ ಬಲಿಯಾದ ...ಯುವಕರೆಲ್ಲರೂ ಹದಿನೆಂಟ...ರಿಂದ ಇಪ್ಪತ್ತೈದು ವರ್ಷದ ...ಒಳಗಿನವರೇ. ಡಿಸೆಂಬರ್ 28 ರ ರಾತ್ರಿ ಹೀಗೆ ಎಂ.ಜಿ. ರಸ್ತೆಯಲ್ಲಿ ಡ್ರ್ಯಾಗ್ ರೇಸ್‌ಗೆಂದು ಬಂದವನು ಬಿಟಿಎಂ ಲೇಔಟ್ ಬಸ್ ಮಾಲೀಕ ಮುಷ್ತಾಕ್ ಅಹ್ಮದ್‌ರ ಪುತ್ರ ಮುಕ್ರಮ್ ಪಾಷಾ. ಆತನಿಗಿನ್ನೂ ಇಪ್ಪತ್ತರ ಹರೆಯವಿತ್ತು, ಜೊತೆಗೊಂದು ಕಾರಿನಲ್ಲಿ ಐದಾರು ಮಂದಿ ಸ್ನೇಹಿತರಿದ್ದರೂ ತಾನು ಮಾತ್ರ ಬೈಕಲ್ಲೇ ವೀಲಿಂಗ್ ಮಾಡಿಕೊಂಡು ಬಂದ. ನಾಕಾಬಂಧಿ ಹಾಕಿದ್ದ ಪೊಲೀಸರ ಕೈಗೆ ಸಿಕ್ಕಿಬಿದ್ದ. ಅವರಿಂದ ತಪ್ಪಿಸಿಕೊಳ್ಳಲು ಶರವೇಗದಿಂದ ಬೈಕ್ ಓಡಿಸಲು ಹೋಗಿ ಆಕ್ಸಿಡೆಂಟ್‌ಗೆ ಈಡಾದ. ಇನ್ನೇನು ಪೊಲೀಸರು ಹಿಡಿಯುತ್ತಾರೆಂಬ ಭೀತಿಗೆ ಬಿದ್ದು ಪಕ್ಕದ ಮಿಲಿಟರಿ ಫ್ಲಾನ್ ಹೌಸ್ ಕಾಂಪೌಂಡಿಗೆ ನೆಗೆದ.

ಬೈಕ್‌ನ ರೂಪದಲ್ಲಿ ಬರಬೇಕಿದ್ದ ಸಾವು ಈ ಬಾರಿ ಮಿಲಿಟರಿ ಸಿಬ್ಬಂದಿಯ ಬುಲೆಟ್ಟಿನ ರೂಪದಲ್ಲಿತ್ತು, ಯಾರೋ ಟೆರರಿಸ್ಟ್ ಇರಬೇಕೆಂದು ಗುಂಡು ಹಾರಿಸಿದ ಮಿಲಿಟರಿ ಅಧಿಕಾರಿಗೆ ತಾನು ನಿಷ್ಪಾಪಿ, ನಿರಪರಾಧಿ ಯುವಕನನ್ನು ಕೊಲ್ಲುತ್ತಿದ್ದೇನೆಂಬ ಲೆಕ್ಕಾಚಾರವಾದರೂ ಎಲ್ಲಿತ್ತು?

ಬಹುಶಃ ಕೊಂದ ಮಿಲಿಟರಿ ಅಧಿಕಾರಿಯು ಕೂಡ ತನ್ನ ಕೈತಪ್ಪಿಗೆ ಕಣ್ಣೀರಿಟ್ಟಿರಬೇಕು. ಪರಿತಪಿಸಿರಬೇಕು. ಮುಕ್ರಂ ಪಾಷಾನ ದುರಂತಕ್ಕೆ ಮರುಗದವರ್ಯಾರು? ಆದರೆ ಆತನನ್ನು ಅಂಥದೊಂದು ದುರಂತಕ್ಕೆ ಕೈಹಿಡಿದು ತಂದ ಬೈಕ್ ಮೇನಿಯಾ ಇದೆಯಲ್ಲ; ಅದು ಬೈಕ್ ಓಡಿಸುವವನನ್ನೂ ಕೊಲ್ಲುತ್ತದೆ. ತನ್ನ ಪಾಡಿಗೆ ತಾನು ಹೋಗುತ್ತಿದ್ದ ದಾರಿಹೋಕನನ್ನೂ ಕೊಲ್ಲುತ್ತದೆ. ಯೌವ್ವನದ ಉನ್ಮಾದಕ್ಕಾಗಿ ಬೈಕೂ ಬೇಕು, ಥ್ರಿಲ್ಲಿಗಾಗಿ ಸ್ಪೀಡೂ ಬೇಕು. ಅದಕ್ಕಾಗಿ ಸುರಕ್ಷಿತ ವ್ಯವಸ್ಥೆಯೊಂದನ್ನು ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಾಗಲಿ. ಈಗಲಾದರೂ ಹುಡುಗರು ಅರಿತುಕೊಳ್ಳಲಿ; speed thrills but kills....! ■



ಬಾಗಲಕೋಟೆ: ಬಿಟಿಡಿಯ ನುಂಗಣ್ಣರು



ವೀರಣ್ಣ ಚರಂತಿಮಠ

ಬಾಗಲಕೋಟೆಯನ್ನು ಉದ್ಧಾರ ಮಾಡುವುದಕ್ಕಾಗಿ ಹುಟ್ಟಿಕೊಂಡ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ (ಬಿಟಿಡಿ) ನಗರವನ್ನು ಎಷ್ಟು ಉದ್ಧಾರ ಮಾಡಿದೆಯೋ ಗೊತ್ತಿಲ್ಲ, ಆದರೆ ತನ್ನ ನುಂಗಣ್ಣ ಅಧಿಕಾರಿಗಳನ್ನಂತೂ ಕೋಟ್ಯಾಧಿಪತಿಗಳನ್ನಾಗಿಸಿದೆ. ಇಲ್ಲಿರುವ ಒಬ್ಬೊಬ್ಬ ಅಧಿಕಾರಿಯ ಚರಿತ್ರೆಯನ್ನು ಸ್ವಲ್ಪ ಕೆದಕಿದರೆ ಸಾಕು ಎಷ್ಟೆಷ್ಟು ದುಡ್ಡು ನುಂಗಿದ್ದಾರೆ ಎಂಬ ಸತ್ಯ ಕಣ್ಣಿಗೆ ರಾಚುತ್ತದೆ; ಜೊತೆಗೆ ಬಾಗಲಕೋಟೆ ಯಾಕಿಷ್ಟು ಅಧ್ವಾನವಾಗಿದೆ ಎಂಬುದೂ ಅರ್ಥವಾಗುತ್ತದೆ.

ಬಿಟಿಡಿಗೆ ಈಗ ನಿಂಗರಾಜ್ ವಾಲಿ ಎಂಬುವವನು ಅಧ್ಯಕ್ಷನಾಗಿ ವಕ್ಕರಿಸಿಕೊಂಡಿದ್ದಾನೆ. ಈತ ವೀರಣ್ಣ ಚರಂತಿಮಠನ ಎಡಗೈ. ಚರಂತಿಮಠ ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿ ಸಾಕಷ್ಟು ದುಡ್ಡು ಸುರಿಸಿದ ಆಸಾಮಿ. ಅದಕ್ಕೆ ಪ್ರತಿಫಲ ನೀಡುವುದಕ್ಕಾಗಿ ಚರಂತಿಮಠ ವಾಲಿಗೆ ಈ ಹುದ್ದೆ ದಯಪಾಲಿಸಿದ್ದಾನೆ. ನಿಂಗರಾಜ್ ವಾಲಿ ಅಸಲಿಗೆ ಒಬ್ಬ ರಾಜಕಾರಣಿಯೂ ಅಲ್ಲ, ಅಧಿಕಾರಿಯೂ ಅಲ್ಲ. ಮೊನ್ನೆಮೊನ್ನೆಯ ತನಕ ಮದ್ದು, ಗುಂಡು, ಗನ್ ವ್ಯಾಪಾರ ಮಾಡಿಕೊಂಡಿದ್ದವನು.

ಮಹಾರಾಷ್ಟ್ರದ ಮಾಲೇಗಾಂವ್ ಸ್ಫೋಟ ಪ್ರಕರಣದಲ್ಲಿ ಸಂಘಪರಿವಾರದ ಶಿಖಾಮಣಿಗಳು ಭಾಗಿಯಾಗಿದ್ದಾರೆಂಬುದು ಬಯಲಾಗುತ್ತಿದ್ದಂತೆ ಕರ್ನಾಟಕದಲ್ಲಿ ಸಂಘಪರಿವಾರಿಗಳಿಗೆ ನಿಂಗರಾಜ್ ವಾಲಿ ಎಷ್ಟೆಷ್ಟು ಮದ್ದುಗುಂಡುಗಳನ್ನು ಸಪ್ಲೈ ಮಾಡಿದ್ದಾನೆ ಎಂಬ ಅಂಶವನ್ನು ಪೊಲೀಸರು ತನಿಖೆ ನಡೆಸಲಾರಂಭಿಸಿದ್ದರು. ಅದಕ್ಕೆ ಅಡ್ಡಗಾಗಲು ಹಾಕಿದ ಚರಂತಿಮಠ ವಾಲಿಗೊಂದು ಕುರ್ಚಿ ಒದಗಿಸಿಕೊಟ್ಟಿದ್ದಾನೆ. ಮದ್ದುಗುಂಡಿನ ವ್ಯಾಪಾರಿಯೊಬ್ಬ ಬಿಟಿಡಿಯಂಥ ಪ್ರಾಧಿಕಾರದ ನೇತೃತ್ವ ವಹಿಸಿಕೊಂಡರೆ ಏನಾಗಬಹುದೆಂದು ನೀವೇ ಯೋಚಿಸಿ.

ಬಿಟಿಡಿಯ ಇನ್ನಿತರ ಅಧಿಕಾರಿಗಳದ್ದೂ ಇದೇ ಕತೆ. ನಿನ್ನೆ ಮೊನ್ನೆಯ ತನಕ ಇಲ್ಲಿ ಸುದರ್ಶನ್ ಎಂಬ ಮುಖ್ಯ ಎಂಜಿನಿಯರ್ ಇದ್ದ. ಈತ ರಾಜ್ಯಪಾಲರ ಅಧಿಕಾರಾವಧಿಯಲ್ಲಿ ಕೃಷ್ಣಾ ಭಾಗ್ಯ ಜಲನಿಗಮದ ನಿರ್ದೇಶಕರ ಅನುಮತಿಯಿಲ್ಲದೇ 200 ಕೋಟಿ ಅಂದಾಜು ವೆಚ್ಚದ ಸುಮಾರು 40 ಟೆಂಡರ್ ಕರೆದು ವರ್ಕ್ ಆರ್ಡರ್ ಕೊಟ್ಟಿದ್ದ. ಅದಕ್ಕಾಗಿಯೇ ಬನ್ನೂರ್ ಎಂಬ ತನ್ನ ಚೇಲಾನೊಬ್ಬನನ್ನು ಪರಭಾರಿ ಲೆಕ್ಕಾಧಿಕಾರಿಯನ್ನಾಗಿ ನೇಮಿಸಿಕೊಂಡಿದ್ದ. ಈತನಿಗೆ ಚೆಕ್‌ಗಳ ಮೇಲೆ ಸಹಿ ಮಾಡುವ ಅಧಿಕಾರವಿಲ್ಲದಿದ್ದರೂ ಲಕ್ಷಾಂತರ ಮೌಲ್ಯದ ಚೆಕ್‌ಗಳಿಗೆ ಈತನೇ ಸಹಿ ಹಾಕುತ್ತಿದ್ದ. ಇನ್ನೂ ದುರಂತ ಎಂದರೆ ಬ್ಯಾಂಕಿನಲ್ಲಿ ಅವೆಲ್ಲಾ ಪಾಸ್ ಆಗಿವೆ!

ಈ ಲೂಟಿಯಲ್ಲಿ ಚರಂತಿಮಠನ ತಮ್ಮ ಮಲ್ಲಿಕಾರ್ಜುನನಿಗೆ ಸರಿಯಾದ ಪರ್ಸೆಂಟೇಜ್ ಸಿಗಲಿಲ್ಲವಾದ್ದರಿಂದ ಆತ ಸುದರ್ಶನ್ ವಿರುದ್ಧ ತಿರುಗಿಬಿದ್ದ. ಆದರೆ, ಸುದರ್ಶನ್ ಎಂಥ ಚಾಲಾಕಿ ಎಂದರೆ ಅಷ್ಟೂ ದುಡ್ಡನ್ನು ತಾನೇ ತಿಂದು ತೇಗಿದನೇ ಹೊರತು ಚರಂತಿಮಠ ಫ್ಯಾಮಿಲಿಗೆ ಒಂದು ಬಿಡಿಗಾಸನ್ನೂ ಕೊಡಲಿಲ್ಲ. ಯಾವಾಗ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೇರಿತೋ ಚರಂತಿಮಠ ಸುದರ್ಶನನ ವರ್ಗಾವಣೆ ಆರ್ಡರ್ ತೆಗೆದುಕೊಂಡು ಬಂದ. ಅಷ್ಟು ಹೊತ್ತಿಗಾಗಲೇ ಬಿಟಿಡಿಯನ್ನು ಅರ್ಧ ಲೂಟಿ ಹೊಡೆದಿದ್ದ ಸುದರ್ಶನ್ ಸೂಟ್‌ಕೇಸ್ ತುಂಬಾ ದುಡ್ಡು ತುಂಬಿಕೊಂಡು ಬೆಂಗಳೂರಿಗೆ ಕಾಲ್ಕಿತ್ತ, ಅವನ ಜಾಗಕ್ಕೆ ಹತ್ತು ಲಕ್ಷ ಕೊಟ್ಟ ಕಣಗಾವಿ ಎಂಬ ಇನ್ನೊಬ್ಬ ಕಳ್ಳನನ್ನು ಚರಂತಿಮಠ ತಂದು ಕೂಡ್ರಿಸಿದ್ದಾನೆ. ಇನ್ನು ಮುಂದೆ ನಡೆಯುವ ಲೂಟಿ ಸುದರ್ಶನ್ ನಡೆಸಿದ ಲೂಟಿಗಿಂತ ಜೋರಾಗಿರುತ್ತೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಸುದರ್ಶನನೊಂದಿಗೆ ಜಗಳ ಕಾದು ಬಿಟಿಡಿ ಬಿಟ್ಟು ಹೋದ ಇನ್ನೊಬ್ಬ ಅಧಿಕಾರಿಯೆಂದರೆ ಕರಿಯಪ್ಪನವರ. ಈತ ಬಿಟಿಡಿಯಲ್ಲಿ ಕಾರ್ಯನಿರ್ವಾಹಕ ಹುದ್ದೆ ಹೊಂದಿದ್ದವನು. ಈತ ತನ್ನ ಅಧಿಕಾರಾವಧಿಯಲ್ಲಿ ರಸ್ತೆಯ ಒಂದು ಗುಂಡಿ ಮುಚ್ಚಿದ ಉದಾಹರಣೆಯಿಲ್ಲ, ತನ್ನ ಪರಮಾಪ್ತ ಕುಲಕರ್ಣಿ ಎಂಬ ಬ್ರಾಹ್ಮಣ ಕಂಟ್ರಾಕ್ಟರ್‌ನೊಂದಿಗೆ ಶಾಮೀಲಾಗಿ ಬಿಟಿಡಿಯನ್ನು ದೋಚಿದ್ದೇ ಈ ಮಹಾಶಯ ಮಾಡಿದ ಬಹುದೊಡ್ಡ ಸಾಧನೆ. ಚರಂತಿಮಠನಿಗೆ ಈತನೂ ಬಿಡಿಗಾಸೂ ಕೊಡಲಿಲ್ಲವೆಂಬ ಕಾರಣಕ್ಕೆ ಅವನನ್ನೂ ಬಿಟಿಡಿಯಿಂದ ಓಡಿಸಲಾಗಿದೆ. ಚರಂತಿಮಠನಿಗೆ ಐದು ಲಕ್ಷ ಕೊಟ್ಟ ಚಿನ್ನಪ್ಪ ಆದಿನ ಈಗ ಈ ಜಾಗ ಆಕ್ರಮಿಸಿಕೊಂಡಿದ್ದಾನೆ. ಚಿನ್ನಪ್ಪನ ಎದುರಿಗಿರುವ ಒಂದೇ ಗುರಿ ಎಂದರೆ ಚರಂತಿಮಠನ ಪಾದಕ್ಕೆ ಸುರಿದ ದುಡ್ಡಿನ ಐದು ಪಟ್ಟನ್ನಾದರೂ ದೋಚುವುದು. ಅದಕ್ಕಾಗಿಯೇ ಆತ ತನ್ನ ಸ್ವಂತ ಮಗನನ್ನೇ ಕಾಂಟ್ರಾಕ್ಟರ್‌ನನ್ನಾಗಿ ಮಾಡಿ ಕಾಮಗಾರಿಗಳನ್ನು ಕೊಡಿಸುತ್ತಿದ್ದಾನೆ. ತನ್ನ ಹಗಲು ದರೋಡೆಗೆ ಸಿಬ್ಬಂದಿಯಿಂದ ಯಾವುದೇ ಪ್ರತಿರೋಧ ಬಾರದಿರಲಿ ಎಂದು ಎಡಬ್ಲ್ಯೂಇ ಪಾಟೀಲ್, ಮೇಟಿ, ತೇಲಸಂಗ್‌ನಂತಹ ಜನರನ್ನು ಜೊತೆಗಿಟ್ಟುಕೊಂಡಿದ್ದಾನೆ. ಇವರಿಗೆ ಆಗಾಗ್ಗೆ ಒಂದಿಷ್ಟು ಬಿಸ್ಕತ್ತು ತಿನ್ನಿಸುತ್ತಾ ಸಂಭಾಳಿಸಲೆಂದು ರಾಠೋಡ್, ಒಂಟಗುಡಿ, ಬುಡ್ಡೋಡಗಿ, ಮರುಟಗಿ, ಬಿ.ಎಮ್.ಪಾಟೀಲ್, ಮೇಟಿಯಂಥ ಕಳಪೆ ಕಾಮಗಾರಿಯ ಕಾಂಟ್ರಾಕ್ಟರ್‌ಗಳನ್ನು ಸಾಕಿಕೊಂಡಿದ್ದಾನೆ.



ನಿಂಗರಾಜ್ ವಾಲಿ

ಇಂತಹ ಬಕಾಸುರರನ್ನು ಒಡಲೊಳಗೆ ಇಟ್ಟುಕೊಂಡಿರುವ ಬಾಗಲಕೋಟೆ ನಗರ ಪ್ರಾಧಿಕಾರ ಬಾಗಲಕೋಟೆಯನ್ನು ಉದ್ಧಾರ ಮಾಡೀತೆ? ಅದರಲ್ಲೂ ಈಗ ನಿಂಗರಾಜ್ ವಾಲಿಯಂಥ ಕದೀಮನೇ ಈ ಹಗಲುಗಳ್ಳರಿಗೆ ನಾಯಕನಾಗಿ ವಕ್ಕರಿಸಿಕೊಂಡಿರುವಾಗ? ಬಾಗಲಕೋಟೆ ರಸ್ತೆಯ ಒಂದೇ ಒಂದು ಗುಂಡಿ ಮುಚ್ಚಿದರೆ ಕೇಳಿ.

■ ಮೇಘರಾಜ್

ಸಿದ್ದರಾಮಯ್ಯ ಹೊಸ ಪಕ್ಷ ಬೇಕೆ?



ಸಿದ್ದರಾಮಯ್ಯ ಹೊಸ ರಾಜಕೀಯ ಪಕ್ಷ ಲಾಂಚ್ ಮಾಡಲು ರೆಡಿಯಾಗುತ್ತಿದ್ದಾರಾ?

'ಜನವರಿ ಐದನೇ ತಾರೀಖಿನ ನಂತರ ಮಾತಾಡುತ್ತೇನೆ, ಅಲ್ಲೀತನಕ ಕಾಯಿರಿ' ಅಂತ ಸಿದ್ದರಾಮಯ್ಯ ಒಂದು ಹೇಳಿಕೆಯೇನೊ ಕೊಟ್ಟಿದ್ದಾರೆ. ಆದರೆ ಅವರ ಹಿಂಬಾಲಕರ ಪಡೆ ಅಲ್ಲೀತನಕವೂ ಕಾಯಲು ಸಿದ್ಧರಿರದೆ ಅವಸರದಲ್ಲಿ ತಮ್ಮ ಮುಂದಿನ ಯೋಜನೆಗಳ ಬಗ್ಗೆ ಮಾತನಾಡಲು ಶುರುಮಾಡಿದ್ದಾರೆ.

ಅದರಲ್ಲಿ ಸಿದ್ದು ಅಂತಿಮ ತೀರ್ಮಾನ ಅನ್ನುವುದು ಎಷ್ಟಿದೆ, ಬೆಂಬಲಿಗರ ಒತ್ತಡ ಎಷ್ಟಿದೆ ಅನ್ನುವುದು ಮುಂದೆ ನಿಧಾನವಾಗಿ ತಿಳಿಯಬಹುದು. ಆದರೆ ಸದ್ಯಕ್ಕಂತೂ ಸಿದ್ದರಾಮಯ್ಯ ಕ್ಯಾಂಪಿನೊಳಗಿಂದ ಹೊಸ ಪಕ್ಷದ ಮಾತುಗಳು ಕೇಳಿಬರುತ್ತಿರುವುದಂತೂ ನಿಜ.


ಕುರುಬ ಸಂಘಟನೆಯ ನಾಯಕ ಮುಕುಡಪ್ಪ ಅಹಿಂದ ನಾಯಕ ಮಳವಳ್ಳಿ ಶಿವಣ್ಣ ವರ್ತೂರು ಪ್ರಕಾಶ್ ಇನ್ನೂ ಮುಂತಾದವರು ಹೊಸ ಪಕ್ಷದ ಭರಾಟೆಯಲ್ಲಿರುವ ಜನ. ಅವರ ಪ್ರಕಾರ ಸಿದ್ದು ಗುಂಪಿನ ಮುಂದಿನ ಕಾರ್ಯಚಟುವಟಿಕೆಗಳು ಹೀಗಿರುತ್ತದಂತೆ. 2009 ರ ಜನವರಿ ಎರಡನೇ ವಾರದವರೆಗೂ ಸಮಾನಮನಸ್ಕರೊಂದಿಗೆ ಸಮಾಲೋಚನೆ, ಆಮೇಲೆ ಫೆಬ್ರವರಿ ಮೊದಲ ವಾರದಲ್ಲಿ ದಾವಣಗೆರೆಯಲ್ಲಿ ಹತ್ತು ಲಕ್ಷ ಜನರ ಒಂದು ಬೃಹತ್ ಸಮಾವೇಶ ನಡೆಸಿ ಹೊಸ ಪಕ್ಷವನ್ನು ಅಸ್ತಿತ್ವಕ್ಕೆ ತರುವುದು. ನಂತರ ತುರ್ತಾಗಿ ಮುಂದಿನ ಪಾರ್ಲಿಮೆಂಟ್ ಚುನಾವಣಾ ತಯಾರಿ ಶುರುಮಾಡಿ ಕನಿಷ್ಠ ಆರೆಂಟು ಸೀಟು ಗೆಲ್ಲುವ ಪ್ರಯತ್ನ ಮಾಡುವುದು.. ಆಮೇಲೆ ಅಲ್ಲಿಂದಾಚೆಗಿನದೆಲ್ಲಾ ಸದ್ಯಕ್ಕೆ ಅಸ್ಪಷ್ಟವಾಗಿದೆ. ಆದರೆ ಸಿದ್ದು ಹೊಸ ಪಾರ್ಟಿ ಅಂತೇನಾದರೂ ಮಾಡಿದರೆ ಅದಕ್ಕೆ ಕರ್ನಾಟಕ ಜನತಾದಳ, ಕರ್ನಾಟಕ ಪ್ರಗತಿಪರ ಜನತಾದಳ ಅಥವಾ ಕರ್ನಾಟಕ ಪ್ರಜಾತಾಂತ್ರಿಕ ಜನತಾದಳ ಎಂಬ ಹೆಸರಿಡಲು ಕೆಲವರು ಈಗಾಗಲೇ ತೀರ್ಮಾನವನ್ನೇ ಮಾಡಿಬಿಟ್ಟಿದ್ದಾರೆ!

ಏನಿದೆಲ್ಲಾ ನಿಜವೇ ಎಂದು ಕೇಳಿದರೆ ಸಿದ್ದರಾಮಯ್ಯ ಹೌದು ಅಂತಲೂ ಹೇಳುತ್ತಿಲ್ಲ, ಇಲ್ಲಾ ಅಂತಲೂ ನಿರಾಕರಿಸುತ್ತಿಲ್ಲ. ಆದರೆ ಅದೇ ಹಿಂದಿನ ಎಬಿಪಿಜೆಡಿ ಪಕ್ಷದ ಕೋದಂಡರಾಮಯ್ಯ ಮತ್ತಿತರ ನಾಯಕರು ಮಾತ್ರ 'ಅಂತ ಸಾಧ್ಯತೆಗಳಿಲ್ಲ' ಎಂದು ಖಚಿತವಾಗಿ ಹೇಳುತ್ತಿದ್ದಾರೆ. ಆದರೆ ಈ ಹೊಸ ಪಕ್ಷದ ಊಹಾಪೋಹಗಳ ನಡುವೆಯೇ ಸಿದ್ದು ತಮ್ಮ ಮುನಿಸಿನ ಮನೆಯಿಂದಾಚೆ ಇಣುಕಲು ಶುರು ಮಾಡಿರುವುದಂತೂ ಸತ್ಯ.

ನೆರೆಯ ಆಂಧ್ರಪ್ರದೇಶದ ಹೊಸ ರಾಜಕೀಯ ನಾಯಕ ಪ್ರಜಾರಾಜ್ಯಂ ಪಕ್ಷದ ಚಿರಂಜೀವಿ ಜೊತೆ ಸಿದ್ದು ನಿರಂತರ ಸಂಪರ್ಕದಲ್ಲಿರುವುದು ಈಗ ದೃಢಪಟ್ಟಿದೆ. ಆಂಧ್ರದಲ್ಲಿ ಚಿರಂಜೀವಿಯ ಪಕ್ಷ ಈಗ ಒಂದು ಮಟ್ಟದ ಅಲೆ ಎಬ್ಬಿಸಿರುವುದೇನೊ ನಿಜ. ಅಲ್ಲಿನ ಬೆಳವಣಿಗೆಗಳನ್ನು ವಿಶೇಷವಾಗಿ ಗಮನಿಸುತ್ತಿರುವ ಸಿದ್ದರಾಮಯ್ಯ ಅಂತಾ ಸಾಧ್ಯತೆ ಕರ್ನಾಟಕದಲ್ಲೂ ತರಬಾರದೇಕೆ ಎಂದು ಯೋಚಿಸುತ್ತಿರುವಂತಿದೆ. ಕಾಂಗ್ರೆಸ್ಸು, ತೆಲುಗು ದೇಶಂ, ಬಿಜೆಪಿಗಳಿಂದ ದೂರ ನಿಂತು ತನ್ನದೇ ಪ್ರಭಾವ ವಲಯ, ಜಾತಿ ಬೆಂಬಲ ಬಳಸಿಕೊಂಡು ಪ್ರಜಾರಾಜ್ಯಂ ಕಟ್ಟುತ್ತಿರುವ ಚಿರಂಜೀವಿ ಕೂಡ ಈಗ ಪದೇಪದೇ ಸಿದ್ದುಗೆ ಫೋನ್ ಮಾಡಿ ಹೊಸ ಪಕ್ಷ ಕಟ್ಟುವಂತೆ ಹುರಿದುಂಬಿಸುತ್ತಿದ್ದಾನೆ. ಇವರಿಬ್ಬರ ಈ ಹೊಸ ಗೆಳೆತನದ ಭಾಗವಾಗಿ ಸಿದ್ದು ಜನವರಿ 21 ರಂದು ಹೈದರಾಬಾದಿಗೆ ಹೊರಟಿದ್ದಾರೆ. ಅವತ್ತು ಪ್ರಜಾರಾಜ್ಯಂ ವತಿಯಿಂದ ಕುರುಬ ಹಾಗೂ ಹಿಂದುಳಿದ ಜನಾಂಗಗಳ ಬೃಹತ್ ಸಮಾವೇಶ ಆ ಯೋಜನೆಯಾಗಿದ್ದು ಸಿದ್ದರಾಮಯ್ಯ ಉದ್ಘಾಟಿಸುತ್ತಿದ್ದಾರೆ. ಆಂಧ್ರದಲ್ಲಿ ಹತ್ತಿರತ್ತಿರ ಎಂಬತ್ತು ಲಕ್ಷದಷ್ಟು ಕುರುಬ ಜನಾಂಗದವರಿದ್ದು ಅವರನ್ನು ಪ್ರಜಾರಾಜ್ಯಂ ಕಡೆಗೆ ಸೆಳೆಯಲು ಚಿರಂಜೀವಿ



ಕೋದಂಡರಾಮಯ್ಯ





ಸಿದ್ದರಾಮಯ್ಯನವರನ್ನು ಕರೆಸುತ್ತಿದ್ದಾರೆ. ಇದರಿಂದ ಸಿದ್ದು ಇಮೇಜಿಗೆ ಇನ್ನೊಂದಿಷ್ಟು ಬಲ ಬಂದಂತಾಗಿದೆ. ಇದುವರೆವಿಗೂ ಸಿದ್ದುಗೆ ಆಂಧ್ರ ರಾಜಕೀಯದಲ್ಲಿ ಅಥವಾ ಅಲ್ಲಿನ ಕುರುಬ ಜನಾಂಗದ ನಡುವೆ ಏನೇನೂ ಪ್ರಭಾವ ಪಾತ್ರ ಇರಲಿಲ್ಲ, ಈಗ ಅಂತಾ ಹೊಸ ಅವಕಾಶವೂ ಸಿಗುತ್ತಿದೆ. ಇದರಿಂದ ಚಿರಂಜೀವಿಗೆ ಎಷ್ಟು ಉಪಯೋಗವಾಗಲಿದೆಯೋ ಹೇಳಲಾಗದು, ಆದರೆ ಅದಕ್ಕೆ ಪ್ರತ್ಯುಪಕಾರವಾಗಿ ಚಿರಂಜೀವಿ ದಾವಣಗೆರೆಗೆ ಬರುತ್ತಾನಂತೆ ಎಂಬ ಮಾತು ಕೇಳಿಬಂದಿದೆ. ಸಿದ್ದು ಹೊಸ ಪಕ್ಷ ಲಾಂಚ್ ಮಾಡಿದರೆ ಚಿರಂಜೀವಿ ಕರ್ನಾಟಕಕ್ಕೂ ಬಂದು ಸಿದ್ದು ಹೊಸ ಪಕ್ಷ ಕಟ್ಟಲು ನೆರವಾಗುತ್ತಾನಂತೆ!

ಇದು ಸಿದ್ದು ಬೆಂಬಲಿಗರ ಅಂಬೋಣ. ಸದ್ಯಕ್ಕೆ ಇದೆಲ್ಲಾ ನಿಜ ಅಂತಂದುಕೊಂಡರೂ ಅದರಿಂದ ಆಗುವ ಪ್ರಯೋಜನವೇನು? ಹೊಸಪಾರ್ಟಿ ಕಟ್ಟುವುದೆಂದರೆ ಅಷ್ಟು ಸುಲಭನಾ? ಹಣ ಎಲ್ಲಿಂದ ತರ್ತೀರಾ? ನಿಮ್ಮ ಜೊತೆ ಯಾರ್‍ಯಾರು ಬರುತ್ತಿದ್ದಾರೆ? ಎಂಬ ಪ್ರಶ್ನೆಗಳನ್ನು ಹಾಕಿದರೆ,

"ಎಲ್ಲರೂ ಜೊತೆಗೆ ಬರ್ತಾರೆ, ಜನ ದುಡ್ಡು ಕೊಡುತ್ತೇವೆ ಅಂತಿದ್ದಾರೆ" ಎಂಬ ರೆಡಿಮೇಡ್ ಉತ್ತರ ಬೆಂಬಲಿಗರದ್ದು. ಹೊಸ ಪಕ್ಷದ ಸಾಧಕಬಾಧಕಗಳೇನೇ ಇರಲಿ ಸಿದ್ದು ಕ್ಯಾಂಪಿಗೆ ಇಷ್ಟು ಅವಸರವಾಗಿ ಆಕ್ರೋಶಗಳಿಗೆ ಪ್ರಚೋದನೆ ನೀಡುತ್ತಿರುವವರು ಮಾತ್ರ ಕಾಂಗ್ರೆಸ್ಸಿಗರು!

ಈಗ್ಗೆ ಎರಡು ವರ್ಷಗಳ ಹಿಂದೆ ಸಿದ್ದರಾಮಯ್ಯ ನಾಯಕತ್ವದ ಎಬಿಪಿಜೆಡಿ ಪಾರ್ಟಿ ಕಾಂಗ್ರೆಸ್ಸಿನೊಂದಿಗೆ ವಿಲೀನವಾಯಿತಲ್ಲ ಆವಾಗಿನಿಂದ ಆ ಪಾರ್ಟಿಯ ಲೀಡರ್‌ಗಳಾಗಿದ್ದ ಕೋದಂಡರಾಮಯ್ಯ ಬಿ.ಆರ್.ಪಾಟೀಲ್ ಹೆಚ್.ಸಿ. ಮಹದೇವಪ್ಪ ಇವರ್‍ಯಾರಿಗೂ ಇವತ್ತಿನವರೆಗೂ ಕಾಂಗ್ರೆಸ್‌ನಲ್ಲಿ ಯಾವ ಸ್ಥಾನಮಾನವೂ ಸಿಕ್ಕಿಲ್ಲ- ಸ್ವತಃ ಸಿದ್ದರಾಮಯ್ಯನವರಿಗೆ ಕಾಂಗ್ರೆಸ್‌ನಲ್ಲಿ ಜಾಗ ಸಿಕ್ಕಿಲ್ಲ ಅಂದಮೇಲೆ ಉಳಿದವರ ಪಾಡೇನಾಗಬೇಕು? ಇವರೆಲ್ಲಾ ಕಾಂಗ್ರೆಸ್‌ನಲ್ಲಿದ್ದಾರೆಂಬುದನ್ನು ದೂರದ ದೆಹಲಿಯಲ್ಲಿರುವ ಹೈಕಮಾಂಡ್ ಇರಲಿ ಇಲ್ಲೇ ಬೆಂಗಳೂರಿನಲ್ಲಿರುವ ರಾಜ್ಯ ಕಾಂಗ್ರೆ ನಾಯಕರು ಮರೆತುಬಿಟ್ಟಿದ್ದಾರೆ. ಈ ದಿವ್ಯ ನಿರ್ಲಕ್ಷ್ಯ ಕಂಡು ರೋಸಿಹೋಗಿರುವ ಸಿದ್ದು ಗುಂಪಿನ ನಾಯಕರುಗಳಿಗೆ ಇರಿಸುಮುರಿಸಿನ ಪರಿಸ್ಥಿತಿ ಈಗ. ಹಾಗಿದ್ದಾಗಲೂ ಹೊಸ ಪಕ್ಷದ ಬಗ್ಗೆ ಬಹುತೇಕರಿಗೆ ಒಲವಿಲ್ಲ. ಇಂದಲ್ಲ ನಾಳೆ ಒಳ್ಳೆ ಕಾಲ ಬರಬಹುದೆಂಬ ನಿರೀಕ್ಷೆ ಅವರದ್ದು.

ಕಾಂಗ್ರೆಸ್ ಕಕ್ಕಾಬಿಕ್ಕಿ

ಕಾಂಗ್ರೆಸ್ ಹೈಕಮಾಂಡಿನ ಅವಿವೇಕತನ ಹಾಗು ಸಿದ್ದು ದುಡುಕುತನಗಳೇ ಇವತ್ತಿನ Stalement ಗೆ ಪ್ರಧಾನ ಕಾರಣಗಳಾಗಿವೆ. ಸಿದ್ದರಾಮಯ್ಯ ತರಹ ಮಾಸ್ ಲೀಡರ್ ಅನ್ನು ಕಳೆದೆರಡು ವರ್ಷಗಳಿಂದಲೂ ಮೂಲೆಗುಂಪು ಮಾಡಿರುವ ಕಾಂಗ್ರೆಗಳಿಗೆ ಸದ್ಯಕ್ಕಂತೂ ಬುದ್ದಿಬರುವ ಲಕ್ಷಣಗಳಿಲ್ಲ, ಸಿದ್ದು ಹಿಂಬಾಲಕರು ಅವಸರ ಮಾಡುತ್ತಿರುವಂತೆಯೇ ನಾಳೆ ಹೊಸ ಪಕ್ಷ ಅಸ್ತಿತ್ವಕ್ಕೆ ಬಂದೇ ಬಿಟ್ಟರೆ ಅದರ ಹೊಡೆತ ನೇರವಾಗಿ ಕಾಂಗ್ರೆಸ್‌ಗೆ ಬೀಳುತ್ತದೆಯೇ ವಿನಃ ಜೆಡಿಎಸ್‌ಗೂ ಅಲ್ಲ ಬಿಜೆಪಿಗೂ ಅಲ್ಲ, ಇನ್‌ಫ್ಯಾಕ್ಟ್ ಅದರಿಂದ ಜಾಸ್ತಿ ಲಾಭವಾಗುವುದು ಬಿಜೆಪಿಗಳಿಗೆ ವಿನಃ ಸಿದ್ದರಾಮಯ್ಯನವರ ಕರ್ನಾಟಕ ಜನತಾದಳಕ್ಕೂ ಅಲ್ಲ. ಹೊಸ ಪಕ್ಷದ ಊಹಾಪೋಹಗಳನ್ನು ಹೀಗೆ ತೇಲಿಬಿಟ್ಟು ತಣ್ಣಗೆ ಕುಳಿತಿರುವ ಬದಲಾಗಿ ಸಿದ್ದರಾಮಯ್ಯ ಈಗಲಾದರೂ ಚೆನ್ನಾಗಿ ಯೋಚಿಸಿ ಒಂದು ಖಚಿತ ತೀರ್ಮಾನ ಮಾಡಬೇಕಿದೆ.

ಒಂದೋ ಕಾಂಗ್ರೆಸ್‌ನಲ್ಲೇ ಇದ್ದುಕೊಂಡು ಎದ್ದುಬಿದ್ದು ಓಡಾಡಿ ಕೆಲಸ ಮಾಡಲು ಶುರು ಮಾಡಿದರೆ ಈ ಖರ್ಗೆ, ಧರಂಸಿಂಗ್, ಎಸ್.ಎಂ.ಕೃಷ್ಣರಂತಹ ಲೈಟ್‌ವೆಯಿಟ್ ನಾಯಕರುಗಳು ತರಗೆಲೆಗಳಂತೆ ಉದುರಿಹೋಗುತ್ತಾರೆ. ಈ ತಕ್ಷಣಕ್ಕಲ್ಲದ್ದಿದ್ದರೂ ಮುಂದಿನ ಮೂರ್ನಾಲ್ಕು ವರ್ಷದಲ್ಲಾದರೂ ಸಿದ್ದರಾಮಯ್ಯ ಕಾಂಗ್ರೆಸ್‌ನ ಮುಂಚೂಣಿ ನಾಯಕರಾಗಿ ಕರ್ನಾಟಕದಲ್ಲಿ ಎಮರ್ಜ್ ಆಗುತ್ತಾರೆ. ಇದು ಖಚಿತ.

ಇಲ್ಲಾ ಈ ಮಾರ್ಗ ಬೇಡವೆಂದು ಸಿದ್ದು ಹೊಸ ಪಾರ್ಟಿ ಮಾಡಿಕೊಂಡರೆ ಕಾಂಗ್ರೆಸ್-ಜೆಡಿಎಸ್-ಬಿಜೆಪಿಗಳ ಅಟ್ಟಹಾಸದೆದುರು ಸಿಲುಕಿಕೊಂಡು ಚಿಂದಿಯಾಗಿ ಗುಂಪಿನಲ್ಲಿ ಗೋವಿಂದಾ ಆಗುವ ಸಾಧ್ಯತೆಗಳೇ ಜಾಸ್ತಿ ಇದೆ.


ಸಿದ್ದರಾಮಯ್ಯ ಮತ್ತವರ ಜೊತೆಗಾರರ ಪಾಲಿಗೆ ಇದು ಬಹಳ ನಿರ್ಣಾಯಕ ರಾಜಕೀಯ ಸನ್ನಿವೇಶ. ಸಿಟ್ಟು, ದುಡುಕುತನಗಳಿಂದ ಕೈಗೊಳ್ಳುವ ತೀರ್ಮಾನಗಳು ಬಹಳ ದಿನ ಬಾಳಿಕೆ ಬರುವುದಿಲ್ಲ ಎಂಬುದನ್ನು ಸಿದ್ದು ಬೆಂಬಲಿಗರು ದೇವರಾಜ ಅರಸು, ಬಂಗಾರಪ್ಪನವರ ಪ್ರಾದೇಶಿಕ ಪಕ್ಷಗಳ ಹಣೆಬರಹ ನೋಡಿ ತೀರ್ಮಾನಿಸಲಿ.

ಕಾಂಗ್ರೆಸ್ ಕಳೆದುಕೊಂಡ ನಾಯಕರು

ಕಾಂಗ್ರೆಸ್‌ಗೆ ಇದೊಂದು ಹಳೇ ರೋಗ!

ಪಕ್ಷವನ್ನು ಬಲಪಡಿಸಬಲ್ಲ, ಜನಬೆಂಬಲವಿರುವ ಮಾಸ್ ಲೀಡರ್‌ಗಳನ್ನು ಹುಡುಕಿ ಹುಡುಕಿ ಉಸಿರುಗಟ್ಟಿಸಿ ಮುಗಿಸಿಬಿಡುವುದೇ ಆ ರೋಗ.

ಸಿದ್ದರಾಮಯ್ಯಗೆ ಕಾಂಗ್ರೆಗಳು ಈಗ ಕೊಡುತ್ತಿರುವ ಟ್ರೀಟ್‌ಮೆಂಟ್ ಕೂಡಾ ಆ ತರದ್ದೆ. ಯಾವುದೇ ಸೂಕ್ತ ಸ್ಥಾನಮಾನವಿಲ್ಲ, ಗೌರವವಿಲ್ಲ, ಜವಾಬ್ದಾರಿ ನೀಡುವುದಿಲ್ಲ ಭವಿಷ್ಯದ ಬಗ್ಗೆ ಕನಿಷ್ಠ ಭರವಸೆಯನ್ನು ಮೂಡಿಸುವುದಿಲ್ಲ... ಹೀಗಿರುವ ಅಸಂಬದ್ಧ ಪಾರ್ಟಿಯೊಳಗಡೆ ಯಾರು ತಾನೇ ಮುಂದುವರೆಯಲು ಸಾಧ್ಯ? ಸಿದ್ದು ಮುಂದೆ ಹೊಸ ಪಕ್ಷ ಕಟ್ಟಿದರೆ ಅದರ ಬಹುತೇಕ ಹೊಣೆ ಕಾಂಗ್ರೆಸ್‌ನದ್ದೇ ಆಗಿರುತ್ತದೆ. ಕಾಂಗ್ರೆಗಳಿಗೆ ಇದೇನೂ ಹೊಸದಲ್ಲ.



ಅರಸು

ಹಿಂದೆ ದೇವರಾಜ ಅರಸ್‌ರಿಗೆ ವಿನಾ ಕಾರಣ ಅವಮಾನಿಸಿ ಪಾರ್ಟಿಯಿಂದ ಹೊರಹೋಗುವಂತೆ ಮಾಡಿ ಕರ್ನಾಟಕ ಕ್ರಾಂತಿರಂಗ ಸ್ಥಾಪನೆಗೆ ಕಾರಣವಾಗಿತ್ತು. ನಂತರ ಬಂಗಾರಪ್ಪರ ಮೇಲೆ ವಕ್ರದೃಷ್ಟಿ ಬೀರಿ ಕರ್ನಾಟಕ ಕಾಂಗ್ರೆಸ್ ಅಸ್ತಿತ್ವಕ್ಕೆ ಬರಲು ಕಾಂಗ್ರೆಸ್ಸೇ ಕೆಟ್ಟ ಪ್ರಚೋದನೆ ನೀಡಿತ್ತು. ವೀರೇಂದ್ರ ಪಾಟೀಲ್ ಅತ್ಯಂತ ದಕ್ಷತೆಯಿಂದಲೇ ಮುಖ್ಯಮಂತ್ರಿ ಕೆಲಸ ನಿಭಾಯಿಸುತ್ತಿದ್ದಾಗ ಅವಿವೇಕಿ ರಾಜೀವ್ ಗಾಂಧಿ ಅವರನ್ನು ಕೆಳಗಿಳಿಸಿ ಅವಮಾನಿಸಿದ್ದರು. ಈಗ ಸಿದ್ದ ರಾಮಯ್ಯ ಸರದಿ ಬಂದಿದೆ. ಕಾಂಗ್ರೆ ನಾಯಕತ್ವದ ದುಷ್ಟತನ ಹಾಗೂ ನಿಷ್ಕ್ರಿಯತೆ ಯಾವ ಮಟ್ಟಗಿದೆಯೆಂದರೆ ಮೊನ್ನಿನ ಉಪಚುನಾವಣೆ ಪ್ರಚಾರಕ್ಕೆ ಸಿದ್ದರಾಮಯ್ಯ ಬರಲಿಲ್ಲ ಎಂದು ದೇಶಪಾಂಡೆ ಆಕ್ಷೇಪ ಮಾಡಿದ್ದರಲ್ಲವೆ?

ಆಗ ಬಹುತೇಕರಿಗೆ 'ಹೌದಲ್ಲ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷರಾದ ಸಿದ್ದು ಪಾರ್ಟಿ ಅಭ್ಯರ್ಥಿಗಳ ಪರ ಪ್ರಚಾರ ಮಾಡಬೇಕಿತ್ತಲ್ಲವೆ?, ಅಂತ ಅನ್ನಿಸಿದ್ದು ಹೌದು.

ಆದರೆ ವಾಸ್ತವ ಏನೆಂದರೆ ಕಾಂಗ್ರೆ ಹೈಕಮಾಂಡ್ ಸಿದ್ದುಗೆ ವಹಿಸಿದ್ದ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷಸ್ಥಾನ 2008 ರ ಮೇನಲ್ಲಿ ನಡೆದ ಅಸೆಂಬ್ಲಿ ಎಲೆಕ್ಷನ್‌ಗೆ ಮಾತ್ರ ಸೀಮಿತವಾಗಿತ್ತು. ಮೊನ್ನಿನ ಎಲೆಕ್ಷನ್ ನಡೆಯುವಾಗ ಸಿದ್ದು ಆ ಹುದ್ದೆಯಲ್ಲಿರಲಿಲ್ಲ. ದೇಶಪಾಂಡೆಯಾಗಲಿ ಅಥವಾ ಡಿಕೆಶಿಯಾಗಲಿ ಈ ಬಗ್ಗೆ ಹೈಕಮಾಂಡಿಗೆ ಒಂದು ಪತ್ರವನ್ನು ಬರೆದಿರಲಿಲ್ಲ. ಹೈಕಮಾಂಡ್ ಕೂಡ ಈ ವಿಚಾರದ ಬಗ್ಗೆ ತನ್ನ ಜವಾಬ್ದಾರಿ ಅರ್ಥಮಾಡಿಕೊಂಡಿರಲಿಲ್ಲ. ಹಾಗಾಗಿ ಯಾವುದೇ ಸ್ಥಾನ-ಜವಾಬ್ದಾರಿ ಹೊಂದಿರದಿದ್ದ ಸಿದ್ದು ಚುನಾವಣಾ ಪ್ರಚಾರದಿಂದ ದೂರವೇ ಉಳಿದರು.

ರಾಜ್ಯ ಕಾಂಗ್ರೆಸ್‌ನೊಳಗೇ ಸಿದ್ದು ವಿರುದ್ಧ ಎಷ್ಟು ಜನರಿಗೆ ಅಸಹನೆ ಇದೆ ಎಂಬುದಕ್ಕೆ ಸಾಕ್ಷಿ ನೀಡಲು ಇದೊಂದೇ ಪ್ರಕರಣ ಸಾಕಲ್ಲವೆ?

ಹರಕು ಮಾತಿನ ಅಪಾಯಗಳು

ಹೇಳಿಕೇಳಿ ಸಿದ್ದರಾಮಯ್ಯ ಕಡಿಮೆ ಮಾತಿನ ರಾಜಕಾರಣಿ. ಆದರೆ ಅವರ ಹಿಂಬಾಲಕರಾದ ವರ್ತೂರು ಪ್ರಕಾಶ್, ಮುಕುಡಪ್ಪ ಮುಂತಾದವರು ಅಗತ್ಯಕ್ಕಿಂತ ಜಾಸ್ತಿ ಮಾತಾಡುವುದರಲ್ಲಿ ನಿಸ್ಸೀಮರಾಗಿ ಹೋಗಿದ್ದಾರೆ.

ಮೊನ್ನಿನ ಉಪಚುನಾವಣೆ ಸಂದರ್ಭದಲ್ಲೇ ನೋಡಿ ಈ ವರ್ತೂರು ಪ್ರಕಾಶ್ 'ಅಹಿಂದ ವರ್ಗಗಳ ಓಟು ಈ ಬಾರಿ ಬಿಜೆಪಿಗೆ' ಎಂದು ಘೋಷಿಸಿದ್ದರು. ಇದರಿಂದ ಕಾಂಗ್ರೆಸ್‌ಗೆ ಸ್ವಲ್ಪ ಏಟು ಬಿದ್ದಿದ್ದು ನಿಜ. ದೊಡ್ಡಬಳ್ಳಾಪುರ, ಮಧುಗಿರಿ, ತುರುವೆಕೆರೆಗಳಲ್ಲಿ ಅನೇಕ ಕುರುಬ ಮತದಾರರು ಸಿದ್ದು ಪರ ಸಹಾನುಭೂತಿ ಹಾಗೂ ಕಾಂಗ್ರೆಸ್ ಮೇಲಿನ ಸಿಟ್ಟಿನಿಂದ ಬಿಜೆಪಿಗೆ ಓಟು ಹಾಕಿದ್ದಾರೆ. ಕೋದಂಡರಾಮಯ್ಯ ಸರಿಯಾದ ಸಮಯದಲ್ಲಿ ಒಂದು ಪತ್ರಿಕಾಗೋಷ್ಠಿ ನಡೆಸಿ ಬಿಜೆಪಿಗೆ ಅಹಿಂದಾ ಬೆಂಬಲ ಇಲ್ಲ ಎಂಬ ಸ್ಪಷ್ಟೀಕರಣ ನೀಡಿದ ಮೇಲೆ ಹೆಚ್ಚಿನ ಅನಾಹುತ ಆಗುವುದು ತಪ್ಪಿತು.

ಸಿದ್ದರಾಮಯ್ಯ ಹೊಸ ಪಕ್ಷ ಮಾಡಲಿ ಇಲ್ಲಾ ಕಾಂಗ್ರೆಸ್‌ನಲ್ಲೇ ಇರಲಿ ಆದರೆ ಸಂದರ್ಭ ಅರಿತು ತೂಕವಾಗಿ ಮಾತನಾಡಬಲ್ಲವರನ್ನು ಮಾತ್ರ ಮುಂದೆ ಬಿಟ್ಟರೆ ಉತ್ತಮ. ವರ್ತೂರು ನೀಡಿದ್ದ ಹೇಳಿಕೆ ಬಗ್ಗೆ ಅಹಿಂದದ ಕೆಲ ನಾಯಕರು ಸಿದ್ದು ಹತ್ತಿರ ಆಕ್ಷೇಪಿಸಿದಾಗ 'ಸರಿ ನಾನು ಕರೆದು ವಾರ್ನ್ ಮಾಡ್ತೀನಿ' ಅಂದಿದ್ದರಂತೆ. ಆದರೆ ಅದೇನು ಪರಿಣಾಮ ಬೀರಿದಂತೆ ಕಾಣುತ್ತಿಲ್ಲ. ಇದು ಹೀಗೆ ಮುಂದುವರೆದರೆ ಸಿದ್ದು ಬಣದವರ ಹೇಳಿಕೆಗಳು ನಿಲುವುಗಳ ಬಗ್ಗೆ ಯಾರಿಗೆ ತಾನೆ ಗೌರವ ಉಳಿದೀತು?



ಗಡಿ ವಿವಾದ-ಯುದ್ಧ ಮಾಡಿದ್ದೇನು?

[illegible]



ರೆಡ್ಡಿ ಬ್ರದರ್ಸ್ ಮಾರಾಮಾರಿ

ಬೆಂಗಳೂರಿನ ಏಳೆಕರೆ ಭೂಮಿಯ ವಿಚಾರ, ಒಂದಷ್ಟು ಟ್ರಾನ್ಸ್‌ಫರ್ ವಿವಾದಗಳು, ರೆಡ್ಡಿ ಕುಟುಂಬದೊಳಗೆ ರಾಮುಲು ಪ್ರಭಾವ ಹೆಚ್ಚಾಗಿರುವುದು, ಜೊತೆಗೊಂದಿಷ್ಟು ಇಗೋ ಪ್ರಾಬ್ಲಂಗಳೇ ಈ ಜಗಳಕ್ಕೆ ಮೂಲ ಕಾರಣ. ಕಳೆದ ವಾರ ಸ್ಫೋಟಿಸಿದ ಈ ಜಗಳ ಎಷ್ಟು ಜೋರಾಗಿತ್ತೆಂದರೆ ಜಿಲ್ಲಾ ಎಸ್‌ಪಿ ಸೀಮಂತ್ ಕುಮಾರ್ ಸಿಂಗ್ ರಜಾ ಹಾಕಿ ಊರೇ ಬಿಟ್ಟು ಪರಾರಿಯಾಗಿದ್ದರೆ ಡಿಐಜಿ ಸತ್ಯನಾರಾಯಣ ತಾವೇ ಖುದ್ದಾಗಿ ಬಂದು ಜಗಳ ಬಿಡಿಸಲು ಯತ್ನಿಸಿದ್ದಾರೆ.

ಗಣಿ ಲೂಟಿ, ರಾಜಕೀಯ ಲಾಭ ಮಾಡುವಾಗ ಅಪೂರ್ವ ಸೋದರರಂತೆ ಕಾಣಿಸಿಕೊಳ್ಳುವ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ ಹಾಗೂ ಸೋಮಶೇಖರ ರೆಡ್ಡಿಗಳೆಂಬ ಗಾಲಿ ಫ್ಯಾಮಿಲಿ ಸೋದರರ ನಡುವೆ ಇದುವರೆಗೂ ವೈಮನಸ್ಸು, ಒಳಜಗಳಗಳ ಮಾತೇ ಇರಲಿಲ್ಲ. ಆದರೀಗ ಅದರದ್ದೂ ಒಂದು ಹೊಸ ಅಧ್ಯಾಯ ಶುರುವಾಗಿದೆ. ಅರ್ಧ ಪೊಲೀಸೂ ಇನ್ನರ್ಧ ಪಾರ್ಟ್‌ಟೈಂ ರಾಜಕಾರಣಿಯಂತಿರುವ ಡಿಐಜಿ ಸತ್ಯನಾರಾಯಣರೇ ಈ ರೆಡ್ಡಿಗಳ ಜಗಳ ಬಿಡಿಸಿ ರಾಜಿ ಮಾಡಿಸಲು ಹೋಗಿದ್ದು ಅಲ್ಲಿಂದ ಹೊರಬರುವಾಗ 'ನನ್ನ ಸರ್ವೀಸ್‌ನಲ್ಲೇ ಇಂಥ ಜಗಳ ನೋಡಿರಲಿಲ್ಲ' ಅಂತಂದರೆಂದರೆ ಆ ವಿವಾದ ಇನ್ಯಾವ ಪರಿ ನಡೆದಿರಬೇಕು ಯೋಚಿಸಿ?

ಬೆಂಗಳೂರಿನ ಜಮೀನು ನಂದೆ

ಹೊಸ ವರ್ಷದ ತೆರೆ ಮೇಲೇಳುವ ಒಂದು ವಾರದ ಹಿಂದೆ ಬಳ್ಳಾರಿಯ ಗಾಲಿ ಜನಾರೆಡ್ಡಿ ಅರಮನೆಯಲ್ಲಿ ಮಾತಿಗೆ ಸೇರಿದ್ದ ರೆಡ್ಡಿ ಬ್ರದರ್ಸ್ ನಡುವೆ ಮೊದಲು ಶುರುವಾದ ಜಗಳ ಬೆಂಗಳೂರು ಸಿಟಿಯಲ್ಲಿರುವ ಏಳೆಕರೆ ಪ್ರಾಪರ್ಟಿಯ ಮಾಲೀಕತ್ವದ್ದು. ಆ ಜಾಗ ಪೂರ್ತಿ ನನಗೇ ಬೇಕೆಂದು ಜನಾರ್ದನ ರೆಡ್ಡಿ ಹಾಗೂ ಕರುಣಾಕರ ರೆಡ್ಡಿ ಕಿತ್ತಾಟ ಶುರು ಮಾಡಿಕೊಂಡಿದ್ದಾರೆ. ಹಾಗೆ ನೋಡಿದರೆ ಈ ಅದಿರು ದರೋಡೆಕೋರರು ಬಳ್ಳಾರಿ, ಬೆಂಗಳೂರು, ಆಂಧ್ರದ ವೇಲೂರು, ನಂದ್ಯಾಲ, ವೈಜಾಗ್, ಹೈದರಾಬಾದ್‌ಗಳಲ್ಲಿ ಹಾಗೂ ತಮಿಳುನಾಡಿನ ಪ್ರಮುಖ ಸ್ಥಳಗಳಲ್ಲಿ ಭಾರಿ ಆಸ್ತಿ ಖರೀದಿಸಿಟ್ಟುಕೊಂಡಿದ್ದಾರೆ. ಆದರೆ ಮಾರ್ಕೆಟ್ ರೇಟು ಹಾಗೂ ಮೌಲ್ಯದ ದೃಷ್ಟಿಯಿಂದ ಬೆಂಗಳೂರಿನಲ್ಲಿ ಅವರಿಗಿರುವ ಈ ಏಳೆಕರೆ ಭೂಮಿಯದ್ದೇ ಬೇರೆ ತೂಕ. ಈ ಗಾಲಿ ರೆಡ್ಡಿ ಬ್ರದರ್ಸ್ ಜಾರಕಿಹೊಳಿ ಸೋದರರಂತೆ, ಗುತ್ತೇದಾರ್ ವಂಶದವರಂತೆ ಬಹುತೇಕ ಜೊತೆಗೂಡಿಯೇ ದಂಧೆ ನಡೆಸುತ್ತಾರೆ. ಸಂದರ್ಭಾನುಸಾರ ಸಪರೇಟಾಗೂ ವ್ಯವಹಾರವಿಟ್ಟುಕೊಂಡಿದ್ದಾರೆ. ಅದರ ಭಾಗವಾಗೇ ಈಗ ಬೆಂಗಳೂರಿನ ನೂರಾರು ಕೋಟಿ ಬೆಲೆಯ ಏಳೆಕರೆ ಆಸ್ತಿ ಯಾರಿಗೆ ಸೇರಬೇಕೆಂಬ ಜಗಳ ಹುಟ್ಟಿಕೊಂಡಿದ್ದು. ಅದನ್ನೀಗ ರೆಡ್ಡಿ ಬ್ರದರ್ಸ್ ಯಾವ ರೀತಿ ಬಗೆಹರಿಸಿಕೊಳ್ಳುತ್ತಾರೆಂಬುದು ಭವಿಷ್ಯಕಾಲದ ಪ್ರಶ್ನೆ. ಆದರೆ ಈ ಅಪೂರ್ವ ಸೋದರರ ನಡುವಿನ ಒಳಜಗಳಕ್ಕೆ ಕೇವಲ ಭೂವಿವಾದ ಮಾತ್ರ ಕಾರಣವಾಗಿಲ್ಲ ಎಂಬುದು ಬಳ್ಳಾರಿ ಜನರಿಗೆ ಅರ್ಥವಾಗಿದೆ.

ರಾಮುಲುಗೆ ಬೆಣ್ಣೆ ಕರುಣಾಗೆ ಸುಣ್ಣ

ಈಗ್ಗೆ ಸರಿಯಾಗಿ ಒಂದು ತಿಂಗಳ ಹಿಂದೆ 'ಶ್ರೀರಾಮುಲುನೇ ಕರ್ನಾಟಕದ ಮುಂದಿನ ಮುಖ್ಯಮಂತ್ರಿ' ಎಂದು ಜನಾರ್ದನ ರೆಡ್ಡಿ ಒದರಿದ್ದು ಬಹುಶಃ ನಿಮಗೂ ನೆನಪಿರಬಹುದು. ಸಿಎಂ ಪದವಿ ಎಂಬುದು ಅವರಪ್ಪನ ಮನೆ ಆಸ್ತಿಯೇನೊ ಎಂಬಷ್ಟು ಧಿಮಾಕಿನಿಂದ ಜನಾರ್ದನರೆಡ್ಡಿ ಅಸಂಬದ್ಧವಾಗಿ ಈ ಹೇಳಿಕೆ ನೀಡಿದ್ದು ಬಿಜೆಪಿಗಳಿಗೇ ಕಿರಿಕಿರಿ ಉಂಟುಮಾಡಿತ್ತು. ಆದರೆ ಅದಕ್ಕಿಂತ ಜಾಸ್ತಿ ಕಿರಿಕಿರಿ ಅನುಭವಿಸಿದ್ದು ಬೇರಾರೂ ಅಲ್ಲ ಸ್ವತಃ ಕರುಣಾಕರ ರೆಡ್ಡಿ. ಅದು ಯಾಕೆಂದರೆ ಈತ ಸಾಕ್ಷಾತ್ ಅಪ್ಪುಬುದ್ಧನಂತಿದ್ದರೂ ತಾನೇ ಮುಂದಿನ ಸಿಎಂ ಆಗಬಾರದೇಕೆ ಎಂಬ ಕನಸು ಕಾಣುತ್ತಿರುವಾತ. ಒಂದು ಸಾರಿ ಎಂಪಿ, ಆದಾದ ಮೇಲೆ ಶಾಸಕನಾಗಿ ಈಗ ಕಂದಾಯ ಮಂತ್ರಿಯಾಗಿರುವ ಕರುಣಾಕರ ರೆಡ್ಡಿಗೆ ತನ್ನ ಸೋದರ ಜನಾರ್ದನ ರೆಡ್ಡಿ ತನ್ನ ಹೆಸರನ್ನು ಸಿಎಂ ಹುದ್ದೆಗೆ ಪ್ರಸ್ತಾಪ ಮಾಡುವುದನ್ನು ಬಿಟ್ಟು ಬೀದಿ ರೌಡಿಯಂತಿರುವ, ತಮ್ಮ ಸಾಮ್ರಾಜ್ಯದ ಸೇವಕನಾಗಿರುವ ರಾಮುಲು ಹೆಸರನ್ನು ತೇಲಿಬಿಟ್ಟದ್ದು ಎಲ್ಲೆಲ್ಲಿಗೋ ಮೆಣಸಿನಕಾಯಿ ಇಟ್ಟಂತಾಗಿ ಹೋಗಿತ್ತು. ಅಸಲಿಗೆ ಜನಾರ್ದನ ರೆಡ್ಡಿ ಸ್ವಲ್ಪ ಉಡಾಫೆಯಿಂದಲೇ ಆ ಮಾತು ಹೇಳಿದ್ದು ವಾಲ್ಮೀಕಿ ಜನಾಂಗದವರ ಒಂದು ಸಮಾವೇಶದಲ್ಲಿ, ಅದು ಒಂದು ಥರ ರೈಲು ಹತ್ತಿಸುವ ಮಾತು. ಜೊತೆಗೆ ಹಾಲಿ ಮುಖ್ಯಮಂತ್ರಿ ಯಡ್ಡಿಗೆ ಚುರುಕು ಮುಟ್ಟಿಸುವ ಉದ್ದೇಶವೂ ಅದರಲ್ಲಿತ್ತು, ಕರ್ನಾಟಕದ ರಾಜಕೀಯದಲ್ಲಿ ತಮ್ಮನ್ನು ನಿರ್ಲಕ್ಷಿಸಿದರೆ ತಾವು ಏನು ಬೇಕಾದರೂ ಮಾಡಬಲ್ಲವೆಂಬ ಕೊಬ್ಬಿನ ಮಾತಾಗಿತ್ತು ಅದು. ಕರುಣಾಕರ ರೆಡ್ಡಿಯೇನು ಅದನ್ನು ಅರ್ಥ ಮಾಡಿಕೊಳ್ಳಲಾಗದಷ್ಟು ದಡ್ಡನೇನಲ್ಲ.

ಆದರೆ ಅಷ್ಟರಲ್ಲಿ ರಾಮುಲುನ ಆರೋಗ್ಯ ಖಾತೆಗೆ ಸಂಬಂಧಿಸಿದ ಒಂದಷ್ಟು ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ರೆಡ್ಡಿ ಬ್ರದರ್ಸ್ ಗಮನಕ್ಕೆ ಬಾರದ ಕೆಲವು ಆದೇಶಗಳು ಹೊರಬಿದ್ದಿದ್ದವು. ಜಿಲ್ಲಾ ಪೊಲೀಸ್ ಆಫೀಸರ್ಸ್‌ಗಳಾಗಿ ಯಾರಿರಬೇಕು, ಯಾರು ಬೇಡವೆಂಬ ವಿಚಾರದಲ್ಲೂ ಇತರ ಬಿಜೆಪಿಗಳೊಂದಿಗೂ ಮುಸುಕಿನ ಗುದ್ದಾಟ ನಡೆದಿತ್ತು, ಜೊತೆಗೆ ವಿದ್ಯುತ್ ಇಲಾಖೆ ವರ್ಗಾ ಡೀಲ್‌ಗಳಲ್ಲಿ ಸಚಿವ ಈಶ್ವರಪ್ಪನ ನೆಂಟ ಬಳ್ಳಾರಿಯ ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ರಾಮಲಿಂಗಪ್ಪ ಒಂದಷ್ಟು ಕೈವಾಡ ನಡೆಸಿ ರೆಡ್ಡಿಗಳಿಗೆ ಕಿರಿಕಿರಿ ಮಾಡಿದ್ದ. ಈ ಮಧ್ಯೆ ರಾಮುಲುನ ಡೆಡ್ಲಿ ಗ್ಯಾಂಗಿನ ಸದಸ್ಯರಾದ ಕಂಪ್ಲಿ ಶಾಸಕ ಸುರೇಶ್ ಹಾಗೂ ಕೂಡ್ಲಿಗಿಯ ಶಾಸಕ ತಾವೇ ಒಂದು ಗುಂಪಾಗಿ ತಮಗಿಷ್ಟ ಬಂದಂತೆ ಕೆಲವು ವರ್ಗಾ ಡೀಲ್ ಕುದುರಿಸಿಕೊಂಡಿದ್ದರು. ಇದೆಲ್ಲದರಿಂದ ಕರುಣಾಕರ ರೆಡ್ಡಿಗೆ ರೇಗಿ ಹೋಗಿತ್ತು, ತಮ್ಮ ಕಂಟ್ರೋಲಿಗೆ ಸಿಗದಂತೆ ಆಟವಾಡುತ್ತಿರುವ ರಾಮುಲು ಗ್ಯಾಂಗಿನವರನ್ನು ನಿಯಂತ್ರಿಸುವ ಬದಲಿಗೆ ರಾಮುಲುಗೇ ಮಣೆ ಹಾಕುವ ಜನಾರ್ದನ ರೆಡ್ಡಿ ವಿರುದ್ಧ ಕರುಣಾಕರ ರೆಡ್ಡಿಗೆ ಕೋಪ ಉಕ್ಕೇರಿತ್ತು, ಕೊನೆಗದು ವಿಪರೀತದ ಜಗಳವಾಗಿ ಸ್ಫೋಟಗೊಂಡಿದೆ. ಹಾಗೆ ಜಗಳವಾದ ದಿನ ಸ್ವತಃ ಡಿಐಜಿ ಸತ್ಯನಾರಾಯಣ್ ಬಳ್ಳಾರಿಗೆ ಬಂದಿದ್ದರು. ಜಿಲ್ಲಾ ಎಸ್‌ಪಿ ಸೀಮಂತ್ ಕುಮಾರ್ ಸ್ಥಳದಲ್ಲಿರಲಿಲ್ಲ, ಪಾಪ ಆತ ಈ ರೆಡ್ಡಿಗಳ ಕಿರುಕುಳದಿಂದ ಬೇಸತ್ತು ಹೇಳದೆಕೇಳದೆ ಒಂದು ವಾರ ರಜಾ ಹಾಕಿ ತಲೆ ತಪ್ಪಿಸಿಕೊಂಡಿದ್ದ.

ಕರುಣಾಕರ ರೆಡ್ಡಿ ಮನಸ್ಸಿನಲ್ಲಿ ತಾನು ಅರ್ಜೆಂಟಾಗಿ ಮುಖ್ಯಮಂತ್ರಿಯಾಗದಿದ್ದರೂ ಪರವಾಗಿಲ್ಲ ಕನಿಷ್ಠ ಪಕ್ಷ ತಕ್ಷಣದಲ್ಲಿ ಗೃಹ ಖಾತೆಯೊಂದಿಗೆ ಉಪಮುಖ್ಯಮಂತ್ರಿಯಾದರೆ ಸಾಕು ಎಂದಿದೆ. ಮುಂದಿನ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಉತ್ತರ ಕರ್ನಾಟಕದ ಕನಿಷ್ಠ 10 ಕ್ಷೇತ್ರಗಳಲ್ಲಿ ತಮ್ಮ ಪೂರ್ತಿ ಶಕ್ತಿ ಹಾಕಿ ಬಿಜೆಪಿ ಗೆಲ್ಲುವಂತೆ ನೋಡಿಕೊಂಡರೆ ತನಗೆ ಡಿಸಿಎಂ ಪಟ್ಟ ಗ್ಯಾರಂಟಿ ಎಂದು ಕರುಣಾಕರ್ ನಂಬಿಕೊಂಡಿದ್ದಾನೆ. ಅದಕ್ಕೆ ಪೂರಕವಾಗಿ ಉತ್ತರ ಕರ್ನಾಟಕದ ಎಂಟ್ಹತ್ತು ಜಿಲ್ಲೆಗಳಲ್ಲಿ RSS ಹಾಗೂ ವಿಶ್ವಹಿಂದೂ ಪರಿಷತ್‌ನವರಿಗೆ ಸ್ವಂತ ಕಟ್ಟಡ, ಗಾಡಿಗಳನ್ನು ಕೊಡಿಸಲೂ ಈ ರೆಡ್ಡಿಗಳು ಈಗ ಹೊರಟಿದ್ದಾರೆ. ಮೊನ್ನಿನ ರಾಜಾಸ್ತಾನ್, ಮಧ್ಯಪ್ರದೇಶ, ದೆಹಲಿ ಎಲೆಕ್ಷನ್‌ಗೆಂದು ನಲವತ್ತು ಕೋಟಿ ರೂಪಾಯಿ ತನಕ ದೇಣಿಗೆಯನ್ನು ಅಡ್ವಾಣಿಗೆ ಕಳುಹಿಸಿದ್ದಾರೆ.

ತಮ್ಮ ಗಾಲಿ ಫ್ಯಾಮಿಲಿಯವರು ಹಗಲುರಾತ್ರಿ ಕಷ್ಟಪಟ್ಟು ದರೋಡೆ ಮಾಡಿರುವ 'ಗಣಿ ದುಡ್ಡನ್ನು ಹೀಗೆ ನೀರಿನಂತೆ ಖರ್ಚು ಮಾಡಿ ರಾಮುಲುನನ್ನು ಯಾಕೆ ಬೆಳೆಸಬೇಕು ಎಂಬುದು ಕರುಣಾಕರ ರೆಡ್ಡಿಯ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ಇದಕ್ಕೆ ಜನಾರ್ದನ ರೆಡ್ಡಿಯೇ ಉತ್ತರಿಸಬೇಕು ಬಿಡಿ.

ಅಲ್ಲಾ ಹಾಗೆ ನೋಡಿದರೆ ಈ ರಾಮುಲುಗಿಂತ ಕರುಣಾಕರ ರೆಡ್ಡಿ ಬೆಟರ್ ಅನ್ನಿಸುತ್ತದೆ. ರಾಮುಲುಗಿರುವ ಬೀದಿ ರೌಡಿ ಇಮೇಜ್ ಕರುಣಾಗಿಲ್ಲ, ರಾಮುಲು ಮೇಲಿರುವಷ್ಟು ಕೇಸ್‌ಗಳೂ ಕರುಣಾ ಮೇಲಿಲ್ಲ, ರೆಡ್ಡಿ ಸೋದರರ ಕೃಪಾಕಟಾಕ್ಷದಲ್ಲಿ ರಾಮುಲು ಇದ್ದಾನೆಯೇ ವಿನಃ ರಾಮುಲು ದಯೆಯಿಂದೇನು ರೆಡ್ಡಿಗಳು ಬದುಕುತ್ತಿಲ್ಲ.

ಕರುಣಾ ಕೆಪಾಸಿಟಿಗೆ ಹೋಲಿಸಿದರೆ ರಾಮುಲುವಿನ ಅರ್ಹತೆ ಪಾಯಿಂಟ್ ಫೈವ್‌ನಷ್ಟು ಮಾತ್ರ. ಹಾಗಿದ್ದಾಗಲೂ ಗಾಲಿ ಜನಾರ್ದನ ರೆಡ್ಡಿಯ ಪ್ರೀತಿ ರಾಮುಲು ಮೇಲಿದೆಯೇ ವಿನಃ ಕರುಣಾಕರ ರೆಡ್ಡಿ ಮೇಲಿಲ್ಲ ಎಂದರೆ ಎಲ್ಲೋ ಏನೋ ಯಡವಟ್ಟಾಗಿರಬೇಕು.

ಕರುಣಾಕರ ರೆಡ್ಡಿ ಜಗಳಕ್ಕೆ, ಜನಾರ್ದನ ರೆಡ್ಡಿ ಮೇಲಿನ ಅಸಹನೆಗೆ ಇಷ್ಟೆಲ್ಲಾ ನೈಜ ಕಾರಣಗಳಿವೆ.

■ ಪಾರ್ವತೀಶ್

ಬಿಜೆಪಿ ಕಚೇರೀಲಿ ರೆಡ್ಡಿಯ 2.5 ಕೋಟಿ ರೂಪಾಯಿ ಕಳ್ಳತನ


ದೆಹಲಿಯ ಬಿಜೆಪಿ ಹೆಡ್ ಕ್ವಾಟ್ರಸ್‌ನಲ್ಲಿ ನಡೆದಿರುವ ಘಟನೆ ಇದು. ಕಳೆದ ತಿಂಗಳು ನಡೆದ ಐದು ರಾಜ್ಯಗಳ ಅಸೆಂಬ್ಲಿ ಚುನಾವಣೆ ಖರ್ಚಿಗಾಗಿ ಬಿಜೆಪಿಗಳು ಹತ್ತಾರು ಮೂಲಗಳಿಂದ ಹಣ ತರಿಸಿಕೊಳ್ಳುತ್ತಿದ್ದರು. ಹಾಗೆ ಹರಿದು ಬರುತ್ತಿದ್ದ ನೂರಾರು ಕೋಟಿ ದುಡ್ಡನ್ನು ಅಗತ್ಯಾನುಸಾರ ಬೇರೆಬೇರೆ ರಾಜ್ಯಗಳ ಎಲೆಕ್ಷನ್ ಖರ್ಚಿಗೆ ಕಳುಹಿಸಲಾಗುತ್ತಿತ್ತು. ಅಂತದ್ದೇ ಒಂದು ಸಂದರ್ಭದಲ್ಲಿ ದೆಹಲಿಯ ಬಿಜೆಪಿ ಆಫೀಸಿಗೆ ಬಂದು ತಲುಪಿದ್ದ ಹಣದಲ್ಲಿ ಅನಾಮತ್ತು ಎರಡೂವರೆ ಕೋಟಿ ರೂಪಾಯಿ ಮಂಗಮಾಯವಾಗಿ ಹೋಯಿತು. ಇದು ಕಳ್ಳ ಹಣವಾದ ಕಾರಣ ಪೊಲೀಸರಿಗೆ ದೂರು ಕೊಡುವಂತಿರಲಿಲ್ಲ. ಹಾಗಂತ ಸುಮ್ಮನಿರಲೂ ಸಾಧ್ಯವಿಲ್ಲವಲ್ಲ, ಅದಕ್ಕೆ ಅಡ್ವಾಣಿ ಏನು ಮಾಡಿದ್ದಾರೆಂದರೆ ಪಕ್ಷದ ಖಜಾಂಚಿ ರಾಮದಾಸ್ ಅಗರವಾಲ್‌ನನ್ನು ಸಸ್ಪೆಂಡ್ ಮಾಡಿದ್ದಾರೆ.

ಈ ವಿಚಾರ ಇಲ್ಲಿ ಹೇಳಲು ಕಾರಣ ಏನೆಂದರೆ ಕಳ್ಳತನವಾದ ಆ ಹಣ ಬಳ್ಳಾರಿ ರೆಡ್ಡಿಗಳದ್ದು! ಹಾಗೂ ಆ ಕಳ್ಳ ಹಣ ತಲುಪಿಸಿದವನು ಸಚಿವ ರಾಮುಲು!

ದೆಹಲಿ ಅಸೆಂಬ್ಲಿ ಎಲೆಕ್ಷನ್ ನಡೆಯುವಾಗ ಶ್ರೀರಾಮುಲು ಬಿಜೆಪಿ ಪರವಾಗಿ ದೆಹಲಿ ಕನ್ನಡಿಗರ ಓಟು ಕೇಳಲು ಹೋಗಿದ್ದನೆಂಬ ಸಂಗತಿ ನೆನಪಿದೆಯಾ? ಅದು ಚುನಾವಣಾ ಪ್ರಚಾರದ ನೆಪದಲ್ಲಿ ಅಡ್ವಾಣಿಗೆ ಹಣ ತಲುಪಿಸಲು ರಾಮುಲು ಹೋಗಿದ್ದನೇ ವಿನಃ ಬೇರಿನ್ಯಾವ ಕಾರಣಕ್ಕೂ ಅಲ್ಲ.

ಅಲ್ಲಾ ದೆಹಲಿ ತನಕ ಹೋಗಿ ಚುನಾವಣಾ ಪ್ರಚಾರ ನಡೆಸಲು ಈ ರಾಮುಲು ಏನು ಲೋಕ ನಾಯಕನಾ ಇಲ್ಲಾ ನ್ಯಾಷನಲ್ ಲೀಡರಾ ಹೇಳಿ?

ಅಸಲಿಗೆ ರಾಮುಲುಗೆ ಒಂದಕ್ಷರ ಇಂಗ್ಲಿಷ್ ಬಾರದು, ಹಿಂದಿ ಗೊತ್ತಿಲ್ಲ, ಇದೆಲ್ಲಾ ಹೋಗಲಿ ನೆಟ್ಟಗೆ ಒಂದು ವಾಕ್ಯ ನಾಗರಿಕ ಕನ್ನಡವೇ ಮಾತಾಡಲು ಬಾರದವನು ದೆಹಲಿಯಲ್ಲಿ ಇನ್ನೇನು ಭಾಷಣ ಕಿಸಿಯಲು ಸಾಧ್ಯ?



ನಡೆದದ್ದೇನೆಂದರೆ,

ನವೆಂಬರ್ ಮೂರನೇ ತಾರೀಖು ನಡೆದ ಹಂಪಿ ಉತ್ಸವದ ಉದ್ಘಾಟನೆಗೆ ಅಡ್ವಾಣಿ ಬಂದಿದ್ದರಲ್ಲ, ಆಗ ರೆಡ್ಡಿ ಸೋದರರು ಒಂದಷ್ಟು ಕೋಟಿ ಎಲೆಕ್ಷನ್ ಖರ್ಚಿಗೆಂದು ಕೊಟ್ಟು ಕಳುಹಿಸಿದ್ದರು. ಉಳಿದಿದ್ದನ್ನು ರಾಮುಲು ಕೈಲಿ ಅಡ್ವಾಣಿಗೆ ತಲುಪಿಸಲು ದೆಹಲಿಗೆ ಕಳುಹಿಸಲಾಗಿತ್ತು. ಅದಕ್ಕೆ ಚುನಾವಣಾ ಪ್ರಚಾರಕ್ಕೆ ರಾಮುಲು ದೆಹಲಿಗೆ ಹೋಗಿದ್ದಾರೆಂದು ಕತೆ ಕಟ್ಟಲಾಗಿತ್ತು.

ಆದರೆ ಕೆರೆಯ ನೀರನು ಕೆರೆಗೆ ಚೆಲ್ಲಿ ಎಂಬಂತೆ ಆ ಹಣ ಈಗ ಕಳ್ಳತನವಾಗಿ ಹೋಗಿದೆ. ■

ಭಜರಂಗಿಗಳ 'ನ್ಯಾಯ' ಮತ್ತು ಕನ್ನಡಿಗರ 'ವಿವೇಕ'

ಕರ್ನಾಟಕದಲ್ಲಿ ಭಜರಂಗಿಗಳು ಚಾಲ್ತಿಗೆ ತರುತ್ತಿರುವ ಈ ಹೊಸ ನ್ಯಾಯ ಪರಿಕಲ್ಪನೆಗೆ ರಾಜ್ಯದ ಮಾಧ್ಯಮಗಳೂ ಸೇರಿದಂತೆ ಆಳುವ ವ್ಯವಸ್ಥೆಯ ಸಂಪೂರ್ಣ ಸಮ್ಮತಿ ಇದೆ. 'ಕನ್ನಡದ ಮನಸ್ಸು', 'ಕನ್ನಡದ ವಿವೇಕ', 'ಕನ್ನಡಿಗರ ಸಹನೆ' ಇತ್ಯಾದಿ ಮನಮರುಳು ನುಡಿಗಟ್ಟುಗಳನ್ನು ನಮ್ಮ ಬುದ್ಧಿ ಜೀವಿಗಳು ಬಳಸುವುದುಂಟು. ಇವೆಲ್ಲ ಇರುವುದೇ ಹೌದಾದರೆ ಇವಕ್ಕೂ ನಾಡಿನಲ್ಲಿ ನೆಲೆಯೂರುತ್ತಿರುವ ಭಜರಂಗಿ ಸಂಸ್ಕೃತಿಗೂ ಎತ್ತಣಿಂದೆತ್ತ ಸಂಬಂಧ ಎಂಬುದನ್ನು ಅವರು ಬಿಡಿಸಿ ಹೇಳಬೇಕು.

ಬೆಂಗಳೂರಿನ ತರುಣ, ಡಾಕ್ಟರ್ ಮೊಹ್ಮದ್ ಹನೀಫ್ ಕಳೆದವಾರ ಮತ್ತೆ ಸುದ್ದಿಯಲ್ಲಿದ್ದರು. 2007ರ ಜುಲೈ 26ರಂದು ಇಂಗ್ಲೆಂಡ್‌ನ ಗ್ಲ್ಯಾಸ್ಗೋ ವಿಮಾನ ನಿಲ್ದಾಣದ ಮೇಲೆ ನಡೆದ ಬಾಂಬ್ ದಾಳಿಗೆ ಸಂಬಂಧಿಸಿದಂತೆ ಆಸ್ಟ್ರೇಲಿಯಾದಲ್ಲಿ ವೈದ್ಯಕೀಯ ವೃತ್ತಿ ನಡೆಸುತ್ತಿದ್ದ ಹನೀಫರನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು. ಗ್ಲ್ಯಾಸ್ಗೋ ಸ್ಫೋಟದ ಆರೋಪಿಗಳಾದ ಕಫೀಲ್ ಮತ್ತು ಸಬೀಲ್ ಅಹ್ಮದರಿಗೆ ಹನೀಫ್ ದೂರದಲ್ಲಿ ಸೋದರ ಸಂಬಂಧಿ. ಮತ್ತು ಘಟನೆ ಸಂಭವಿಸುವುದಕ್ಕೆ ಸುಮಾರು ಒಂದು ವರ್ಷದ ಹಿಂದೆ ಅವರು ಅರ್ಧ ಬಳಸಿದ್ದ ಸಿಮ್ ಕಾರ್ಡೊಂದನ್ನು ಆರೋಪಿಗಳಿಗೆ ಕೊಟ್ಟಿದ್ದರು ಎಂಬ ಕಾರಣಕ್ಕೆ ಹನೀಫರನ್ನು ಬಂಧಿಸಲಾಗಿತ್ತು. ಆಸ್ಟ್ರೇಲಿಯಾ ಪೊಲೀಸರ ಈ ಕ್ರಮವನ್ನು ಆ ದೇಶದ ಪ್ರಮುಖ ಪತ್ರಿಕೆಗಳು ಪ್ರಶ್ನಿಸಿದ್ದವು. ಅಲ್ಲಿನ ಮಾನವಹಕ್ಕುಗಳ ಸಂಘಟನೆಗಳು ಹನೀಫರ ಬಂಧನದ ವಿರುದ್ಧ ಸಾರ್ವಜನಿಕ ಪ್ರತಿಭಟನೆಗಳನ್ನು ನಡೆಸಿದ್ದವು. ಆಸ್ಟ್ರೇಲಿಯಾದಲ್ಲಿ ಆಗ ಅಧಿಕಾರದಲ್ಲಿದ್ದ ಜಾನ್ ಹೊವಾರ್ಡ್ ನಾಯಕತ್ವದ ಬಲಪಂಥೀಯ ಸರಕಾರದ ವಿರುದ್ಧ ಮುಖ್ಯ ಪ್ರತಿಪಕ್ಷವಾದ ಲೇಬರ್ ಪಾರ್ಟಿಯ ರಾಜಕಾರಣಿಗಳೂ ದನಿಯೆತ್ತಿದರು. ಆಸ್ಟ್ರೇಲಿಯಾದ ಉನ್ನತ ನ್ಯಾಯಾಲಯದಲ್ಲಿ ಪರಿಣತ ನ್ಯಾಯವಾದಿಗಳ ಒಂದು ತಂಡ ಹನೀಫರ ಪರವಾಗಿ ವಾದಿಸಿ ಅವರ ಬಂಧನಕ್ಕೆ ಕಾರಣಗಳೇ ಇರಲಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿತು. 2007ರ ಆಗಸ್ಟ್‌ನಲ್ಲಿ ನ್ಯಾಯಾಲಯ ಹನೀಫ್ ನಿರಪರಾಧಿ ಎಂದು ತೀರ್ಪು ನೀಡಿತ್ತು. ಇದಾಗಿ ಕೆಲವು ತಿಂಗಳ ನಂತರ ನಡೆದ ಚುನಾವಣೆಗಳಲ್ಲಿ ಜಾನ್ ಹೊವಾರ್ಡ್ ಸರಕಾರ ಸೋತು ಕೆವಿನ್ ರುಡ್ ನಾಯಕತ್ವದ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತು. ಹೊಸ ಸರ್ಕಾರ, ಹನೀಫರನ್ನು ಬಂಧಿಸಿ ಅವರ ಮೇಲೆ ಕೇಸು ಜಡಿಯುವ ಮೂಲಕ ಹಿಂದಿನ ಸರಕಾರದ ಗೃಹ ಸಚಿವ ಖಾತೆ ವಿನಾಕಾರಣ ದ್ವೇಷ ಸಾಧಿಸಿತೇ ಹೇಗೆ ಎಂದು ಪರಿಶೀಲಿಸಲು ನಿವೃತ್ತ ನ್ಯಾಯಾಧೀಶ ಜಾನ್ ಕ್ಲಾರ್ಕ್ ನೇತೃತ್ವದಲ್ಲಿ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತು. ಈಗ ಆ ಸಮಿತಿಯ ತನಿಖಾ ವರದಿ ಪ್ರಕಟವಾಗಿದ್ದು ಹನೀಫರನ್ನು ಬಂಧಿಸಲು ಆಸ್ಟ್ರೇಲಿಯಾ ಪೊಲೀಸರಿಗೆ ಕಾರಣಗಳೇ ಇರಲಿಲ್ಲವೆಂದೂ, ಸಣ್ಣ ಮೊತ್ತ ಪಾವತಿಸಿ ಯಾರು ಬೇಕಾದರೂ ಅಂಗಡಿಯಲ್ಲಿ ಕೊಳ್ಳಬಹುದಾದ ಸಿಮ್ ಕಾರ್ಡೊಂದು ಓರ್ವ ವ್ಯಕ್ತಿ ಭಯೋತ್ಪಾದಕನೆಂದು ಸಂದೇಹಿಸಲು ಸಾಕ್ಷ್ಯಾಧಾರವಾಗಲಾರದು ಎಂದೂ ತೀರ್ಮಾನಿಸಿದೆ. ಜಾನ್ ಕ್ಲಾರ್ಕ್ ವಿಚಾರಣಾ ಸಮಿತಿ ತನ್ನ ವರದಿಯಲ್ಲಿ ಆಸ್ಟ್ರೇಲಿಯಾದ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಜಾನ್ ಹೊವಾರ್ಡ್ ಸರಕಾರದಲ್ಲಿ ಗೃಹಖಾತೆಯ ಮಂತ್ರಿಗಳಾಗಿದ್ದ ಕೆವಿನ್ ಆ್ಯಂಡ್ರೂಸ್ ಮತ್ತು ಫಿಲಿಪ್ ರುಡೋಕ್‌ರನ್ನೂ ಕಟುವಾಗಿ ಟೀಕಿಸಿದೆ. ಈ ವರದಿ ಪ್ರಕಟವಾದನಂತರ ಆಸ್ಟ್ರೇಲಿಯಾ ಸರಕಾರ ಹನೀಫರ ಕ್ಷಮೆಯಾಚಿಸಬೇಕು ಎಂದು ಅಲ್ಲಿನ ಪ್ರಜೆಗಳೇ ಒತ್ತಾಯಿಸುತ್ತಿದ್ದಾರೆ.

ಆಸ್ಟ್ರೇಲಿಯಾದಲ್ಲಿ "ಶಂಕಿತ ಭಯೋತ್ಪಾದಕ" ನಾಗುವುದಕ್ಕೂ ಪುಣ್ಯ ಮಾಡಿರಬೇಕು. ಮೊಹ್ಮದ್ ಹನೀಫ್ ಆಸ್ಟ್ರೇಲಿಯಾದ ಬದಲು ನಮ್ಮ ಚೆಲುವ ಕನ್ನಡ ನಾಡಿನ ರಾಜಧಾನಿ ಬೆಂಗಳೂರಿನಲ್ಲೇ "ಶಂಕಿತ ಭಯೋತ್ಪಾದಕ" ನಾಗಿದ್ದಿದ್ದರೆ ಪೊಲೀಸರು ಬಿಡಿ, ಕನ್ನಡದ ಪತ್ರಿಕೆ ಮತ್ತು ಟಿವಿ ಚಾನೆಲ್ಲುಗಳು ಅವರನ್ನು ಹೇಗೆ ಚಿಂದಿ ಚಿಂದಿ ಮಾಡಿಬಿಡುತ್ತಿದ್ದವು ಎಂದು ಊಹಿಸಿಕೊಳ್ಳಿ. ಆಸ್ಟ್ರೇಲಿಯಾದ ನ್ಯಾಯಾಲಯದಲ್ಲಿ ಹನೀಫರ ಪರವಾಗಿ ಪೀಟರ್ ರೂಸೋನಂತಹ ಪ್ರತಿಭಾವಂತ ವಕೀಲರೇ ವಾದಿಸಿದರು. ಆದರೆ ಕರ್ನಾಟಕದಲ್ಲಿ ಶಂಕಿತ ಭಯೋತ್ಪಾದಕರ ಪರವಾಗಿ ಯಾವ ವಕೀಲನೂ ವಾದಿಸಕೂಡದು ಎಂದು ರಾಜ್ಯದ ಕಾನೂನು ಸಚಿವರೇ ಹೇಳಿದ್ದಾರೆ. ವಕೀಲರ ಸಂಘಗಳು ಸಹ ಈಗ ಅಂತಹ ನಿರ್ಣಯಗಳನ್ನು ಮಾಡುತ್ತಿವೆ. ಕಾನೂನಿನ ಆಳ್ವಿಕೆ ಪ್ರಜಾಪ್ರಭುತ್ವದ ಮೂಲಭೂತ ತತ್ವ. ಅದೇ ಬೇಡ ಎಂದು ರಾಜ್ಯದ ವಕೀಲರು ಮತ್ತು ಕಾನೂನು ಸಚಿವರು ಹೇಳುವುದಾದರೆ ಅವರುಗಳಾದರೂ ತಮ್ಮ ವೃತ್ತಿಯಲ್ಲಿ ಯಾಕೆ ಮುಂದುವರೆಯಬೇಕು? ನ್ಯಾಯಾಲಯಗಳಾದರೂ ಯಾಕೆ ಬೇಕು? ಆರೋಪಿಗಳು "ಅನ್ಯಮತೀಯ"ರಾದರೆ ಇದು ಯಾವುದರ ಅಗತ್ಯವೂ ಇಲ್ಲ ಎಂದು ನಮ್ಮ ಪ್ರಭುತ್ವ ವ್ಯವಸ್ಥೆ –ಅಂದರೆ ಆಡಳಿತ, ನ್ಯಾಯಾಲಯಗಳು, ಪೊಲೀಸರು ಮತ್ತು ಮಾಧ್ಯಮಗಳು– ಈಗಾಗಲೇ ತೀರ್ಮಾನಿಸಿಬಿಟ್ಟಿವೆ. ಕನ್ನಡದ ಪತ್ರಿಕೆಗಳಂತೂ ಈಗ "ಅನ್ಯಮತೀಯ"ರ ಜೊತೆಗೆ ಮಾನವ ಹಕ್ಕು ಸಂಘಟನೆ ಮತ್ತು ಲಿಬರಲ್ ಬುದ್ಧಿಜೀವಿಗಳನ್ನು ಸಹ ದೇಶದ್ರೋಹಿಗಳಂತೆಯೇ ಚಿತ್ರಿಸುತ್ತಿವೆ.




'ಜಯಕಿರಣ' ಪ್ರಕಟಿಸಿದ್ದು...

ಆಸ್ಟ್ರೇಲಿಯಾದ ಸರಕಾರ ಹನೀಫರನ್ನು ಬಂಧಿಸಿತು. ಆದರೆ ಅದನ್ನು ಪ್ರಶ್ನಿಸಿದವರ ದೇಶ ನಿಷ್ಠೆಯನ್ನು ಅದು ಸಂದೇಹಿಸಲಿಲ್ಲ. ಇದೇ ವೇಳೆಯಲ್ಲಿ ಕರ್ನಾಟಕದ ದಾವಣಗೆರೆ, ಹುಬ್ಬಳ್ಳಿ, ಮಂಗಳೂರು ಮತ್ತು ಇತರ ಅನೇಕ ಕಡೆ ಹಲವು ಮುಸ್ಲಿಮರನ್ನು ಭಯೋತ್ಪಾದನೆಯ ಆರೋಪದಲ್ಲಿ ಪೊಲೀಸರು ಬಂಧಿಸಿದ್ದಾರೆ. ಅವರಲ್ಲಿ ಕೆಲವರನ್ನು ವಿಚಾರಣೆಯ ನಂತರ ಬಿಟ್ಟಿದ್ದಾರೆ. ಈ ಬಗ್ಗೆ ಪೊಲೀಸರ ವಿವರಣೆ ಏನು? ಈಗಲೂ ಬಂಧನದಲ್ಲಿರುವವರ ವಿರುದ್ಧ ಸರಕಾರದ ಬಳಿ ಇರುವ ಸಾಕ್ಷ್ಯಾಧಾರಗಳು ಏನು? ಇವರ ಬಂಧನ ಇನ್ನೂ ಎಷ್ಟು ಕಾಲ ಮುಂದುವರಿಯುತ್ತದೆ? ಕರ್ನಾಟಕದಲ್ಲಿ ಹೀಗೆ ಪ್ರಶ್ನಿಸುವುದೂ ಕೂಡಾ ದೇಶ ದ್ರೋಹವೆನಿಸಿಕೊಳ್ಳುತ್ತಿದೆ. ಸರಕಾರ, ಪೊಲೀಸರು, ನ್ಯಾಯಾಲಯಗಳು, ಪತ್ರಿಕೆ ಮತ್ತು ಟಿ.ವಿ. ಚಾನೆಲ್ಲುಗಳು ಒಟ್ಟಾಗಿ ಕರ್ನಾಟಕವನ್ನು ಹಿಂಸೆಯ ನರಕವನ್ನಾಗಿ ಮಾರ್ಪಡಿಸಿರುವುದಕ್ಕೆ ದೃಷ್ಟಾಂತವೊಂದು ಈ ವರ್ಷದ ಕೊನೆಯ ದಿನಗಳಲ್ಲಿ ರಾಜಧಾನಿ ಬೆಂಗಳೂರಿನಲ್ಲೇ ದೊರೆಯಿತು.

ಡಿಸೆಂಬರ್ 28ರ ನಡುರಾತ್ರಿ ಡ್ರ್ಯಾಗ್ ರೇಸಿನಲ್ಲಿ ತನ್ನ ಬೆನ್ನುಹತ್ತಿದ ಟ್ರಾಫಿಕ್ ಪೊಲೀಸರಿಂದ ಸೇನಾಧಿಕಾರಿಯೊಬ್ಬರ ನಿವಾಸದ ಆವರಣಕ್ಕೆ ನುಗ್ಗಿದ ತರುಣ ಮುಕ್ರಂ ಪಾಶನನ್ನು ಅಲ್ಲಿನ ಸಿಬ್ಬಂದಿ ಗುಂಡು ಹಾರಿಸಿಕೊಂದರು. ಆತ ಬರಿಗೈಯಲ್ಲಿದ್ದ; ಆದರೆ ಮೊಬೈಲ್‌ನಲ್ಲಿ ಉರ್ದು ಮಾತನಾಡುತ್ತಿದ್ದ. ಅದೊಂದೇ ಕಾರಣಕ್ಕೆ, ಮುಕ್ರಂ ಟೆರರಿಸ್ಟ್ ಎಂದು ಕಾವಲಿನ ಸಿಬ್ಬಂದಿಯವರು ತೀರ್ಮಾನಿಸಿ, ಸ್ಥಳದಲ್ಲಿಯೇ ಶಿಕ್ಷೆಯನ್ನು ವಿಧಿಸಿದರು. ಇದರ ಬಗ್ಗೆ ಕರ್ನಾಟಕದ ಕಾನೂನು ಸಚಿವರ ಆಕ್ಷೇಪವೇನೂ ಇರಲಾರದು. ಅವರು ಮಾತ್ರವಲ್ಲ ರಾಜ್ಯದ ಪೊಲೀಸ್ ಇಲಾಖೆ, ನ್ಯಾಯಾಲಯಗಳು ಮತ್ತು ಪ್ರತಿಷ್ಠಿತ ಪತ್ರಿಕೆ ಹಾಗೂ ಟಿವಿ ಚಾನೆಲ್ಲುಗಳು ಕೂಡಾ ಈಗ ಪ್ರತಿಪಾದಿಸುತ್ತಿರುವ ಮುಸ್ಲಿಂ ಟೆರರಿಸ್ಟ್ ವಾದವನ್ನೇ ಬೆಂಗಳೂರಿನ ಈ ಕರಾಳ ಘಟನೆ ಪ್ರತಿಬಿಂಬಿಸುತ್ತಿದೆ.

ಕರ್ನಾಟಕದ ಕಾನೂನು ಸಚಿವರ ನ್ಯಾಯದ ಪರಿಕಲ್ಪನೆಯನ್ನು ಅವರ ಪಕ್ಷದ ಸಂಘಟನೆ ಭಜರಂಗದಳ ದಿನಂಪ್ರತಿ ಒಂದಲ್ಲ ಒಂದು ಊರಿನಲ್ಲಿ ಕಾರ್ಯಗತಗೊಳಿಸುತ್ತಿದೆ. ಮೊನ್ನೆ ಮಂಗಳೂರಿನಲ್ಲಿ ನಡೆದ ಎರಡು ಘಟನೆಗಳಲ್ಲಿ ಭಜರಂಗದಳದವರು, ಪೊಲೀಸ್ ಎಫ್‌ಐಆರ್ ದೂರು ದಾಖಲೆ ಕೋರ್ಟ್ ಕೇಸು ವಿಚಾರಣೆ, ತೀರ್ಪು ಇತ್ಯಾದಿ ಯಾವ ರಗಳೆಗಳೂ ಇಲ್ಲದೇ 'ಅನ್ಯಮತೀಯರು' ಅಪರಾಧಿಗಳು ಎಂದು ತಾವೇ ತೀರ್ಮಾನಿಸಿ ತಾವೇ ಶಿಕ್ಷೆಯನ್ನೂ ವಿಧಿಸಿ ಜಾರಿಗೂ ತಂದರು.



'ಜಯಕಿರಣ' ಪ್ರಕಟಿಸಿದ್ದು...

ಡಿಸೆಂಬರ್ 26ರ ರಾತ್ರಿ ಮಂಗಳೂರಿನ ಮಾತಾ ಎಜುಕೇಷನ್ ಟ್ರಸ್ಟ್‌ನ ಟ್ಯುಟೋರಿಯಲ್ ಹಾಗೂ ಕಂಪ್ಯೂಟರ್ ಸೆಂಟರಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮೈಸೂರು ಬೆಂಗಳೂರು ಪ್ರವಾಸಕ್ಕೆ ಹೊರಟಿದ್ದರು. ಪ್ರವಾಸೀ ತಂಡದಲ್ಲಿ ಸಂಸ್ಥೆಯ ಪ್ರಿನ್ಸಿಪಾಲ್ ಶ್ರೀಮತಿ ಸ್ವರೂಪ ಎನ್. ಶೆಟ್ಟಿ ಮತ್ತು ಹಲವು ಉಪನ್ಯಾಸಕರೂ ಇದ್ದರು. ಇವರು ಪ್ರಯಾಣಿಸುತ್ತಿದ್ದ ಬಸ್ ಮಂಗಳೂರಿನ ಹೊರವಲಯ ಸಮೀಪಿಸುತ್ತಿದ್ದಂತೆ ಸುಮಾರು 20 ಜನ ಭಜರಂಗಿ ಯುವಕರ ಗುಂಪು ಕಲ್ಲು ಎಸೆದು ಬಸ್ಸನ್ನು ತಡೆಯಿತು; ರಾಡು ದೊಣ್ಣೆಗಳ ಸಮೇತ ಬಸ್‌ನೊಳಗೆ ನುಗ್ಗಿ ಡ್ರೈವರ್‌ಗೆ ಥಳಿಸಿ ಕೆಲವು ವಿದ್ಯಾರ್ಥಿಗಳಿಗೂ ಗುಂಪಿನಲ್ಲಿದ್ದವರು ಹೊಡೆದರು; ಬಸ್ಸಿನ ಕಿಟಕಿ ಗಾಜು ಚೂರೂ ಬಿಡದಂತೆ ಪುಡಿ ಮಾಡಿದರು. ವಿದ್ಯಾರ್ಥಿಗಳು ಪ್ರವಾಸ ಮೊಟಕು ಮಾಡಿ ತಮ್ಮ ಮನೆಗಳಿಗೆ ಮರಳಿದರು. ಭಜರಂಗಿಗಳ ಈ ನಡುರಾತ್ರಿಯ ಕಾರ್ಯಾಚರಣೆಗೆ ಕಾರಣವನ್ನು ನೀವು ಈಗಾಗಲೇ ಊಹಿಸಿರುತ್ತೀರಿ. ಆ ಪ್ರವಾಸೀ ತಂಡದಲ್ಲಿ ಹಿಂದೂ ವಿದ್ಯಾರ್ಥಿನಿಯರಿದ್ದರು. ಅವರ ಜೊತೆ ಕೆಲವು ಮುಸ್ಲಿಂ ಹಾಗೂ ಕ್ರೈಸ್ತ ವಿದ್ಯಾರ್ಥಿಗಳಿದ್ದರು. ಮಂಗಳೂರಿನ ಭಜರಂಗಿಗಳಿಗೆ ಈ ಸುದ್ದಿ ತಲುಪಿದಾಗ ಅವರ ಮನಸ್ಸಿನಲ್ಲಿ ಯಾವ ಆಲೋಚನೆಗಳು ಬಂದಿರಬಹುದು ಎಂಬುದನ್ನು ಸಹ ನೀವು ಊಹಿಸಬಲ್ಲಿರಿ. ಹಿಂದೂ ವಿದ್ಯಾರ್ಥಿನಿಯರ ಮಾನ ಸಂರಕ್ಷಣೆಗಾಗಿ ಭಜರಂಗಿಗಳು ಕೈಗೊಂಡ ಕ್ರಮ ಇದು! ಆಕಸ್ಮಾತ್ ಪ್ರವಾಸಿ ತಂಡದಲ್ಲಿ ಬರೇ ಮುಸ್ಲಿಂ ಮತ್ತು ಕ್ರೈಸ್ತ ವಿದ್ಯಾರ್ಥಿನಿಯರಿದ್ದು ಅವರ ಜೊತೆ ಹಿಂದೂ ವಿದ್ಯಾರ್ಥಿಗಳು ಇದ್ದಿದ್ದರೆ ಭಜರಂಗಿಗಳು ಖಂಡಿತ ಈ ದಾಳಿಗೆ ಮುಂದಾಗುತ್ತಿರಲಿಲ್ಲ. ಭಜರಂಗದಳದ ಮಂಗಳೂರು ಘಟಕದ ಅಧ್ಯಕ್ಷ ಶರಣ್ ಪಂಪ್‌ವೆಲ್ ಪತ್ರಕರ್ತರ ಜೊತೆ ಈ ಘಟನೆಯ ಬಗ್ಗೆ ಮಾತನಾಡುತ್ತಾ "ಪ್ರವಾಸೀ ತಂಡದಲ್ಲಿದ್ದ ಒಬ್ಬ ವಿದ್ಯಾರ್ಥಿಯೇ ನಮಗೆ ಹಿಂದೂ ವಿದ್ಯಾರ್ಥಿನಿಯರ ಜೊತೆ ಕೆಲವು ಮುಸ್ಲಿಂ ಮತ್ತು ಕ್ರೈಸ್ತ ವಿದ್ಯಾರ್ಥಿಗಳೂ ಇರುವ ಸಂಗತಿಯನ್ನು ತಿಳಿಸಿದ. ಈ ಘಟನೆ (ಪ್ರವಾಸಿ ಬಸ್ ಮೇಲೆ ದಾಳಿ) ಹಾದಿತಪ್ಪಿ ನಡೆಯುವವರ ವಿರುದ್ಧ ನಮ್ಮ ಸಹಜ ಪ್ರತಿಕ್ರಿಯೆ" ಎಂದು ಹೇಳಿದ್ದಾರೆ. (ದ ಹಿಂದು ಡಿ.28ರ ಮುಖಪುಟದ ಸುದಿಪ್ತೊ ಮೊಂಡಲ್ ವರದಿ).



'ವಿಜಯ ಕರ್ನಾಟಕ'ದಲ್ಲಿ ಪ್ರಕಟವಾದ ಸುದ್ದಿ

ಅದೇ ದಿನ ನಡೆದ ಇನ್ನೊಂದು ಘಟನೆಯಲ್ಲಿ ಮೊಹ್ಮದ್ ಸಾಹುಲ್ ಎಂಬ ತರುಣನಿಗೆ ಭಜರಂಗಿಗಳು ಹೊಡೆದು ನಂತರ ಪೊಲೀಸರಿಗೆ ಒಪ್ಪಿಸಿ "ಪಾಠ ಕಲಿಸಿದ್ದಾರೆ" (ಪತ್ರಿಕೆಯೊಂದರ ವರದಿ ಪ್ರಕಾರ) ನಗರದ ಒಂದು ಟಾಟಾ ಇಂಡಿಕಾಂ ಕೇಂದ್ರದಲ್ಲಿ ನೌಕರನಾಗಿದ್ದ ಈತ ಲಿಫ್ಟ್‌ನಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದನಂತೆ. ಆದರೆ ಭಜರಂಗಿ ನಾಯಕ ಶರಣ್ ಪಂಪ್‌ವೆಲ್ ಪ್ರಕಾರ ಸಾಹುಲ್ ಹಿಂದು ತರುಣಿಯೊಬ್ಬಳನ್ನು ಪ್ರೀತಿಸುವ 'ಧೈರ್ಯ' ತೋರಿದ್ದ.

ಮಂಗಳೂರು ಶಹರಿನ ಕೇಂದ್ರ ಬಸ್ ನಿಲ್ದಾಣದ ಸಮೀಪದ ಐಸ್‌ಕ್ರೀಮ್ ಪಾರ್ಲರ್‌ನಲ್ಲಿ ಮಧ್ಯಾಹ್ನ ಮೂರುಗಂಟೆಗೆ ಹಿಂದೂ ವಿದ್ಯಾರ್ಥಿನಿಯರ ಜೊತೆ ಮುಸ್ಲಿಂ ವಿದ್ಯಾರ್ಥಿಗಳು ಐಸ್‌ಕ್ರೀಂ ತಿನ್ನುವುದನ್ನು ನೋಡಿ 'ಚೆಲ್ಲಾಟ' 'ರಾಸಕ್ರೀಡೆ' ಎಂದು ಮುಂತಾಗಿ ವರ್ಣಿಸುವ ಪತ್ರಿಕೆಗಳಿರುವ ಉಡುಪಿ, ಮಂಗಳೂರುಗಳಲ್ಲಿ ಇಂತಹ ವರದಿಗಳನ್ನು ಹೇಗೆ ಓದಬೇಕು ಎಂದು ನಮಗೆ ಚೆನ್ನಾಗಿ ಅಭ್ಯಾಸವಾಗಿದೆ. ಕರಾವಳಿಯ ಹಲವು ಊರುಗಳಲ್ಲಿ "ಅನ್ಯಮತೀಯ" ಪುರುಷರು ಹಿಂದೂ ಮಹಿಳೆಯರ ಜೊತೆ ಬಸ್‌ಸ್ಟ್ಯಾಂಡ್‌ನಲ್ಲಿ ಮಾತನಾಡುತ್ತಿದ್ದರು ಎಂಬ ಕಾರಣಕ್ಕೇನೆ ಭಜರಂಗಿಗಳು ಅವರನ್ನು 'ಹಿಡಿದು' ಪೊಲೀಸರಿಗೆ 'ಒಪ್ಪಿಸುವುದು', ಪೊಲೀಸರು ಈ 'ತಪ್ಪಿತಸ್ಥರ' ವಿಚಾರಣೆ ನಡೆಸಿ 'ಬುದ್ಧಿವಾದ' ಹೇಳಿ ಮನೆಗೆ ಕಳುಹಿಸುವುದು, ಒಮ್ಮೊಮ್ಮೆ ಹೀಗೆ 'ಸಿಕ್ಕಿಬಿದ್ದ' ಹಿಂದೂ ಮಹಿಳೆಯರನ್ನೂ ಪೊಲೀಸ್ ಠಾಣೆಗೆ ಕರೆಸಿ ಅವರಿಗೂ ಸೂಕ್ತ 'ಬುದ್ಧಿವಾದ' ಹೇಳುವುದು–ಇಂತಹ ಹಲವು ಘಟನೆಗಳು ಮಂಗಳೂರಿನ ಆಸುಪಾಸಿನಲ್ಲಿ ನಡೆದಿವೆ.

ಹಿಂದೂ ಮಹಿಳೆಯರ ಜೊತೆ 'ಅನ್ಯಮತೀಯ' ಪುರುಷರು ಪ್ರಯಾಣಿಸುವ ಪ್ರವಾಸಿ ಬಸ್‌ನ್ನು ಜಖಂಗೊಳಿಸಿದ ಘಟನೆ ಮಂಗಳೂರಿನಲ್ಲಿ ನಡೆಯುತ್ತಿರುವುದು ಇದೇ ಮೊದಲ ಬಾರಿ ಅಲ್ಲ. 2005ರ[...] ನಗರದ ಜವಳಿ ಅಂಗಡಿ ಒಂದರ ಮಾಲೀಕರು ತಮ್ಮ ನೌಕರರಿಗೆ ಏರ್ಪಡಿಸಿದ್ದ ಮೈಸೂರು ಪ್ರವಾಸದ ಬಸ್ ಮೇಲೂ ಭಜರಂಗಿಗಳು ದಾಳಿ ನಡೆಸಿ ಪ್ರವಾಸವನ್ನು ತಡೆದಿದ್ದರು. ಅಂದು ಈ ದಾಳಿಯಲ್ಲಿ ಹಲವರು ಗಂಭೀರವಾಗಿ ಗಾಯಗೊಂಡಿದ್ದೇ ಅಲ್ಲದೇ ತಮ್ಮ ನಗದು, ಚಿನ್ನಾಭರಣಗಳನ್ನು ಕಳೆದುಕೊಂಡಿದ್ದರು. ಕರ್ನಾಟಕದಲ್ಲಿ ಭಜರಂಗಿಗಳು ಚಾಲ್ತಿಗೆ ತರುತ್ತಿರುವ ಈ ಹೊಸ ನ್ಯಾಯ ಪರಿಕಲ್ಪನೆಗೆ ರಾಜ್ಯದ ಮಾಧ್ಯಮಗಳೂ ಸೇರಿದಂತೆ ಆಳುವ ವ್ಯವಸ್ಥೆಯ ಸಂಪೂರ್ಣ ಸಮ್ಮತಿ ಇದೆ.

'ಕನ್ನಡದ ಮನಸ್ಸು', 'ಕನ್ನಡದ ವಿವೇಕ', 'ಕನ್ನಡಿಗರ ಸಹನೆ' ಇತ್ಯಾದಿ ಮನಮರುಳು ನುಡಿ ಗಟ್ಟುಗಳನ್ನು ನಮ್ಮ ಬುದ್ಧಿ ಜೀವಿಗಳು ಬಳಸುವುದುಂಟು.


ಇವೆಲ್ಲ ಇರುವುದೇ ಹೌದಾದರೆ ಇವಕ್ಕೂ ನಾಡಿನಲ್ಲಿ ನೆಲೆಯೂರುತ್ತಿರುವ ಭಜರಂಗಿ ಸಂಸ್ಕೃತಿಗೂ ಎತ್ತಣಿಂದೆತ್ತ ಸಂಬಂಧ ಎಂಬುದನ್ನು ಅವರು ಬಿಡಿಸಿ ಹೇಳಬೇಕು.

■ ಜೆ.ರಾಜಶೇಖರ

ರೈತರ ಪಾಲಿನ ಗೋಮುಖವ್ಯಾಘ್ರ ತ(ತ್ರಿ)ಂಬಾಕೆ

ತಾನು ಬಸವ ತತ್ವ ಪ್ರೇಮಿ ಎಂದು ಹೇಳಿಕೊಳ್ಳುತ್ತಲೇ ಜಾತಿವಾದಿಯಾಗಿರುವ ಬಸವರಾಜ ತಂಬಾಕೆ ಎಂಬ ರೈತ ನಾಯಕ ಇತ್ತೀಚೆಗೆ ಸಿಫಾ ಎಂಬ ರೈತ ವಿರೋಧಿ ಅಂತರರಾಷ್ಟ್ರೀಯ ಸಂಘಟನೆಯ ಭಾರತೀಯ ಘಟಕದ ಅಧ್ಯಕ್ಷನಾಗುವ ಮೂಲಕ ತನ್ನ ಗೋಮುಖ ವ್ಯಾಘ್ರತನವನ್ನು ಬಟಾಬಯಲುಗೊಳಿಸಿದ್ದಾರೆ. ಅದರ ಸುತ್ತ ವಿವರವಾದ ವರದಿ ಇಲ್ಲಿದೆ.

ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಪದವಿಯಲ್ಲಿ ಬಹಳ ವರ್ಷಗಳ ಕಾಲ ರಾರಾಜಿಸಿದ ಬಸವರಾಜ ತಂಬಾಕೆ ಮೊನ್ನೆ ರೈತ ವಿರೋಧಿ ಸಂಘಟನೆಯಾದ ಸಿಫಾ (ಕಾನ್‌ಫೆಡರೇಷನ್ ಆಫ್ ಇಂಡಿಯನ್ ಫಾರ್ಮರ್ಸ್ ಅಸೋಸಿಯೇಷನ್ಸ್-ಸಿಐಎಫ್‌ಎ)ದ ಭಾರತೀಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಏರಿ ರೈತರಿಗೆ ದೊಡ್ಡ ದ್ರೋಹ ಬಗೆದಿದ್ದಾರೆ.



ಬಸವರಾಜ ತಂಬಾಕೆ

ಹೇಳಿಕೇಳಿ ಭಾರತದ ಸರ್ಕಾರವು ಮೊದಲಿನಿಂದಲೂ ಪ್ರಬಲವಾದ ಜನ ಸಂಘಟನೆಗಳನ್ನು ಒಡೆಯುತ್ತಾ, ಆ ಮೂಲಕ ಜನ ದನಿಯನ್ನು ಅಡಗಿಸುತ್ತಾ, ಪಟ್ಟಭದ್ರ ಹಿತಾಸಕ್ತಿಗಳ ಪರವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಅದಕ್ಕೆ ನಮ್ಮ ದೇಶದ ಇತಿಹಾಸದುದ್ದಕ್ಕೂ ಹಲವಾರು ಉದಾಹರಣೆಗಳನ್ನು ಕೊಡಬಹುದು. ಅಂಥ ಒಂದು ಇನ್ನೊಂದು ಯತ್ನವಾಗಿ ಭಾರತದ ಸರ್ಕಾರ ಇತ್ತೀಚೆಗೆ ವಿದೇಶಿ ಬಂಡವಾಳಿಗರ ನೆರವಿನೊಂದಿಗೆ ಸಿಫಾ ಎಂಬ ಸರ್ಕಾರೇತರ ಸಂಘಟನೆಯೊಂದನ್ನು ಹುಟ್ಟು ಹಾಕಿದೆ. ಹಲವರ ಪ್ರಕಾರ, ಭಾರತದ ರೈತ ದ್ರೋಹಿ ಮಾಂಟಾಸೋ ತರಹದ ಅಂತರರಾಷ್ಟ್ರೀಯ ಕಂಪನಿಗಳು ಈ ಸಿಫಾದ ಹಿಂದಿವೆ. ಈ ಸಿಫಾದ ಉದ್ದೇಶ ಸರ್ಕಾರದ ನೀತಿಗಳಿಗೆ ರೈತರ ಬೆಂಬಲ ಸಿಗುವಂತೆ, ವಿದೇಶಿ ಕಂಪನಿಗಳ ಸರಕುಗಳನ್ನು ಇಲ್ಲಿನ ರೈತರು ಖರೀದಿಸುವಂತೆ ಮಾಡುವುದೇ ಆಗಿದೆ. ಅಂತಹ ಸಂಘಟನೆಯ ಭಾರತೀಯ ಅಧ್ಯಕ್ಷರಾಗಿ ತಂಬಾಕೆ ಈಗ 'ಕಂಗೊಳಿಸುತ್ತಿದ್ದಾರೆ'.

ಹಾಗೆ ನೋಡಿದರೆ ತಂಬಾಕೆಯವರ ವ್ಯಕ್ತಿತ್ವದಲ್ಲೂ, ಅವರು ಹಾದಿ ಬಂದಿರುವ ದಾರಿಯಲ್ಲೂ ಇಂತಹ ಒಂದು ರೈತ ದ್ರೋಹಿ ಪ್ರಕ್ರಿಯೆಯ ಸೂಚನೆಗಳು ಬಹಳ ಇದ್ದವು.



ಕರ್ನಾಟಕ ರೈತ ಸಂಘಕ್ಕೆ ಬರುವ ಪೂರ್ವದಲ್ಲಿ ತಂಬಾಕೆ ಸರಕಾರಿ ಶಾಲಾ ಶಿಕ್ಷಕರಾಗಿ, ಎಲ್‌ಐಸಿ ಏಜೆಂಟರಾಗಿ, ನಂತರ ಡೆವಲಪ್‌ಮೆಂಟ್ ಆಫೀಸರ್ ಆಗಿದ್ದವರು. ಆದರೆ ತಾನು ಲಿಂಗಾಯತ ಜಾತಿಗೆ ಸೇರಿದವರು ಎಂಬುದನ್ನೇ ಮುಖ್ಯ ಕಾರಣ ಮಾಡಿಕೊಂಡು ಮಾತೆ ಮಹಾದೇವಿಯ ಜೊತೆ ಕೆಲ ಕಾಲ ಗುರುತಿಸಿಕೊಂಡಿದ್ದರು. ಇದರಿಂದ ಅವರಿಗೆ ಎಲ್‌ಐಸಿ ಪಾಲಿಸಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ಮಾರಲು ಅನುಕೂಲವಾಯಿತೆನ್ನಿ.

ಸ್ವಂತಿಕೆ ಎಂಬುದೆ ಗೊತ್ತಿಲ್ಲದ, ಪಕ್ಕಾ ಅವಕಾಶವಾದಿಯಾಗಿರುವ ತಂಬಾಕೆಯನ್ನು ಮಾತಿನ ಮಹಾದೇವಿ ತನ್ನ ಹತ್ತಿರ ಬಿಟ್ಟುಕೊಂಡದ್ದೇ ತಡ ಅವರ ಖಾಸಗಿ ವಿಷಯದಲ್ಲೂ ಕೈಯಾಡಿಸುವಷ್ಟು ಪ್ರಬಲರಾದರು ತಂಬಾಕೆ. ಆದರೆ ಯಾವಾಗ ನಾಮಾಂಕಿತ ಬದಲಾವಣೆಯ ಹಗರಣದಲ್ಲಿ ಮಾತಿನ ಮಹಾದೇವಿಯ ಅಸಲಿ ಹೂರಣ ಬಯಲಾಯಿತೋ ಆಗ ತಂಬಾಕೆ ಸ್ವಲ್ಪ ದೂರ ಸರಿದು ತಾವು ಇನ್ನೆಲ್ಲಿಗೆ ಹೋಗುವುದು ಎಂದು ನೋಡುತ್ತಿರುವಾಗಲೇ ಅವರ ಕಣ್ಣಿಗೆ ಬಿದ್ದದ್ದು ರಾಜ್ಯ ರೈತ ಸಂಘ.

ಕರ್ನಾಟಕ ರಾಜ್ಯ ರೈತ ಸಂಘಕ್ಕೇನು ತಂಬಾಕೆ ಸ್ವಇಚ್ಛೆಯಿಂದ ಎಂಟ್ರಿಯಾಗಿರಲಿಲ್ಲ. ಇದು ಕೂಡ ತನ್ನ ಎಲ್‌ಐಸಿ ವಿಮೆ ಮಾಡಿಸಲು ಮತ್ತಷ್ಟು ಅನುಕೂಲವಾಗುತ್ತದೆ ಎಂದೇ ಅದನ್ನು ಸೇರಿದ್ದರು. ಕೆಲವು ಸಲ ರೈತ ಮುಖಂಡರ ಖಡಕ್ ಮಾತು, ಒಂದೇ ಸಲಕ್ಕೆ ಅಧಿಕಾರಶಾಹಿ ಹಾಗೂ ರಾಜಶಾಹಿಯನ್ನು ವಿರೋಧಿಸುವ ಮಾತುಗಳು ಅವರಿಗೆ ಬಹು ಎಡತಾಗುತ್ತಿದ್ದವು. ಅಂಥ ಸಂದರ್ಭ ಬಂದಾಗ ಆ ಸ್ಥಳದಿಂದಲೆ ಜಾರಿಕೊಳ್ಳುವ ಜಾಯಮಾನವನ್ನು ರೂಢಿಸಿಕೊಂಡರು. ಆದರೂ ರಾಜ್ಯ ರೈತಸಂಘದ ಅಂದಿನ ಪ್ರಮುಖರಾದ ಎಚ್.ಎಸ್.ರುದ್ರಪ್ಪ ಪ್ರೊ.ನಂಜುಂಡಸ್ವಾಮಿ ಹಾಗೂ ಸುಂದರೇಶ್ ಅವರುಗಳು ತಂಬಾಕೆಯ ನಕಲಿ ರೈತ ಕಳಕಳಿಯನ್ನು ಅಸಲಿ ಕಳಕಳಿಯೆಂದು ನಂಬಿ ಅವರನ್ನು ರೈತ ಮುಖಂಡರಲ್ಲೊಬ್ಬರಾಗಿ ನೋಡತೊಡಗಿದರು.



ಸಿಫಾ ಎಂಬ 'ರೈತ' ಸಂಘಟನೆಯ ಕಾರ್ಯಕ್ರಮ

ಮತ್ತೊಂದು ಚೋದ್ಯದ ಸಂಗತಿಯೆಂದರೆ ರಾಜ್ಯ ರೈತ ಸಂಘದಲ್ಲಿ ಆರಂಭದಿಂದಲೂ ಇರುವುದಾಗಿ ತೋರಿಸಿಕೊಳ್ಳುತ್ತ ಬಂದಿರುವ ತಂಬಾಕೆಯವರು 1983-1984ರ ರಾಸ್ತಾ ರೋಕೋ ಚಳವಳಿಯಲ್ಲಿಯೂ ಭಾಗವಹಿಸಿದಂತೆ ನಟಿಸುತ್ತಲೇ ಸರಕಾರದಿಂದ ಪಾರಾಗುತ್ತಿದ್ದರು. ಹೀಗೆ ಸರಕಾರಕ್ಕೆ ಚಳ್ಳೆ ಹಣ್ಣು ತಿನ್ನಿಸುತ್ತಲೇ ರೈತರನ್ನು ಸಂಘಟಿಸುತ್ತಿದ್ದರೆ ಅದನ್ನು ಯಾರಾದರೂ ಮೆಚ್ಚಬಹುದಿತ್ತು, ಆದರೆ ಈ ಮಹಾತ್ಮರು ಮಂದಿ ಮಕ್ಕಳನ್ನು ಪ್ರತಿಭಟನೆಗೆ ಕಳುಹಿಸಿ ಅವರೆಲ್ಲ ಜೈಲಿಗೆ ಹೋಗುವಂತೆ ಮಾಡುತ್ತಲೆ ತಾವು ಮಾತ್ರ ಎಲ್‌ಐಸಿ ಕಚೇರಿಯಲ್ಲಿ ವಿರಾಜಮಾನರಾಗಿರುತ್ತಿದ್ದರು.

ಪ್ರೊ.ನಂಜುಂಡಸ್ವಾಮಿಯವರು ರೈತ ಸಂಘದ ಅಧ್ಯಕ್ಷರಾಗಿದ್ದಾಗ ಅವರ ಮತ್ತು ಇನ್ನೊಬ್ಬ ರೈತ ಮುಖಂಡ ಬಾಬಾಗೌಡರ ನಡುವಿನ ಸುಮಧುರ ಬಾಂಧವ್ಯಕ್ಕೆ ತಂಬಾಕೆ ಕೊಳ್ಳಿ ಇಟ್ಟ ಬಗೆಗೆ ಈಗಲೂ ಗುಮಾನಿಗಳಿವೆ. ಹೀಗೆ ಬಾಬಾಗೌಡರನ್ನು ರೈತಸಂಘದಿಂದ ಸೈಡ್‌ಗೆ ಸರಿಸುತ್ತಲೆ ಮತ್ತದೆ ಪ್ರೊಫೆಸರ್ ವಿರುದ್ಧ ಕೆ.ಎಸ್.ಪುಟ್ಟಣ್ಣಯ್ಯನವರಿಗೆ ತಂಬಾಕೆ ಫಿಟ್ಟಿಂಗ್ ಇಟ್ಟಿದ್ದರು ಎಂಬುದೂ ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಅಷ್ಟೇ ಅಲ್ಲದೆ, ನಂಜುಂಡಸ್ವಾಮಿಯವರ ನಿಧನದ ನಂತರ ಅವರ ಮಕ್ಕಳಾದ ಚುಕ್ಕಿ ಹಾಗೂ ಪಚ್ಚೆಯನ್ನು ಯಾಮಾರಿಸಲು ಯತ್ನಿಸಿದ್ದರು ತಂಬಾಕೆ. ಆದರೆ ತಂಬಾಕೆಯ ತಿಂದೊಡಿತನದ ಬಗೆಗೆ ಮೊದಲೆ ಪ್ರೊಫೆಸರ್ ಹೇಳಿದ್ದರಿಂದಲೋ ಏನೋ ಚುಕ್ಕಿ ತಂಬಾಕೆಯ ಜನ್ಮ ಜಾಲಾಡಿ ಕಳಿಸಿದ್ದರು.

ಅತ್ತ ಶರಣರ ಹೆಸರು ಹೇಳುತ್ತ ಇತ್ತ ರೈತರ ಹೆಸರು ಹೇಳುತ್ತ ಎರಡೂ ಕಡೆಯೂ ಬೆಳೆಯುತ್ತಾ ಬಂದಿರುವ ತಂಬಾಕೆ ಇತ್ತ ಇಳಕಲ್ಲಿನ ಮಹಾಂತಸ್ವಾಮಿ ಮತ್ತು ಗದುಗಿನ ಜಗದ್ಗುರುಗಳೊಂದಿಗೆ ಹತ್ತಿರವಿರುವವರಂತೆ ಕಾಣಿಸಿಕೊಳ್ಳುತ್ತಲೇ ಅತ್ತ ಒಳಗೊಳಗೆ ಚಿಡ್ಡಿ ತೊಟ್ಟಿರುವ ಬೆಂಗಳೂರಿನ ಬೇಲಿಮಠದ ಶಿವರುದ್ರಸ್ವಾಮಿಯೊಂದಿಗೂ ಸಖ್ಯ ಇಟ್ಟುಕೊಂಡಿದ್ದಾರೆ. ಜೊತೆಗೆ ಕೋಡಿ ಮಠದ ಶಾಂತವೀರ ಸ್ವಾಮಿಯೊಂದಿಗೂ ಗಳಸ್ಯ ಕಂಠಸ್ಯ ಸಂಬಂಧವಿದೆ. ಅಷ್ಟೇ ಅಲ್ಲ, ಇತ್ತ ಬಸವತತ್ವದ ಬಗ್ಗೆ ಸಭೆಗಳಲ್ಲಿ ಚೀರುತ್ತಲೇ ಅತ್ತ ಪಂಚಾಚಾರ್ಯರ ಹತ್ತಿರಕ್ಕೂ ತನ್ನದೊಂದು ಖುರ್ಚಿ ಇಟ್ಟುಕೊಂಡಿದ್ದಾರೆ.

ಬೀದರ ಜಿಲ್ಲೆಯ ಭಾಲ್ಕಿಯ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷನಾಗಿರುವ ಭೀಮಣ್ಣ ಖಂಡ್ರೆಗೆ ಗಾಳ ಹಾಕಿ, ಚಿತ್ರದುರ್ಗದ ಶರಣರನ್ನು ವಂಚಿಸಿ ಬಸವಕಲ್ಯಾಣದಲ್ಲಿರುವ ಅನುಭವ ಮಂಟಪಕ್ಕೆ (ಬೈಲಾದಲ್ಲಿ ಇಲ್ಲದೆ ಇರುವ) ಆಡಳಿತಾಧಿಕಾರಿ ಹುದ್ದೆಯನ್ನು ತಮ್ಮ ಎಂದಿನ ಚಾಟಾದಿತನದಿಂದಲೆ ಹೊಡಕೊಂಡಿದ್ದಾರೆ. ಬಸವ ತತ್ವ ಪ್ರೇಮಿಯಾದ, ಅನುಭವ ಮಂಟಪದ ರೂವಾರಿಗಳಲ್ಲಿ ಒಬ್ಬರಾದ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರನ್ನು ಆ ಜಾಗದಿಂದಲೆ ಹೈಜಾಕ್ ಮಾಡಿ, ಓಂಪ್ರಕಾಶ ರೊಟ್ಟಿಯಿಂದ ಸಂದರ್ಭವೊಂದರಲ್ಲಿ ಲಾತಾ ತಿಂದಿದ್ದೂ ಆಗಿದೆ.

ಹುಟ್ಟುಗುಣ ಸುಟ್ಟರೂ ಹೋಗದೆಂಬಂತೆ ಇಡೀ ರೈತ ಸಂಘದ ತತ್ವಗಳನ್ನೆ ನುಂಗಿನೊಣೆಯುವ ಗ್ಯಾಟ್, ಡಂಕೆಲ್ ಮುಂತಾದ ಬಹುರಾಷ್ಟ್ರೀಯ ಕಂಪನಿಗಳ ತಾಳಕ್ಕೆ ತಕ್ಕಂತೆ ಕುಣಿಯುವ ಸೀಫಾದ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ ತಂಬಾಕೆ. ಆದರೆ ಅದನ್ನು ಜನಸಾಮಾನ್ಯರಿಗೆ ತೋರಗೊಡದೆ ತಾವಿನ್ನೂ ರೈತ ಸಂಘದ ನಾಯಕರಂತೆ ಪೋಸು ಕೊಡುತ್ತಿದ್ದಾರಲ್ಲದೆ, ಬಹುರಾಷ್ಟ್ರೀಯ ಕಂಪನಿಗಳ ಮೋಸವನ್ನು ಮುಕ್ತವಾಗಿ ವಿರೋಧಿಸುವ ವಂದನಾಶಿವಾ ಅವರನ್ನು ತೀರಾ ಇತ್ತೀಚೆಗೆ ಕಲಬುರ್ಗಿಗೆ ಕರೆಸಿ ಸಭೆ ನಡೆಸಿದ್ದಾರೆ ಸೀಫಾದ ಅಧ್ಯಕ್ಷ ತಂಬಾಕೆ.

ರೈತನಲ್ಲದಿದ್ದರೂ ರೈತರ ಹೆಸರಿನ ಮೇಲೆ ಬೆಳೆಯುತ್ತಿರುವ ಕಂಟ್ರಾಕ್ಟರ್ ಕೇದಾರಲಿಂಗಯ್ಯ ಹಿರೇಮಠ ಎಂಬಾತನೊಂದಿಗೆ ಮೊನ್ನೆ ಕಲಬುರ್ಗಿಯಲ್ಲಿ ನಡೆದ ಸಭೆಯೊಂದರಲ್ಲಿ 'ನನಗೆ ನೀ, ನಿನಗೆ' ಎಂಬಂತೆ ಪರಸ್ಪರ ಸನ್ಮಾನಿಸಿಕೊಂಡಿದ್ದಾರೆ. ಇಷ್ಟು ವರ್ಷ ತಾನು ರೈತರಿಗೆ ಕಡಿದು ಕಟ್ಟೆಹಾಕಿದ್ದಕ್ಕೋ? ಶರಣರ ಹೆಸರನ್ನು ಹೇಳಿ ಹೊಟ್ಟೆ ಹೊರೆದದ್ದಕ್ಕೋ? ಅವರಿವರ ಕೈಕಾಲು ಹಿಡಿದು 'ಹಸಿರು ಜಂಗಮ' ಎಂಬ ಬೊಟ್ಟಿತನದ ಅಭಿನಂದನಾ ಗ್ರಂಥವೊಂದನ್ನೂ ಸಮರ್ಪಿಸಿಕೊಂಡಿದ್ದಾನೆ.


ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೋ ಆಯಾ ಪಕ್ಷದ ಮುಖಂಡರೊಂದಿಗೆ ಸಖ್ಯ ಹೊಂದುವ ಕಲೆ ಬಸವರಾಜ ತಂಬಾಕೆಗೆ ಕರಗತ. ಇದಕ್ಕೆ ತಾಜಾ ಉದಾಹರಣೆಯೆಂದರೆ ಕರ್ನಾಟಕದ ಕೃಷಿ ಮಿಷನ್ನಿನ ರಾಜ್ಯ ನಿರ್ದೇಶಕರಾಗಿ ಸರಕಾರದಿಂದ ನಿಯುಕ್ತಗೊಂಡಿದ್ದಾಗಿದೆ. ಅತ್ತ ಸೀಫಾದ ಅಧ್ಯಕ್ಷಗಿರಿಯನ್ನೂ ಹೊಡಕೊಂಡಾಗಿದೆ.

ಆದರೆ ರೈತರಿಗೆ ಬೇಲಿಯಂತೆ ಕಾಣಿಸುವ, ಮಗುವಿಗೆ ತಾಯಿ ಹಾಲಿನಂತೆ ಕಾಣಿಸುವ ರೈತ-ಬಸವ ಸಂಘಟನೆಯ ಜೊತೆ ಸಖ್ಯ ಇಟ್ಟುಕೊಂಡಿರುವ ಇಂಥ ಗೋಮುಖವ್ಯಾಘ್ರಗಳಿಂದ ಸಮಾಜ ಎಚ್ಚೆತ್ತುಕೊಳ್ಳದೆ ಹೋದರೆ ಎಂಥ ಸಂಘಟನೆಯಾದರೂ ಹೇಳಹೆಸರಿಲ್ಲದೆ ಮಂಗಮಾಯವಾಗುತ್ತದೆ. ಎಂಥ ದೊಡ್ಡ ಸಮಾಜವಾದರೂ, ಎಂಥ ಗಟ್ಟಿನೆಲೆಯದ್ದೇ ಆದರೂ ಅದು ಛಿದ್ರಗೊಳ್ಳುತ್ತವೆ, ಅಲ್ಲವೆ? ■

ಸಮರ ಸೇನೆ

ಇಡೀ ರಾಜ್ಯದಲ್ಲಿ ಅಚ್ಚಕನ್ನಡ ಸಿಗುವುದು ಕೆ.ಆರ್. ಪೇಟೆ, ನಾಗಮಂಗಲ, ತುರುವೇಕೆರೆ ಮತ್ತು ಚನ್ನರಾಯಪಟ್ಟಣ ಎಂಬ ನಾಲ್ಕು ತಾಲೂಕುಗಳಲ್ಲಿ ಮಾತ್ರ ಎಂಬ ಮಾತಿದೆ. ಯಾಕೆಂದರೆ ಈ ನಾಲ್ಕು ತಾಲ್ಲೂಕಿನ ಕನ್ನಡದ ಮೇಲೆ ಯಾವ ಭಾಷೆಯ ಪ್ರಭಾವವೂ ಆಗಿಲ್ಲವಂತೆ. ಯಾವುದೇ ಭಾಷಾಪದದ ಹಂಗಿಲ್ಲದೆ ಇಲ್ಲಿನ ಹಳ್ಳಿಗರು ಗಂಟೆಗಟ್ಟಲೆ ಮಾತನಾಡುತ್ತಾರೆ. ಅವರ ಮಾತಿನ ವರಸೆಯೇ ಹಾಸ್ಯದಿಂದ ಕೂಡಿರುತ್ತವೆ. ಅಪ್ಪರಮಟ್ಟಿನ ಸೊಗಡು ಈ ನೆಲದ ಕನ್ನಡಕ್ಕಿದೆ.

ಇಂತಹ ಜಾಗದಲ್ಲಿ ಕರ್ನಾಟಕ ಸಮರ ಸೇನೆ ಎಂಬ ಸಂಘಟನೆ ಹುಟ್ಟಿಕೊಂಡಿದೆ. ಈ ಸೇನೆಯ ಘೋಷಣೆ "ಸ್ನೇಹಕ್ಕೂ ಸಿದ್ಧ ಸಮರಕ್ಕೂ ಬದ್ಧ" ಎಂಬುದು. ಚನ್ನರಾಯಪಟ್ಟಣದಲ್ಲಿ ಇವರು ಯಾರ ಮೇಲೆ ಸಮರ ಸಾರುತ್ತಾರೆಂದು ನಮಗಿನ್ನೂ ಹೊಳೆದಿಲ್ಲ. ಬಹುಶಃ ಇವರ ಅಸಂಬದ್ಧ ಕಾರ್ಯಕ್ರಮಗಳಿಗೆ ಹಣ ಕೊಡದವರ ವಿರುದ್ಧ ಇವರು ನಿರಂತರ ಸಮರ ಸಾರಬಹುದೇನೊ!



ಯು.ಎ. ಸುನಿಲ್ ಗೌಡ [illegible]

ಕಳೆದ 29ನೇ ತಾರೀಖು ರಾಷ್ಟ್ರಕವಿ ಕುವೆಂಪು ಅವರ 104ನೇ ಜನ್ಮವಾರ್ಷಿಕೋತ್ಸವ, ಇತ್ತೀಚೆಗೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಸಿಕ್ಕಿದೆ ಎಂಬ ನೆಪಗಳನ್ನಿಟ್ಟುಕೊಂಡು ಒಂದು ಅದ್ದೂರಿ ಸಮಾರಂಭವನ್ನು ಚನ್ನರಾಯಪಟ್ಟಣದ ಸಮರ ಸೇನೆಯವರು ಮಾಡಿದ್ದರು. ಸಮಾರಂಭ ಮುಗಿದ ಮೇಲೆ ಒಂದು ನಾಟಕವನ್ನೂ ಇಟ್ಟುಕೊಂಡಿದ್ದರು.

ಅದು ನಾಗತಿಹಳ್ಳಿಯ ಮಹಿಳೆಯರು ಸೇರಿ ಕಲಿತಿರುವ ಕರಿಭಂಟ ನಾಟಕ. ಕಂಬಾಳು ಸಿದ್ದಗಂಗಯ್ಯನವರ ಈ ನಾಟಕವನ್ನು ಛಾಯಾಭಾರ್ಗವಿ ನಿರ್ದೇಶಿಸಿದ್ದಾರೆ. ನಾಗತಿಹಳ್ಳಿಯ ಹಲವು ಹೆಬ್ಬೆಟ್ಟಿನ ಹೆಣ್ಣುಮಕ್ಕಳು ತುಂಬ ಅದ್ಭುತವಾಗಿ ಈ ನಾಟಕವನ್ನು ಅಭಿನಯಿಸುತ್ತಾರೆ. ಈ ನಾಟಕಕ್ಕಾಗಿ ನಾಗತಿಹಳ್ಳಿ ಚಂದ್ರಶೇಖರ್ ಲಕ್ಷದ ಹತ್ತಿರ ಖರ್ಚು ಮಾಡಿದ್ದಾರೆ. ಈಗಾಗಲೇ ಸಿರಿಗೆರೆಯಲ್ಲಿ ಪ್ರದರ್ಶನಗೊಂಡಿರುವ ಈ ನಾಟಕವನ್ನು ಚನ್ನರಾಯಪಟ್ಟಣದಲ್ಲಿ ಆಡಿಸಿದರೆ ಹೇಗೆ ಎಂದು ಸಮರಸೇನೆ ಹುಡುಗರು ನಾಗತಿಹಳ್ಳಿಗೆ ಬಂದು ಸುಮಾರು ಒಂದು ಗಂಟೆ ಚೌಕಾಸಿ ಮಾಡಿದ ನಂತರ ಎಂಟು ಸಾವಿರ ರೂ.ಗಳಿಗೆ ಒಪ್ಪಿಕೊಂಡು ಹೋದರು. ಆದರೆ ನಾಟಕದ ದಿನ ಚನ್ನರಾಯಪಟ್ಟಣಕ್ಕೆ ಬಂದು ನೋಡಿದರೆ ಇಡೀ ಸ್ಟೇಜಿನ ತುಂಬ ಸಮರ ಸೇನೆಯ ಅಧ್ಯಕ್ಷ ಯು.ಎ. ಸುನಿಲ್ ಗೌಡ ಎಂಬುವವನ ಹಲವಾರು ಭಂಗಿಯ ಚಿತ್ರಗಳು ಮತ್ತು ಕಟೌಟನಂತಹ ಫ್ಲೆಕ್ಸ್‌ಗಳಿಂದ ಇಡೀ ಸ್ಟೇಜು ತುಂಬಿಹೋಗಿತ್ತು.

ಹೆಣ್ಣುಮಕ್ಕಳೇ ಆಡಬಹುದಾದ ನಾಟಕಕ್ಕೆ ಯಾವ ಮರೆಯೂ ಇಲ್ಲ. ನಾಟಕ ಎಂದರೆ ಮುದುಕನ ಮದುವೆಯಂತಹ ನಾಟಕವೆಂದು ಸೇನೆಯ ಹುಡುಗರು ಭಾವಿಸಿದರೊ ಏನೊ. ನಾಟಕ ತಂಡವನ್ನು ಕ್ಯಾರೆ ಅನ್ನುವವರು ಅಲ್ಲಾರೂ ಇರಲಿಲ್ಲ. ಬದಲಿಗೆ ತೆಲುಗು ಸಿನಿಮಾ ವಿಲನ್‌ಗಳಂತೆ ಕಾಣಿಸುತ್ತಿದ್ದ ಎರಡು ಡಜನ್ ಜನಗಳು ಸ್ಟೇಜಿನ ಮೇಲೆ ಹಳದಿ ಕೆಂಪು ಪಟ್ಟಿ ತೊಟ್ಟು ಕುಳಿತುಬಿಟ್ಟಿದ್ದರು. ಯಾರೋ ಒಂದೆರಡು ಸ್ವಾಮಿಗಳು ಕುವೆಂಪುರವರನ್ನು ಅಸಂಬದ್ಧವಾಗಿ ಹಿಡಿದು ಜಗ್ಗುತ್ತಿದ್ದರು. ಸ್ಕೂಲ್ ಮೈದಾನದಲ್ಲಿ ನಡೆಯುತ್ತಿದ್ದ ಈ ಕಾರ್ಯಕ್ರಮಕ್ಕೆ ಚನ್ನರಾಯಪಟ್ಟಣದ ಜನ ಎಷ್ಟು ನಿರ್ಲಕ್ಷ್ಯ ತೋರಿದ್ದರೆಂದರೆ ಅವರಷ್ಟಕ್ಕೆ ಅವರಿದ್ದರು. ಇದರ ಬಗ್ಗೆ ವಿಚಾರಿಸಿದಾಗ ಸಮರ ಸೇನೆಯ ಜನ ಯಾವ ಮಟ್ಟದವರಾಗಿದ್ದರೆಂದರೆ ಅವರ ಸಂಬಂಧಿಗಳು ಮಾತ್ರ ಬಂದಿದ್ದರು ಎಂಬುದು ಗೊತ್ತಾಯಿತು.


ಈ ಸಮರ ಸೇನೆ ಹುಡುಗರಿಗೆ ತುಂಬ ಉತ್ಸಾಹವಿದೆ. ಆದರೆ ತಲೆಯಲ್ಲಿ ಮೂರುಕಾಸಿನ ಬುದ್ಧಿ ಇರುವಂತೆ ಕಾಣಿಸುತ್ತಿಲ್ಲ. ಜನರಿಂದ ಸಂಗ್ರಹಿಸಿದ ಹಣದಿಂದ ಊರು ತುಂಬ ತಮ್ಮ ಚಿತ್ರಗಳ ಫ್ಲೆಕ್ಸ್ ಹಾಕುವುದರಿಂದ ಕನ್ನಡ ಬೆಳೆಯುತ್ತದೆಯೇ? ಹೋಗಲಿ, ಇಂತಹ ಕಾರ್ಯಕ್ರಮದಿಂದ ಏನಾದರೂ ಭಾಷೆ ಬೆಳೆಯುತ್ತದೆಯೇ? ಕಾರ್ಯಕ್ರಮ ಮಾಡಬೇಕಾದರೆ ವೇದಿಕೆಗೆ ಅದರದ್ದೇ ಆದ ಒಂದು ಘನತೆ ಇರುತ್ತದೆ. ಕಾರ್ಯಕ್ರಮಕ್ಕೂ, ಭಾಷೆ ಬೆಳವಣಿಗೆಗೂ ಒಂದು ಸಂಬಂಧವಿರುತ್ತದೆ. ಇದಾವ ಪ್ರಾಥಮಿಕ ತಿಳಿವಳಿಕೆಯೂ ಇಲ್ಲದೆ ಸಮರಸೇನೆ ಎಂಬ ಸಂಘಟನೆ ಕಟ್ಟಿಕೊಂಡು ಮೆರೆಯುತ್ತಿರುವ ಈ ಹುಡುಗರನ್ನು ನಿಜವಾದ ಕನ್ನಡಿಗರು ಸರಿದಾರಿಗೆ ತರಬೇಕಿದೆ. ಇಲ್ಲವಾದರೆ ಇವರೆಲ್ಲ ಕನ್ನಡಿಗರ ವಿರುದ್ಧವೇ ಸಮರ ಸಾರುವ ದಿನ ದೂರವಿಲ್ಲ. ಪೊಲೀಸರಿಗೆ ಬೇಕಾದವರನ್ನೆಲ್ಲಾ ಹಿಡಿದು ಸನ್ಮಾನ ಮಾಡುವ ಈ ಸಮರ ಸೇನೆ ಹುಡುಗರು ಮೊದಲು ಮಾಡಬೇಕಾದ ಕೆಲಸವೆಂದರೆ ಕನ್ನಡದ ಒಂದಿಷ್ಟು ಪುಸ್ತಕಗಳನ್ನು ಕೊಂಡು ಓದಬೇಕಿದೆ. ಕನ್ನಡದ ಬಗ್ಗೆ ಮೊದಲು ಅರ್ಥ ಮಾಡಿಕೊಂಡು ನಿಜವಾದ ಭಾಷಾಭಿಮಾನ ಬೆಳೆಸಿಕೊಳ್ಳಬೇಕಿದೆ.

■ ವರದಿಗಾರ


ನಾಮಪತ್ರ ಅರ್ಜಿಯನ್ನು ಹರಿದುಹಾಕಿದ ತೇಜಸ್ವಿ

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು



ಅಕ್ಷರ ರೂಪ: **ಅಕ್ಷತಾ ಕೆ.**



'ತಾಲ್ಲೂಕಿನಲ್ಲಿ ಕುವೆಂಪು ಅವರಿಗೆ ದೊಡ್ಡ ಹೆಸರಿದೆ. ನಿಮ್ಮ ಬಗ್ಗೆನೂ ಜನಕ್ಕೆ ಬಹಳ ಒಳ್ಳೆ ಅಭಿಪ್ರಾಯ ಇದೆ. ಮತ್ತೆ ತೀರ್ಥಹಳ್ಳಿಯಲ್ಲಿ ನಿಮ್ಮ ಬಂಧುಗಳು ಜಾಸ್ತಿ ಇದ್ದಾರೆ. ನೀವು ನಿಂತರೆ ಗೆದ್ದೆ ಗೆಲ್ತೀರಿ. ಚುನಾವಣೆಗೆ ನಿಲ್ಲಿ' ಎಂದು ಒತ್ತಾಯಿಸಿದರು. ಆದರೆ ಏನು ಹೇಳಿದರೂ ತೇಜಸ್ವಿ ಒಪ್ಪಲೇ ಇಲ್ಲ. 'ಇದಕ್ಕೊಂದು ಸಹಿ ಮಾಡಿ ಸಾಕು. ನೀವು ಬರೋದು ಬೇಡ. ನಾವೇ ಎಲ್ಲ ನೋಡಿಕೊಳ್ತೀವಿ' ಎಂದು ನಾಮಪತ್ರದ ಅರ್ಜಿಯನ್ನು ಕೊಟ್ಟರೆ ಅದನ್ನು ಪರ ಪರ ಹರಿದು ಹಾಕುವ ಮೂಲಕ ಚುನಾವಣೆಯಲ್ಲಿ ಸ್ಪರ್ಧಿಸುವ ಎಲ್ಲ ಸಾಧ್ಯತೆಗಳನ್ನು ನಿರಾಕರಿಸಿಬಿಟ್ಟರು.

ಕೋಣಂದೂರು ಲಿಂಗಪ್ಪ ಬೆಂಗಳೂರಿನ ಹೈಸ್ಕೂಲ್ ಒಂದರಲ್ಲಿ ಮೇಷ್ಟ್ರಾಗಿದ್ರು. ಅವರಿಗೆ ವೈಎಂಸಿಎನಲ್ಲಿ ಒಂದು ಫ್ರೀ ರೂಮ್ ಸಿಕ್ಕಿತ್ತು ಉಳ್ಕೊಳ್ಳೆ. ಸಮಾಜವಾದಿ ಸಭೆ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಹೋದಾಗ ನಮಗೂ ಅವರ ರೂಮಿನಲ್ಲೇ ಆಶ್ರಯ. ಶಾಂತವೇರಿ ಗೋಪಾಲ ಗೌಡ್ರು ತೀರ್ಥಹಳ್ಳಿಯ ಶಾಸಕರಾಗಿದ್ದರು, ಶಾಸನಸಭೆಯಲ್ಲಿ ಭೂಮಿಯ ಸಮಸ್ಯೆ, ಭಾಷೆಯ ಸಮಸ್ಯೆ, ನೀರಿನ ಸಮಸ್ಯೆ ಮುಂತಾದ ವಿಚಾರದಲ್ಲಿ ಗೋಪಾಲಗೌಡ್ರು ಮಾಡಿದ ಭಾಷಣ, ಚರ್ಚೆ, ವಿಚಾರಗಳನ್ನು ಕಲಾಪದ ವರದಿಯಿಂದ ಹೆಕ್ಕಿ ಆರಿಸಿ 'ಶಾಸನ ಸಭೆಯಲ್ಲಿ ಶಾಂತವೇರಿ' ಎಂಬ ಕೃತಿಯನ್ನು ಕೋಣಂದೂರು ಲಿಂಗಪ್ಪ ಸಂಪಾದಿಸಿದ್ದರು. ಸಮಾಜವಾದಿ ಯುವಜನ ಸಭಾದ ಹೆಸರಿನಲ್ಲಿ ಈ ಪುಸ್ತಕವನ್ನು ಮುದ್ರಿಸಲಾಗಿದ್ದು, ತೀರ್ಥಹಳ್ಳಿಯಲ್ಲಿ ಸ್ಥಳೀಯ ಯುವಜನ ಸಭಾ ಶಾಖೆ ವತಿಯಿಂದ ಈ ಪುಸ್ತಕದ ಬಿಡುಗಡೆ ಸಮಾರಂಭ ಹಾಗೂ ರಾಜ್ಯ ಮಟ್ಟದ ಸಮಾಜವಾದಿಗಳ ಅಧ್ಯಯನ ಶಿಬಿರವನ್ನು ಏರ್ಪಡಿಸಿದ್ದೆವು. ಕಾರ್ಯಕ್ರಮಕ್ಕೆ ಗೋಪಾಲ ಗೌಡ್ರು ಬರ್ತಾರೆ ಅಂದ್ರೆ ತೀರ್ಥಹಳ್ಳಿಯಲ್ಲಂತೂ ಪಕ್ಷಭೇದ ಮರೆತು ಜನ ಸೇರ್ತಿದ್ರು. ಆದರೆ ಈ ದಿನಗಳಲ್ಲಿ ಗೋಪಾಲಗೌಡರ ಆರೋಗ್ಯ ಹದಗೆಟ್ಟು ಅವರು ಮುಂಚಿನಂತೆ ಸಭೆ ಸಮಾರಂಭಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿರಲಿಲ್ಲ. ಅವರ ಅನುಪಸ್ಥಿತಿ ಸಮಾಜವಾದಿಗಳನ್ನು ಬಹಳ ಕಾಡುತ್ತಿತ್ತು.

ಎರಡು ದಿನದ ಕಾರ್ಯಕ್ರಮದಲ್ಲಿ ಮೊದಲ ದಿನ ಯುವಜನ ಸಭಾದ ಅಧಿವೇಶನವನ್ನು ಹಾಗೂ ಎರಡನೆಯ ದಿನ ಹಿರಿಯ ಮತ್ತು ಯುವ ಸಮಾಜವಾದಿಗಳ ಸಮಾವೇಶ ಮತ್ತು ಪುಸ್ತಕ ಬಿಡುಗಡೆ ಇಟ್ಕೊಂಡಿದ್ವಿ. ನಂಜುಂಡಸ್ವಾಮಿ ಆಗ ಯುವಜನ ಸಭಾದ ಕನ್ವೀನರ್. ಮೊದಲ ದಿನದ ಅಧಿವೇಶನದಲ್ಲಿ ಅವರು 'ಯಾವುದೇ ಸಂಘಟನೆ ವ್ಯಕ್ತಿಗಳ ಮೇಲೆ ಅವಲಂಬಿತವಾಗಿರುವುದಿಲ್ಲ, ಸಿದ್ಧಾಂತದ ಮೇಲೆ ನಿಂತಿರುತ್ತದೆ. ಆದ್ದರಿಂದ ಸಂಘಟನೆಯ ಹಿರಿಯರು ತಮ್ಮನ್ನು ಕಡೆಗಣಿಸುತ್ತಿದ್ದಾರೆಂದು ಅಥವಾ ಮಾರ್ಗದರ್ಶಕ ನಾಯಕರಿಲ್ಲ ಎಂದು ಯುವಕರು ದೋಷಾರೋಪ ಮಾಡುತ್ತಾ ಕೂರುವ ಬದಲು ಸಂಘಟನೆಯ ಸಿದ್ಧಾಂತವೇ ಮುಖ್ಯ ಎಂದು ತಿಳಿದು ಆ ಪ್ರಕಾರ ಸಂಘಟನೆಯ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಕರೆ ನೀಡಿದರು. ನಂಜುಂಡಸ್ವಾಮಿಯವರು ಇಲ್ಲಿ ಯಾರ ಹೆಸರನ್ನು ತರದೆ ಸೂಕ್ಷ್ಮವಾಗಿ ಹೇಳಿಕೆ ನೀಡಿದ್ದರು. ಅಧ್ಯಕ್ಷತೆ ವಹಿಸಿದ್ದ ಸದಾಶಿವರಾಯರು ಇದನ್ನು ಒಪ್ಪಿ ನಾಯಕತ್ವದ ಸಮಸ್ಯೆ ಬಗೆಹರಿಯುವವರೆಗೆ ಈ ಮಾರ್ಗವನ್ನೇ ಅನುಸರಿಸಬಹುದು ಎಂದು ಸೂಚಿಸಿದರು.

ಅವತ್ತಿನ ಸಭೆ ಮುಗಿಯುತ್ತಲೇ ನಾನು, ತೇಜಸ್ವಿ ಕಡಿದಾಳಿಗೆ ಹೊರಟೆವು. ದಾರಿಯಲ್ಲೇ ನಮಗೆ ಪ್ರವಾಸಿಮಂದಿರ ಸಿಗುತ್ತದೆ. ಅಲ್ಲಿಗೆ ಅಷ್ಟೊತ್ತಿಗೆ ಗೋಪಾಲಗೌಡ್ರು ಮತ್ತು ಜೆ. ಹೆಚ್. ಪಟೇಲ್ ಬಂದು ತಲುಪಿದ್ದಾರೆ ಎಂಬ ಸುದ್ದಿ ತಿಳಿದು ಅವರನ್ನು ಮಾತಾಡಿಸಿಕೊಂಡು ಹೋಗೋಣ ಅಂತ ಪ್ರವಾಸಿ ಮಂದಿರಕ್ಕೆ ಹೋದ್ವಿ. ಅಲ್ಲಿ ನೋಡಿದ್ರೆ, ಗೋಪಾಲ ಗೌಡ್ರು ಕೆಂಡಾಮಂಡಲ ಕೋಪದಿಂದ 'ನಾವ್ಯಾರೂ ನಾಯಕರಲ್ಲ ಅಂದ್ಮೇಲೆ ನಮ್ಮನ್ನ ಇಲ್ಲಿಗೆ ಯಾಕೆ ಕರೆಸಿದ್ರಿ. ನಾನು ನಾಳೆ ಕಾರ್ಯಕ್ರಮಕ್ಕೆ ಬರದಿಲ್ಲ, ನಾನು ನಾಳೆ ಇಲ್ಲಿ ಇರೋದೂ ಇಲ್ಲ, ಈಗಲೇ ಹೊರಟೆ' ಎಂದು ಕಿರುಚಾಡುತ್ತಿದ್ದರು. ಮೂಡುವಳ್ಳಿ ಮಹಾಬಲಹೆಗ್ಡೆ ಎಂಬ ಪಕ್ಷದ ಕಾರ್ಯಕರ್ತರು ಬೆಳಿಗ್ಗೆ ಸಭೆಯಲ್ಲಿ ಪಾಲ್ಗೊಂಡಿದ್ದರು. ಗೋಪಾಲಗೌಡ್ರು ಸಂಜೆ ಬಂದಾಗ ನಂಜುಂಡಸ್ವಾಮಿ ಬೆಳಗಿನ ಸಭೆಯಲ್ಲಿ 'ಯಾರೂ ನಾಯಕರಲ್ಲ, ನಮಗೆ ಸಿದ್ಧಾಂತವೇ ನಾಯಕ' ಎಂದುದನ್ನು ಗೌಡ್ರ ಕಿವಿಗೆ ಹಾಕಿದ್ದರು. ಮೊದಲೇ ಅನಾರೋಗ್ಯದಿಂದ ನರಳುತಿದ್ದ ಗೌಡ್ರಿಗೆ ಈ ಮಾತು ಏನೇನು ಅರ್ಥಗಳನ್ನು ಸೂಚಿಸಿತೋ ಅವರಿಗೆ ತಡೆಯಲಾರದಷ್ಟು ಕೋಪವನ್ನಂತೂ ತರಿಸಿತ್ತು. ನಮಗೆ ಗೌಡರ ಸ್ಥಿತಿ ಆತಂಕ ತಂದಿತ್ತು, ಅವರ ಅನಾರೋಗ್ಯದ ಈ ಪರಿಸ್ಥಿತಿಯಲ್ಲಿ ಹೇಗೋ ತೇಜಸ್ವಿ, ಲಿಂಗಪ್ಪ ಎಲ್ಲ ಸೇರಿ ಅವರನ್ನು ಪುಸ್ತಕ ಬಿಡುಗಡೆಗೆ ಒಪ್ಪಿಸಿ ಕರೆತಂದಿದ್ವಿ. ಈಗ ನೋಡಿದರೆ ಇಲ್ಲದ ವಾದವಿವಾದಕ್ಕೆ ಎಡೆಕೊಟ್ಟು ಅವರ ಆರೋಗ್ಯ ಸಂಪೂರ್ಣ ಹದಗೆಡಿಸುತ್ತೀವಲ್ಲ ಎಂದು ಚಿಂತೆಯಾಯಿತು. ಅವರಿಗೆ ವಿಷಯವನ್ನು ವಿವರಿಸಿ ಹೇಳಿದ್ರು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲೇ ಇರಲಿಲ್ಲ, ತೇಜಸ್ವಿ ಇದ್ದವರು 'ಇದೊಳ್ಳೆ ಕಥೆಯಾಯ್ತಲ್ಲ ಮಾರಾಯ್ರು. ಮೊದಲು ನರಸಿಂಹನ ಕಾರು ಕಳಿಸಿ ಸದಾಶಿವರಾಯರನ್ನು ಕರೆಸಿ. ಅವರ ಬಾಯಿಂದಲೇ ಬೆಳಗಿನ ಸಭೆಯಲ್ಲಿ ಏನು ನಡೀತು ಅಂತ ಹೇಳಿಸದಿದ್ದರೆ ನಾವಿಷ್ಟೆಲ್ಲ ಮಾಡಿದ್ದು ನೀರಿನಲ್ಲಿ ಹೋಮ ಆಗುತ್ತೆ' ಎಂದರು.

ಆ ರಾತ್ರಿಯಲ್ಲಿ ನಾವಿಬ್ರು ನರಸಿಂಹನ ಕಾರಿನಲ್ಲಿ ಸದಾಶಿವರಾಯರ ಮನೆಗೆ ಹೋಗಿ ಅವರನ್ನು ಕರೆತಂದೆವು. ಅವರಿಂದ ನಡೆದುದೇನು ಎಂದು ತಿಳಿದ ಮೇಲೆ ಗೌಡ್ರು ಶಾಂತಚಿತ್ತರಾದರು.



ಸಭೆಯೊಂದರಲ್ಲಿ ಪ್ರೊ. ನಂಜುಂಡಸ್ವಾಮಿ ಮತ್ತು ಕೋಣಂದೂರು ಲಿಂಗಪ್ಪ

ಮರುದಿನದ ಅಧಿವೇಶನದಲ್ಲಿ ಪಟೇಲರನ್ನುದ್ದೇಶಿಸಿ 'ಪಕ್ಷದಲ್ಲಿರುವ ಕೆಲವು ಮುಖಂಡರಿಗೆ ಬುದ್ದಿ ಬರಬೇಕೆಂದರೆ ಸೊಂಟ ಮುರಿಯಬೇಕು' ಎಂದು ನಂಜುಂಡಸ್ವಾಮಿ ಖಾರವಾಗಿ ನುಡಿದಾಗ ಪಟೇಲರು 'ಹೌದು ನೀವು ತಪ್ಪು ಮಾಡಿದಾಗಲೂ ಸೊಂಟ ಮುರಿಯೋ ಶಿಕ್ಷೆನೇ ಕೊಡಬೇಕು. ಆದರೆ ಸಮಸ್ಯೆ ಏನಂದ್ರೆ ಮುರಿಯೋಕೆ ನಿಮಗೆ ಸೊಂಟಾನೇ ಇಲ್ವಲ್ಲ ಏನು ಮಾಡೋದು?' ಎಂದರು. ಹೀಗೆ ಅವರಿಬ್ಬರ ಮಧ್ಯೆ ಬಿರುಸಿನ ವಾಗ್ವಾದ ನಡೀತಿದ್ದಾಗ ಗೋಪಾಲಗೌಡ್ರೇ ಮಧ್ಯಪ್ರವೇಶಿಸಿ 'ನಮ್ಮ ನಮ್ಮ ವಕ್ರ ಬುದ್ಧಿಯನ್ನು ನಾವು ಮಾತಿನಿಂದಲೇ ಸರಿ ಮಾಡ್ಕೋಬಹುದು. ಅದಕ್ಕೆ ಸೊಂಟ ಮುರಿಯೋ ಅಗತ್ಯ ಇಲ್ಲ' ಎಂದು ಸಮಾಧಾನ ಹೇಳಿ ಜಗಳ ನಿಲ್ಲಿಸಬೇಕಾಯಿತು.

ಮೂಡುವಳ್ಳಿ ನನ್ನ ದೊಡ್ಡಮ್ಮನ ಊರಾದ್ದರಿಂದ ಬಾಲ್ಯದಿಂದಲೂ ನನಗೆ ಮಹಾಬಲ ಹೆಗ್ಡೆಯವರು ಗೊತ್ತು, ಗೋಪಾಲಗೌಡ್ರ ಬಗ್ಗೆ ಅವರ ಇಡೀ ಕುಟುಂಬಕ್ಕೆ ಅಭಿಮಾನ. ಮೇಗರವಳ್ಳಿ ಸುತ್ತ ಮುತ್ತ ಎಲ್ಲೇ ಸಮಾಜವಾದಿ ಸಭೆ ಸಮಾರಂಭ ನಡೆದರೂ ಇವರ ಮನೆಯಲ್ಲೆ ಗೌಡ್ರನ್ನೂ ಸೇರಿದಂತೆ ಎಲ್ಲ ಸಮಾಜವಾದಿಗಳಿಗೂ ಊಟ, ಆಶ್ರಯ ಎಲ್ಲ, ವಕೀಲ ಶಂಕರನಾರಾಯಣ ಭಟ್ರಂತೂ 'ಮಹಾಬಲ, ನಾಳೆ ಪಟೇಲ್ರು ಎಲ್ಲ ಬರ್‍ತಿದ್ದಾರೆ. ಅಡಿಗೆಗೆ ಹತ್ತು ಕುಚ್ಚಕ್ಕೀಳು, ಹತ್ತು ಹೆಚ್ಚಕ್ಕೀಳು' ಅನ್ನೋರು. ಅಂದ್ರೆ ಹತ್ತು ಮೊಟ್ಟೆ ಬೇಯಿಸು ಮತ್ತು ಹತ್ತು ಮೊಟ್ಟೆ ಒಡೆದು ಹಾಕಿ ಸಾರು ಮಾಡಿಸು ಅಂತ.

ಈ ಮಹಾಬಲ ಹೆಗ್ಡೆ ರಾತ್ರಿ ಮಲಗುವ ಮೊದಲು ಬೆಡ್‌ಶೀಟ್ ಕೊಡವೋ ಶಬ್ದಕ್ಕೆ ಅವರ ಮನೆಯ ಇಡೀ ಉಪ್ಪರಿಗೆ ಅಲುಗಾಡೋದು. ಸಾಮಾನ್ಯದ ಬೆಡ್ ಶೀಟ್‌ಗಳೆಲ್ಲ ಕೊಡವೋ ಹೊಡ್ತಕ್ಕೆ ಚೂರು ಚೂರಾಗೋದು. ಇವರಣ್ಣ ಡಾ.ಶ್ರೀಕಂಠ ಹೆಗ್ಗಡೆ ಅವರೂ ಗೋಪಾಲಗೌಡ್ರ ಜೊತೆಗಿದ್ದವರು. ಈಗ ಹರಿಹರದಲ್ಲಿ ಕ್ಲಿನಿಕ್ ಇಟ್ಕೊಂಡು ಬಹಳ ಒಳ್ಳೆಯ ಡಾಕ್ಟರ್ ಅಂತ ಹೆಸರು ಮಾಡಿದ್ದಾರೆ. ನನಗೆ ಗೊತ್ತಿರೋ ಹಾಗೆ ಇವರು ಇವತ್ತಿಗೂ ರೋಗಿಗಳ ಹತ್ತಿರ ತೆಗೆದುಕೊಳ್ಳುವ ಫೀಸ್ ಕೇವಲ 5 ರೂಪಾಯಿ.

****

1972ನೇ ಇಸ್ವಿ, ಕರ್ನಾಟಕ ವಿಧಾನಸಭೆಗೆ ಚುನಾವಣೆ ಘೋಷಿತವಾಗಿತ್ತು. ಗೋಪಾಲಗೌಡ್ರ ಕಾಯಿಲೆ ಉಲ್ಬಣಗೊಳ್ಳುತ್ತಲೇ ಹೋಗಿ ಚುನಾವಣೆಗೆ ನಾಮಪತ್ರ ಸಲ್ಲಿಸುವ ಸಮಯದಲ್ಲಿ ಸಂಪೂರ್ಣ ಹಾಸಿಗೆ ಹಿಡಿದರು. ಇಂಥ ಸ್ಥಿತಿಯಲ್ಲಿ ತೀರ್ಥಹಳ್ಳಿ ಕ್ಷೇತ್ರದಿಂದ ಯಾರು ಅಭ್ಯರ್ಥಿ ಎಂಬ ಪ್ರಶ್ನೆ ಎದ್ದಿತು. ಗೋಪಾಲಗೌಡ್ರು ತಮ್ಮ ಆರೋಗ್ಯ ಕೈಕೊಡಲಾರಂಭಿಸಿದ ಸಂದರ್ಭದಲ್ಲೆ ಮುಂದಿನ ಚುನಾವಣೆಯಲ್ಲಿ ತಮ್ಮ ಬದಲಿಗೆ ಪೂರ್ಣಚಂದ್ರ ತೇಜಸ್ವಿ ತೀರ್ಥಹಳ್ಳಿಯಿಂದ ಸ್ಪರ್ಧಿಸಲಿ ಎಂಬ ಆಶಯ ವ್ಯಕ್ತಪಡಿಸಿದ್ದರು. ತೇಜಸ್ವಿಯೇ ತಮ್ಮ ಉತ್ತರಾಧಿಕಾರಿ ಆಗಲು ಅರ್ಹರಾದವರು ಎಂಬ ಬಗ್ಗೆ ಗೌಡರಿಗೆ ಸಂಪೂರ್ಣ ವಿಶ್ವಾಸವಿತ್ತು, ಆದರೆ ಈ ಬಗ್ಗೆ ಯಾವೊಂದು ಖಚಿತ ನಿರ್ಧಾರಕ್ಕೆ ಬರುವ ಮೊದಲೇ ಗೌಡರು ಹಾಸಿಗೆ ಹಿಡಿದರು. ಮಾತಾಡದಷ್ಟು ದುರ್ಬಲರಾದರು. ಇತ್ತ ತೇಜಸ್ವಿ ಚುನಾವಣೆಯಲ್ಲಿ ಸ್ಪರ್ಧಿಸಲು ಒಪ್ಪಲಿಲ್ಲ. ನನ್ನನ್ನು ಕೇಳಿದರು. ನಾನೂ ಒಪ್ಪಲಿಲ್ಲ. ಹುಗಲವಳ್ಳಿ ಸುರೇಂದ್ರರನ್ನು ಕೇಳಿದರೆ ಅವರು ಕೂಡಾ ನಿರಾಕರಿಸಿದರು. ಚುನಾವಣೆ ಘೋಷಿತವಾಯ್ತು, ನಾಮಪತ್ರ ಸಲ್ಲಿಸುವ ದಿನವೂ ಹತ್ತಿರ ಬಂತು. ಆದರೂ ತೀರ್ಥಹಳ್ಳಿ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಅಭ್ಯರ್ಥಿ ಯಾರು ಎಂಬ ಪ್ರಶ್ನೆಗೆ ಉತ್ತರ ಸಿಗಲಿಲ್ಲ.

ಈ ಸಂದರ್ಭದಲ್ಲಿ ಗೌಡರೇ ಕ್ಷೇತ್ರದ ಶಾಸಕರಾಗಿದ್ದರು. ಕ್ಷೇತ್ರ ಸಮಾಜವಾದಿ ಪಕ್ಷದ ಕೈಯಲ್ಲಿಯೇ ಇತ್ತು. ಆದರೆ ಗೌಡರು ಹಾಸಿಗೆ ಹಿಡಿದಿದ್ದರಿಂದ ಪಕ್ಷದ ಮುಂದಾಳುಗಳು, ಕಾರ್ಯಕರ್ತರು ಸಂಪೂರ್ಣ ಕಂಗೆಟ್ಟರು. ಗೌಡರ ರೀತಿಯಲ್ಲಿ ಅಧಿಕಾರಯುತವಾಗಿ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಬೇರೆಯವರಿಗೆ ಇರಲಿಲ್ಲ. ಇದರಿಂದ ತೀರ್ಥಹಳ್ಳಿಯಲ್ಲಿ ಅಧಿಕಾರದಲ್ಲಿರುವ ಸಮಾಜವಾದಿ ಪಕ್ಷಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಒಬ್ಬ ಅಭ್ಯರ್ಥಿಗೆ ಗತಿಯಿಲ್ಲ ಎಂಬ ವಾತಾವರಣ ನಿರ್ಮಾಣವಾಯ್ತು. ಈ ಹೊತ್ತಿನಲ್ಲಿ ಸಮಾಜವಾದಿ ಪಕ್ಷದಲ್ಲಿ ಹೋರಾಟದಲ್ಲಿ ಸಂಪೂರ್ಣ ತೊಡಗಿಸಿಕೊಂಡಿದ್ದ ಕೋಣಂದೂರು ಲಿಂಗಪ್ಪಂಗೆ ಮಾತ್ರ ಗೌಡ್ರ ಜಾಗದಲ್ಲಿ ತಾವು ಸ್ಪರ್ಧೆ ಮಾಡಬೇಕು ಅನ್ನೋ ಆಸೆ ಇತ್ತು. ಆದರೆ ಸೋಷಿಯಲಿಸ್ಟ್ ಪಾರ್ಟಿ ಸಂಚಾಲಕರಾಗಿದ್ದ ಪರಮೇಶ್ವರಪ್ಪ (ಅಣ್ಣಯ್ಯ) ಸೇರಿದಂತೆ ಪಕ್ಷದ ಹಲವು ಹಿರಿಯರ ಅಭಿಪ್ರಾಯ ಏನೆಂದರೆ ಕೋಣಂದೂರು ಲಿಂಗಪ್ಪ ಮೂಲತಃ ಒಬ್ಬ ರೈತ ಅಲ್ಲದೇ ಇರೋದ್ರಿಂದ ರೈತರ ಸಮಸ್ಯೆ ಬಗ್ಗೆ ಗೊತ್ತಿಲ್ಲ. ತೀರ್ಥಹಳ್ಳಿಯಂತ ಕೃಷಿಯನ್ನೇ ಪ್ರಧಾನವಾಗಿ ಹೊಂದಿದ್ದ ತಾಲ್ಲೂಕಿನ ಜನಪ್ರತಿನಿಧಿ ಒಬ್ಬ ಬೇಸಾಯಗಾರನೇ ಆಗಬೇಕು ಎಂಬುದು. ಜೊತೆಗೆ ಕಾಂಗ್ರೆಸ್ ಪಕ್ಷದವರಂಗೆ ನಮ್ಮತ್ರ ಪಾರ್ಟಿ ಫಂಡ್ ಇರಲಿಲ್ಲ, ಗೋಪಾಲಗೌಡ್ರು ಹಿಂದಿನ ಚುನಾವಣೆ ಸಂದರ್ಭದಲ್ಲಿ ಮಾಡಿದ್ದ ಸಾಲವನ್ನೇ ಪೂರ್ತಿ ತೀರಿಸಲಾಗಿರಲಿಲ್ಲ. ಹಾಗೆ ಬಾಕಿ ಉಳಿದುಕೊಂಡಿತ್ತು.

ಲಿಂಗಪ್ಪನವರ ಬಳಿ ಸ್ವಂತ ಆಸ್ತಿ, ಹಣ ಏನಂದ್ರೆ ಏನೂ ಇರಲಿಲ್ಲ. ಜೊತೆಗೆ ಜಾತಿ ಪ್ರಶ್ನೆಯು ಇತ್ತು. ನಾವೆಷ್ಟೆ ಜಾತ್ಯತೀತರು ಎಂದುಕೊಂಡರೂ ನನಗೆ, ತೇಜಸ್ವಿಗೆ ಎಲ್ಲ ಜಾತಿ ಬೆಂಬಲ ಇತ್ತು. (ಗೋಪಾಲಗೌಡ್ರಿಗೆ ಹೆಚ್ಚಿನ ಒಕ್ಕಲಿಗರು ಓಟು ಹಾಕ್ತಿರಲಿಲ್ಲ, ಆ ಪ್ರಶ್ನೆ ಬೇರೆ). ಅಮೂರ್ತವಾಗಿ ಆದರೂ ಅದು ಕೆಲಸ ಮಾಡುತಿತ್ತು, ಆದರೆ ಕೋಣಂದೂರು ಲಿಂಗಪ್ಪ ಹೆಂಡದ ಭೋವಿ ಜಾತಿಗೆ ಸೇರಿದವರು. ಅವರ ಸಂಖ್ಯೆ ಇಡೀ ತಾಲ್ಲೂಕಿನಲ್ಲಿ ಲೆಕ್ಕ ಹಾಕಿದರೂ ಐನೂರನ್ನು ದಾಟುವುದೂ ಕಷ್ಟವಿತ್ತು, ದೀವರಲ್ಲಿ ಉಪಜಾತಿ ಇದು. ಆದರೆ ಹೆಂಡದ ಭೋವಿಯವರನ್ನು ದೀವರೇ ಕೀಳಾಗಿ ಕಾಣೋರು. ಈ ಎಲ್ಲ ಅಂಶಗಳು ಚುನಾವಣೆಯಲ್ಲಿ ಹೇಳದೆ ಕೆಲಸ ಮಾಡ್ತಾ ಇರ್ತಾವೆ. ಅದಕ್ಕೆ ಪಕ್ಷದ ಹಿರಿಯರ ಒಕ್ಕೊರಲ ಧ್ವನಿ ಏನಂದರೆ 'ಹೇಗಾದ್ರೂ ಮಾಡಿ ತೇಜಸ್ವಿಯವರನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ಒಪ್ಪಿಸಬೇಕು. ಕೊನೆಗೂ ಅವರನ್ನ ಒಪ್ಪಿಸಕ್ಕಾಗ್ಲೆ ಇಲ್ಲ ಅಂದ್ರೆ ಶಾಮಣ್ಣ ನೀನು ನಮ್ಮ ಪಕ್ಷದಿಂದ ಚುನಾವಣೆಗೆ ನಿಲ್ಲಬೇಕು. ಇದರಲ್ಲಿ ಬೇರೆ ಮಾತೇ ಇಲ್ಲ' ಅನ್ನೋದು.

ಗುಂಡೂಮನೆ ರಾಮಕೃಷ್ಣಯ್ಯ ಅಂತ ಮಂದಿ ಓನರ್ ಇದ್ದರು. ಗೋಪಾಲಗೌಡ್ರ ನಿಕಟವರ್ತಿಗಳು. ಅವರಿದ್ದೋರು ತೇಜಸ್ವಿಯನ್ನ ಒಪ್ಪಿಸಿ ಬಿ ಫಾರಂಗೆ ಸಹಿ ಮಾಡಿಸ್ಕೊಂಡೆ

▶▶▶

…ಬೇಕು ಎಂದು ನನ್ನ ಸುರೇಂದ್ರ ಮತ್ತು ಲಿಂಗಪ್ಪನವರನ್ನು …ು ಮಾಡಿ ತೇಜಸ್ವಿ ಮನೆಗೆ ಕಳಿಸಿಕೊಟ್ಟರು. ನಾವು …ವರೂ ಅಭ್ಯರ್ಥಿಗಳ ಪಟ್ಟಿಯಲ್ಲಿದ್ದವರಲ್ಲಾ, ನಾವೇ …ನ್ಯಾರು ಸ್ಪರ್ಧಿಸಲ್ಲ, ನೀವೆ ಚುನಾವಣೆಗೆ ನಿಲ್ಲಬೇಕು' …ಮ ತೇಜಸ್ವಿಗೆ ಖಡಾಖಂಡಿತವಾಗಿ ಹೇಳಿ ಬಿಟ್ಟರೆ …ರು ಒಪ್ಪಬಹುದು ಅನ್ನೋದು ನಮ್ಮ ಉದ್ದೇಶ …ತ್ತು.

… ತೇಜಸ್ವಿ ಮನೆ ಎದುರಿಗೆ ಕಾರಿನಿಂದ ಇಳಿತಿದ್ದಂಗೆ …ಮ್ಮನ್ನು ನೋಡಿದ ತೇಜಸ್ವಿ 'ನೀವು ಯಾವ ಉದ್ದೇಶಕ್ಕೆ …ದಿದ್ದೀರಿ ಅಂತ ಗೊತ್ತು, ಕಾರು ಹಂಗೆ ತಿರುಗಿಸಿ …ಡು ವಾಪಾಸ್ ಹೋಗಿಬಿಡಿ. ಒಳಗೆ ಬರಲೇಬೇಡಿ' …ದರು. ತೇಜಸ್ವಿಯಿಂದ ಇಂಥ ಪ್ರತಿಕ್ರಿಯೆ ನಿರೀಕ್ಷಿಸಿದ್ವಿ …ರಿಂದ ಏನು ಅಂದುಕೊಳ್ಳಲಿಲ್ಲ. 'ಗೋಪಾಲಗೌಡ್ರು …ಮಿಲೆ ಬದ್ದಿದಾರೆ. ಇಂಥ ಸಂದರ್ಭದಲ್ಲಿ ಅವರ …ವನ್ನ ಖಾಲಿ ಬಿಡೋಣ ಅಂತೀರಾ? ಈಗಾಗ್ಲೆ …ಗ್ರೆಸ್‌ನವರು ಚುನಾವಣೆಯಲ್ಲಿ ಗೆದ್ದವರ ರೀತಿ ಕೇಕೆ …ಡಿತಿದ್ದಾರೆ. ಹಂಗಿರ್ತಾ ನಾವು ಕೈಕಟ್ಟಿಕೊಂಡು ಕೂರಕ್ಕೆ …ತ್ತಾ' ಎಂದೆ. ಲಿಂಗಪ್ಪನೂ 'ತಾಲ್ಲೂಕಿನಲ್ಲಿ ಕುವೆಂಪು …ರಿಗೆ ದೊಡ್ಡ ಹೆಸರಿದೆ. ನಿಮ್ಮ ಬಗ್ಗೆನೂ ಜನಕ್ಕೆ …ಳ ಒಳ್ಳೆ ಅಭಿಪ್ರಾಯ ಇದೆ. ಮತ್ತೆ ತೀರ್ಥಹಳ್ಳಿಯಲ್ಲಿ …ಮ್ಮ ಬಂಧುಗಳು ಜಾಸ್ತಿ ಇದ್ದಾರೆ. ನೀವು ನಿಂತರೆ ಗೆದ್ದ …ರಿ. ಚುನಾವಣೆಗೆ ನಿಲ್ಲಿ' ಎಂದು ಒತ್ತಾಯಿಸಿದರು. … ಹೇಳಿದರೂ ತೇಜಸ್ವಿ ಒಪ್ಪಲೇ ಇಲ್ಲ. 'ಇದಕ್ಕೊಂದು … ಮಾಡಿ ಸಾಕು. ನೀವು ಬರೋದು ಬೇಡ. ನಾವೇ … ನೋಡಿಕೊಳ್ತೀವಿ' ಎಂದು ನಾಮಪತ್ರದ ಅರ್ಜಿಯನ್ನು …ಟ್ಟರೆ ಅದನ್ನು ಪರ ಪರ ಹರಿದು ಹಾಕುವ ಮೂಲಕ …ನಾವಣೆಯಲ್ಲಿ ಸ್ಪರ್ಧಿಸುವ ಎಲ್ಲ ಸಾಧ್ಯತೆಗಳನ್ನು …ಕರಿಸಿಬಿಟ್ಟರು.

… ಅಂದು ಮೂಡಿಗೆರೆಯಿಂದ ಮರಳಿ ಬರುವಾಗಲೇ …ು ಸುರೇಂದ್ರ ಇಬ್ಬರೂ ಒಂದು ನಿರ್ಧಾರಕ್ಕೆ ಬಂದಿದ್ದೆವು. …ಮೊಗ್ಗದ ಸಹಕಾರಿ ಬ್ಯಾಂಕಿನ ಅತಿಥಿಗೃಹದಲ್ಲಿ …ಮೇಶ್ವರಪ್ಪ ರೂಮ್ ಮಾಡಿಕೊಂಡು ಇದ್ದರು. ರಾತ್ರಿ …ತ್ತವರೆ, ಹನ್ನೊಂದು ಗಂಟೆ ಆಗಿತ್ತು. ಕೋಣಂದೂರು …ಗಪ್ಪನ್ನ 'ಇಲ್ಲೆ ಇರಿ' ಅಂತ ಹೊರಗೆ ಕೂರಿಸಿ ನಾವು …ಗೆ ಹೋದ್ವಿ. ಪರಮೇಶ್ವರಪ್ಪನವರ ಜೊತೆ ಕಾಗೋಡು …ತಪ್ಪ, ಸ್ವಾಮಿರಾವ್, ಭರಮಪ್ಪ ಇದ್ದರು. ಅವರಿಗೆ …ಜಸ್ವಿ ಚುನಾವಣೆಗೆ ನಿಲ್ಲಕ್ಕೆ ಒಪ್ಪಲಿಲ್ಲ' ಅಂದ್ವಿ. 'ಸರಿ, …ಗಿದ್ರೆ ನಿಮ್ಮಿಬ್ಬರಲ್ಲಿ ಒಬ್ಬರು ಸ್ಪರ್ಧೆ ಮಾಡಿ' ಅಂದ್ರು. …ವು ನಿಲ್ಲಲ್ಲ, ಕೋಣಂದೂರು ಲಿಂಗಪ್ಪನವ್ರಿಗೆ ಪಕ್ಷದಿಂದ …ಟ್ ಕೊಡಿ. ಮುಂದಿನದೆಲ್ಲ ನಾವು ನೋಡ್ಕಂತಿವಿ' …ನ್ವಿ. 'ಎಂತ ನೋಡ್ಕಂತೀರಿ? ಚುನಾವಣೆ ಅಂದ್ರೆ …ಮುಗಾಟ ಅಲ್ಲ. ಇನ್ನು ಇರೋದು ಹದಿನೈದೇ …' ಎಂದರು ಅಣ್ಣಯ್ಯ. ತಿಮ್ಮಪ್ಪ ಸ್ವಾಮಿರಾವ್ ಎಲ್ಲ …ಮ್ಮಿಬ್ಬರಲ್ಲಿ ಒಬ್ಬರು ನಿಂತ್ಕಳಿ ಅಂತ ಮತ್ತೆ ಮತ್ತೆ …ನ್ನ ಒತ್ತಾಯಿಸಿದರು. ನಾವಿಬ್ಬರು ಬಿಲ್ ಕುಲ್ …ವೇ ಇಲ್ಲ ಅಂತ ನಿರಾಕರಿಸಿದೆವು. 'ಆಯ್ತು ಲಿಂಗಪ್ಪಂಗೆ …ಟ್ ಕೊಡೋಣ, ಸೋಲಿದಂತೂ ಖಾತ್ರಿ ಆಗಿರೆ …ಮ್ಮೇಲೆ ಯಾರಿಗೆ ಟಿಕೇಟ್ ಕೊಟ್ರೇನು. ಆದರೆ ನಾವ್ಯಾರು …ಚಾರಕ್ಕೆ ಬರಲ್ಲ, ನಮ್ಮ ಕಡೆಯಿಂದ ಏನನ್ನೂ …ಕ್ಷಿಸಲೂ ಬಾರದು, ನೆನಪಿಟ್ಕಳಿ' ಅಂತ ಅಣ್ಣಯ್ಯ …ಳಿದರು. 'ಆಯ್ತು, ನೀವ್ಯಾರು ಬರಬೇಡಿ. ಆದರೆ …ಲೇ ಲಿಂಗಪ್ಪಂಗೆ ಬಿ ಫಾರಂ ಕೊಟ್ಟು ಬಿಡಿ. ನಾಳೆ …ಕು ಹರಿಯೋವಾಗ ನಿರ್ಧಾರ ಬದಲಾಗಬಹುದು' …ತ ಹೇಳಿ ಹೊರಗೆ ಕೂತಿದ್ದ ಲಿಂಗಪ್ಪನ್ನ ಒಳಗೆ …ಮ ಬಿ ಫಾರಂ ಇಸಿದುಕೊಂಡು ಬಂದ್ವಿ. ಅಲ್ಲಿಗೆ …ೋಪಾಲಗೌಡ್ರ ನಂತರ ತೀರ್ಥಹಳ್ಳಿ ಕ್ಷೇತ್ರದ …ಮಾಜವಾದಿ ಅಭ್ಯರ್ಥಿ ಯಾರು ಎಂಬುದು ಹೀಗೆ …ರಾತ್ರಿಯಲ್ಲಿ ನಿರ್ಧಾರವಾದಂತಾಯಿತು.

…ನನಗೆ ವೈಯಕ್ತಿಕವಾಗಿ ಲಿಂಗಪ್ಪನವರೇ ನಮ್ಮೆಲ್ಲರಿಗಿಂತ …ರ್ಹ ಅಭ್ಯರ್ಥಿ ಅನ್ನಿಸಿತ್ತು. ಯಾಕೆಂದರೆ ಸಮಾಜವಾದಿ …ಂತ ಏನು ಹೇಳ್ತದೆ ಅದನ್ನು ಬರಿ ಆದರ್ಶದ …ತಾಗಿಸದೇ ಕಾರ್ಯಗತ ಮಾಡಬೇಕು ಅನ್ನೋದು … ಧೋರಣೆಯಾಗಿದ್ದರೆ ಖಂಡಿತ ನಮ್ಮ ಮೊದಲ …ಮ್ಮ ಜಾತಿ, ಹಣ ಯಾವುದರ ಬೆಂಬಲವೂ ಇಲ್ಲದ …ಗಪ್ಪನವರೇ ಆಗಬೇಕು ಎಂಬುದರಲ್ಲಿ ಯಾವ …ಮಾನವೂ ಇರಲಿಲ್ಲ, ಸೋಲಲಿ ಗೆಲ್ಲಲಿ ಅದು …ಿ ಪ್ರಶ್ನೆ, ಆದರೆ ಬಾಯಿಲ್ಲದ ಜನರ ಧ್ವನಿಯಾಗಿ …ಮುಗೊಂಡ ಪಕ್ಷ ಇದು. ಹಾಗಿರುವಾಗ ಬಾಯಿಲ್ಲದ … ಸಮುದಾಯದ ಪ್ರತಿನಿಧಿಯಾಗಿರುವ ಲಿಂಗಪ್ಪನವರನ್ನು …ನಾವಣೆಗೆ ನಿಲ್ಲಿಸುವುದೇ ಎಲ್ಲ ರೀತಿಯಿಂದಲೂ …ಬಾ ಸರಿಯಾದ ಕ್ರಮವಾಗುತಿತ್ತು.

(ಮುಂದುವರೆಯುವುದು)

'ಉಮರ'ನೆಂಬ ಪ್ರತಿರೋಧದ ಜೀವನದಿ

ಈ ಕಾಲದ ಕರಾಳತೆಯನ್ನು ಪ್ರತಿರೋಧಿಸುವ, ಆತಂಕಕ್ಕೊಳಗಾದ ಮನಗಳಿಗೆ ಮಾನವೀಯವಾಗಿ ಸ್ಪಂದಿಸುವ ಜೀವಪರ ಸಾಹಿತ್ಯ ಬರುತ್ತಿಲ್ಲವೆಂಬ ಕೊರಗು ಕೇಳಿಬರುತ್ತಿರುವಾಗಲೇ ಇಸ್ಲಾಂ ಧರ್ಮದ ಅನುಭಾವೀ ಧಾರೆಯ ಸೂಫಿ ಸಂತ "ಉಮರ ಖಯ್ಯಾಮನ ಪದ್ಯಗಳು" ಕಾಲದ ಅಗತ್ಯಕ್ಕೆ ಮಿಡಿಯುವ ಪರಿಯಲ್ಲಿ ಕನ್ನಡಕ್ಕೆ ಡಾ. ಎನ್. ಜಗದೀಶ್ ಕೊಪ್ಪ ಅನುವಾದಿಸಿದ್ದಾರೆ.

ಧರ್ಮದ ಮೂಲಭೂತತೆಯನ್ನು, ಕಟ್ಟುಪಾಡುಗಳನ್ನು, ಕಂದಾಚಾರಗಳನ್ನು ಗಟ್ಟಿಯಾಗಿ ವಿರೋಧಿಸುವ ನಿಟ್ಟಿನಲ್ಲಿ ಹುಟ್ಟಿಕೊಂಡ ಸೂಫಿ ಪಂಥ, ಜಗತ್ತಿನ ಕ್ರಾಂತಿಯ ಮಹಾ ಸ್ಥಿತ್ಯಂತರಗಳಲ್ಲಿ ತನ್ನ ಇರುವಿಕೆಯನ್ನು ಉಮರ ಖಯ್ಯಾಮ್‌ನಂಥ ಸಂತರ ಮೂಲಕ ದಾಖಲಿಸಿದೆ. ಉಮರ ಖಯ್ಯಾಮ್ ಜಗತ್ತಿನ ಅತಿಹೆಚ್ಚು ಭಾಷೆಗಳಲ್ಲಿ ಅನುವಾದದ ಮೂಲಕ ಮೈದಳೆದ ಸಾಧ್ಯತೆ ಜಗದ ಎಲ್ಲ ಜೀವಸಂವೇದನೆಯ ಮನಸ್ಸುಗಳ, ಧರ್ಮಾಂಧತೆಯ ವಿರುದ್ಧದ ಪ್ರತಿರೋಧದ ಜೀವಂತಿಕೆಯನ್ನು ಉಳಿಸಿಕೊಂಡಿದ್ದರ ಮೌಲ್ಯಯುಂಡ ಸಾಕ್ಷಿಯಾಗಿದೆ.

ಪ್ರತಿಭಟನೆಯನ್ನು ಶಾಶ್ವತವಾಗಿ ಪ್ರತಿಧ್ವನಿಸಬಹುದಾದ, ಜೀವವಿರೋಧಿತನವನ್ನು ಸಮರ್ಪಕವಾಗಿ ಎದುರಿಸುವ ಖಯ್ಯಾಮ್ "ಈ ಮೊದಲು ಇಲ್ಲಿದ್ದ/ಪ್ರವಾದಿ-ಪವಾಡ ಪುರುಷರ/ ಜ್ಞಾನಾಮೃತ-ಉಪದೇಶವೆಲ್ಲಾ/ ಬರೀ ಕಟ್ಟುಕಥೆಗಳು ಅಷ್ಟೆ/ ಇವರದು ನಿದ್ರೆಯಿಂದೆದ್ದು/ ಮಾತುಗಳ ಕನವರಿಸಿ/ ಮಲಗಿದವರ ಕಥೆಗಿಂತ/ ಬೇರೇನೂ ಹೊಸತಲ್ಲ" ಎನ್ನುತ್ತಾನೆ. ಧರ್ಮದ ಎಲ್ಲಾ ದಸ್ತಾವೇಜುಗಳನ್ನು ಮೀರಿ, ದುಡಿದುಣ್ಣುವ ಜನರ ಜೀವನಾಡಿಯಾಗಿ 'ಅನುಭಾವ'ದ ಮದ್ಯ ಕುಡಿಸಿ, ಬದುಕಿನ ಸಂಕಟವನ್ನು ಮರೆತು ನಿರುಮ್ಮಳವಾಗಿ ಉಳಿಯುವ ಹಾದಿಯಲ್ಲಿ ಎಲ್ಲರನ್ನೂ ಕರೆತಂದ ಖಯ್ಯಾಮ್ ಜೀವಪ್ರೇಮದ ಕುರುಹಾಗಿ ಕಾಣಿಸುತ್ತಾನೆ. "ನಿಜ ಹೇಳಬೇಕೆಂದರೆ/ ನಾನು ಮಸೀದಿಗೆ ಬಂದದ್ದು/ ದೇವರ ಪ್ರಾರ್ಥನೆಗಲ್ಲ/ ಇಲ್ಲಿಂದ ಕದ್ದೊಯ್ದಿದ್ದ/ ಹಾಸುಗಂಬಳಿ ಈಗ/ ಹಳತಾಗಿದೆ ಅದಕ್ಕೆ" ಎನ್ನುವ ವಿಡಂಬನಾತ್ಮಕ ಶೈಲಿ ಅಪೂರ್ವವಾದದ್ದು.




ಧರ್ಮವೆಂಬುದನ್ನು ಇದ್ದವರು ಬಂಡವಾಳ ಮಾಡಿಕೊಂಡು ಇಲ್ಲದವರನ್ನು ತುಳಿಯುತ್ತಿರುವ ದೌರ್ಜನ್ಯವನ್ನು ಅರಿತ ಖಯ್ಯಾಮ್ 'ರುಬಾಯಿಯತ್' ಮೂಲಕ ಪ್ರತಿಬಾಯಿಯಲ್ಲಿ ಅನುರಣಗೊಳ್ಳುವ ಪ್ರತಿರೋಧದ ದನಿ ಎತ್ತಿರಿಸಿದ ಕ್ರಾಂತಿಕಾರಿ ಸೂಫಿ. 'ರುಬಾಯಿ' ಎಂಬ ಕಾವ್ಯ ಎಂಟುನೂರು ವರ್ಷಗಳ ನಂತರವೂ ತನ್ನ ಸಾಂದರ್ಭಿಕತೆಯ ಮೌಲ್ಯವನ್ನು ಅಷ್ಟೇ ಗಟ್ಟಿಯಾಗಿ ಉಳಿಸಿಕೊಳ್ಳುವ ತಾಕತ್ತಿಗೆ ಯಾವ ಗುಣವಿಶೇಷಣ ಬಳಸಲು ಸಾಧ್ಯ?

ಸ್ವಚ್ಛಂದ ಆರೋಗ್ಯಕರ ಮನಸ್ಸೊಂದು ಒಳಗಣ್ಣಿನಿಂದ ಕಾಣಬಹುದಾದ, ಖಯ್ಯಾಮ್ ಸೃಜಿಸಿದ ಮನುಷ್ಯ ಪ್ರೀತಿಯ ಎಳೆಯನ್ನು, ಪ್ರತಿರೋಧದ ಓಘವನ್ನು ಭಾಷೆಯಿಂದ ಭಾಷೆಗೆ ಋತುಚಕ್ರ ಬದಲಾದಂತೆ ಅರ್ಥಪೂರ್ಣ ಮರುರೂಪ ಕೊಡಬಹುದಾದ ಕಾರ್ಯವನ್ನು ಡಾ. ಎನ್. ಜಗದೀಶ್ ಕೊಪ್ಪ ಮಾಡಿದ್ದಾರೆ. ಒಂದು ಕಾಲಸಂದರ್ಭದ ಜೀವವಿರೋಧಿ ದುರಂತವನ್ನು ಕಂಡು ಮರುಗುವುದರಲ್ಲಿ ಕಳೆದುಹೋಗದೆ ಅಕ್ಷರಗಳ ಮೂಲಕ ಉತ್ತರಿಸುವ ದಾರಿ ವೈಚಾರಿಕವಾಗಿದೆ. ಅನುವಾದ ಕುರಿತ ಮುಗ್ಧ ಅನುಮಾನವಿಟ್ಟುಕೊಂಡ ಕವಿ, ಸಾಮಾನ್ಯನೂ ಅರ್ಥಮಾಡಿಕೊಳ್ಳಬಹುದಾದ ತೃಪ್ತಿಕರ ಸಾಧ್ಯತೆಯ ಕಡೆ ಹೆಜ್ಜೆ ಇರಿಸಿದ್ದಾರೆ.

ಈ ಸಂಕಲನದ ಪ್ರಸ್ತಾವನೆ 'ದಂಗೆಯ ಬೀಜವನ್ನರಸುತ್ತಾ....' ಖಯ್ಯಾಮನ ಪದ್ಯಗಳ ಓದಿಗೆ ಸೂಕ್ತ ಮನಸ್ಥಿತಿಯನ್ನು ರೂಪಿಸುತ್ತದೆ. ನಿಜವಾದ ಅನುಭಾವದ ನೆಲೆಯನ್ನು ಗ್ರಹಿಸಿ 'ರುಬಾಯಿ'ಗಳ ಅರ್ಥವಂತಿಕೆಯನ್ನು ಮನಗಾಣಲು ಅಗತ್ಯ ತಯಾರಿಯನ್ನು ಒದಗಿಸಿದಂತೆಯೇ ಕಾಲದ ಎಚ್ಚರವನ್ನು ಜಾಗೃತಗೊಳಿಸುತ್ತದೆ. ಸಾವಿರ ವರ್ಷಗಳ ಹಿಂದೆಯೇ ವೈದಿಕತೆಯ ವಿರುದ್ಧ ಪ್ರತಿಭಟನೆಯ ಕಿಚ್ಚು ಹತ್ತಿಸಿದ, ಧರ್ಮಾತೀತ, ಜಾತ್ಯತೀತ ದರ್ಶನವಾದ 'ಲೋಕಾಯತ' ದರ್ಶನವನ್ನು, ಪ್ರಕೃತಿಯನ್ನು ಪ್ರಕೃತಿಯಿಂದಲೇ ಅರಿಯುವ, ಭೌತಿಕ ಪ್ರಜ್ಞೆಯ ಚಾರ್ವಾಕನನ್ನು, ದಂಗೆಯ ಮೊದಲ ಬೀಜ ಮೊಳಕೆಯೊಡೆದ ಪರಿಯನ್ನು ಸಮಯೋಚಿತವಾಗಿ ಚರ್ಚಿಸಲಾಗಿದೆ. ಪ್ರಕೃತಿ ವಿಸ್ಮಯಗಳ ಶೋಧವೇ ಪ್ರಮುಖ, ಬೇರೆಲ್ಲವೂ ನಗಣ್ಯವೆಂದುಕೊಂಡ ಕೆಲವರಿಗೆ ಖಯ್ಯಾಮ್ "ಇಹ-ಪರ ಲೋಕಗಳ/ಒಳಹೊರಗಿನ ಮಾತುಗಳ/ ಚರ್ಚಿಸಿದ ಎಲ್ಲಾ ಪಂಡಿತರ/ ಪಾಡೇನಾಯಿತು ಗೆಳೆಯಾ?/ ಕಡೆಗೊಮ್ಮೆ ಅವರೂ ಈ ಮಣ್ಣಿನಲಿ/ ಬಾಯ್ಮುಚ್ಚಿ ಮಲಗಿಬಿಟ್ಟರು/ ಸದ್ದಿಲ್ಲದಂತೆ ಉಳಿದವರ ಹಾಗೆ" ಎನ್ನುತ್ತಾನೆ.

ಇಲ್ಲಿನ ಬರಹಗಳಲ್ಲಿ ಅಂತಸ್ಥವಾಗಿರುವ ಮದ್ಯ-ಅದು ಕೇವಲ ಮಧುವಲ್ಲ, ಒಮ್ಮೆ ಅನುಭಾವ, ಮತ್ತೊಮ್ಮೆ ಜೀವಪ್ರೇಮ, ಪ್ರೇಯಸಿಯೂ ಆಗಿ ಕಾಡಬಹುದಾದ, ಬದುಕಿನ ತೀವ್ರತುಡಿತ ಕೊಡಬಹುದಾದ ಅನುಭವ ಹಾಯಿದೋಣಿಯಲ್ಲಿ ತಣ್ಣಗೆ ತೇಲಿಸಿದಂತಾದರೂ ಒಳಗೊಂದು ಎಚ್ಚರದ ಗಟ್ಟಿದನಿ ಇರುವಂತೆ ಗಾಢತೆ ಆವರಿಸಿಕೊಳ್ಳುತ್ತದೆ.



ಉಮರ ಖಯ್ಯಾಮನ ಪದ್ಯಗಳು
(ಇಂಗ್ಲಿಷ್ ಮೂಲ : ಫಿಟ್ಸ್ ಜೆರಾಲ್ಡ್)
ಕನ್ನಡಕ್ಕೆ : ಡಾ.ಎನ್. ಜಗದೀಶ್‌ಕೊಪ್ಪ
ಪ್ರಕಾಶನ : ಲಡಾಯಿ ಪ್ರಕಾಶನ,
21, ಪ್ರಸಾದ ಹಾಸ್ಟೆಲ್, ಗದಗ
ಪುಟಗಳು : 80
ಬೆಲೆ : 50/-

ಪ್ರತಿ ಸಾಮಾನ್ಯನ ಬದುಕಿಗೆ ನೈತಿಕ ಆಸರೆಯನ್ನು ನೀಡಿ ಮುನ್ನಡೆಸಬೇಕಾದ ಯಾವುದೇ ಧರ್ಮ, ಇಂದು ತನ್ನ ಇರುವಿಕೆಯೊಳಗೇ ಜೀವವಿರೋಧಿತನವನ್ನು ತುಂಬಿಕೊಂಡು ಅಮಾನವೀಯವಾಗುತ್ತಿರುವ ಸಂದರ್ಭಕ್ಕೆ 'ಉಮರ ಖಯ್ಯಾಮನ ಪದ್ಯಗಳು' ಕನ್ನಡದಲ್ಲಿನ ಈ ಹಿಂದಿನ ಆರು ಅನುವಾದಗಳಿಗಿಂತ ಭಿನ್ನವಾಗಿ, ಓದುಗರಿಗೆ ಬುದ್ಧಿಗೆಟುಕಬಹುದಾದ ರೀತಿಯಲ್ಲಿ ಬಂದಿರುವುದು ಉಚಿತವಾಗಿದೆ. ಮೂಲ ಕಾವ್ಯ ಮತ್ತು ಅನುವಾದಿತ ಕಾವ್ಯದ ಮಧ್ಯೆ ಉಳಿಯುವ ಕಾವ್ಯವೇ ನಿಜವಾದ ಕಾವ್ಯ ಎನ್ನುವ ಅತಿತಾರ್ಕಿಕತೆಗೆ ಎರವಾಗದೆ ಉಮರ ಖಯ್ಯಾಮನ ಪದ್ಯಗಳನ್ನು ಸ್ವಾಗತಿಸಬಹುದು.

ಈ ಸಂಕಲನದ ರಾ.ಸೂರಿಯವರ ತಲೆಬರಹದ ಕಲೆ ಧ್ವನಿಪೂರ್ಣ, ಮುಖಪುಟ ಆಕರ್ಷಕ. ಸೃಜನ್ ಚಿತ್ರಗಳು ಕಲೆ-ಕಾವ್ಯದ ಭಾವಸಮ್ಮಿಲನಕ್ಕೆ ಸಹಾಯಕವಾಗಿವೆ. ಉಮರ ಖಯ್ಯಾಮನ ಪದ್ಯಗಳು ಮಧುಬಟ್ಟಲನು ಕೈಯಲ್ಲಿ ಹಿಡಿದರೆ ಮನಸ ತುಂಬ ನಶೆಯ ಘಮಲು ಹೊಮ್ಮುತ್ತದೆ. ಕೊನೆಗೆ ನೆನಪಿನಲ್ಲುಳಿಯುವುದು...

"ಬೆಳಕು ಹರಿದಿದೆ
ಸೂರ್ಯ ರಥವೇರುತ್ತಿದ್ದಾನೆ
ದೂರದ ಮಸೀದಿಯಿಂದ
ಕರೆಯೊಂದು ಕೇಳಿ ಬರುತಿದೆ
'ಏಳು ಖಯ್ಯಾಮ್ ಎದ್ದೇಳು
ಮದ್ಯ ಕುಡಿ' ಎಂದು."

■ ವೀರಣ್ಣ ಮಡಿವಾಳರ

ಅಂತುಳೆ: ಇಲ್ಲಿ ವಿಲನ್-ಅಲ್ಲಿ ಹೀರೊ!



'He must go'- ಟೈಮ್ಸ್ ಆಫ್ ಇಂಡಿಯಾದ ಸಂಪಾದಕೀಯ.

'ಅಂತುಲೆಯನ್ನು ಹೊರ ಹಾಕಿ'- 'ಪ್ರಜಾವಾಣಿ' ಸಂಪಾದಕೀಯ.

ಬಹುತೇಕ ಎಲ್ಲ ಪತ್ರಿಕೆಗಳು, ಟಿವಿ ಮೀಡಿಯಾಗಳು ಮೇಲಿನಂತೆ ವರ್ತಿಸಿ, ಕೇಂದ್ರ ಅಲ್ಪಸಂಖ್ಯಾತ ಖಾತೆ ಸಚಿವ ಎ.ಆರ್. ಅಂತುಳೆಯವರನ್ನು ದೇಶದ್ರೋಹಿ ಎಂಬಂತೆ ಚಿತ್ರಿಸಿದವು.

ಅರೆ, ಹೇಮಂತ ಕರ್ಕರೆ ಹತ್ಯೆಯ ಕುರಿತು ಪೊಲೀಸ್ ಇಲಾಖೆಯ ವರದಿಗಳೇ ಅಸ್ಪಷ್ಟವಾಗಿರುವಾಗ, ಆ ಕುರಿತು ತನಿಖೆ ಮಾಡಿ ಎಂದು ಅಂತುಳೆ ಕೇಳಿದ್ದು ತಪ್ಪೇ?

ಹಿಂದೆ ನಾಂದೇಡ್ ಸ್ಫೋಟ ಸಂಭವಿಸಿದಾಗ, ಮಾಲೇಗಾಂವ್ ಮತ್ತಿತರ ಸ್ಫೋಟಗಳಲ್ಲಿ ಹಿಂದೂತ್ವವಾದಿ ಉಗ್ರರ ಕೈವಾಡ ಇರಬಹುದು ಎಂದು ಅಂದೇ ಸಂದೇಹ ವ್ಯಕ್ತಪಡಿಸಿದ್ದರು ಅಂತುಳೆ. ಆಗಲೂ ಅದನ್ನು ಉದ್ಧಟತನದ ಮಾತು ಎಂದು ಕರೆಯಲಾಗಿತ್ತು. ಆದರೆ ವರ್ಷಗಳ ನಂತರ ಅದೇ ಸತ್ಯವೆಂಬುದು ಸಾಬೀತಾಗುತ್ತಿದೆ. ಸಾಧ್ವಿ, ಸೈನಿಕ ಮಹಾಶಯರು ಬಂಧಿತರಾಗಿ ವಿಚಾರಣೆ ಎದುರಿಸುತ್ತಿದ್ದಾರೆ.

ತನ್ನ ಪಕ್ಷದ ಸದಸ್ಯನನ್ನು ಕಾಂಗ್ರೆಸ್ಸೇ ರಕ್ಷಿಸದಿರುವಾಗ, ಮಾಧ್ಯಮಗಳಾದರೂ ಏನು ಮಾಡಿಯಾವು ಪಾಪ?

ಇನ್ನು ಅತ್ತ ಪಾಕಿಸ್ತಾನದ ಮಾಧ್ಯಮಗಳು ತಲೆಕೆಟ್ಟ ಸುದ್ದಿಗಳನ್ನೂ ಬರೆದವು. ಅವುಗಳ ಪಾಲಿಗೆ ಅಂತುಳೆ ಹೀರೊ ಆದರು. ಈ ನೆಪದಲ್ಲಿ ಅವು ಇಸ್ಲಾಂ ಉಗ್ರರ ದುಷ್ಕೃತ್ಯಗಳನ್ನು ಮರೆಮಾಚಲು ನೋಡಿದವು.

ಅಂತುಳೆ ಹೀರೋನೂ ಅಲ್ಲ, ವಿಲನ್ನೂ ಅಲ್ಲ. ಅವರು ಸಾಮಾನ್ಯ ಭಾರತೀಯರಾಗಿ ಒಂದು ಸಾಂದರ್ಭಿಕ ಪ್ರಶ್ನೆ ಎತ್ತಿದ್ದಾರೆ. ಕರ್ಕರೆ ಹತ್ಯೆಯ ಕುರಿತು ತನಿಖೆ ಮಾಡುವುದರಿಂದ ಆಗುವ ನಷ್ಟವಾದರೂ ಏನು?

ದಕ್ಷ ಅಧಿಕಾರಿ ಕರ್ಕರೆ ಸಂಚಿಗೆ ಬಲಿಯಾದರೆ ಎಂಬ ಪ್ರಶ್ನೆ ಅನೇಕ ಭಾರತೀಯರನ್ನು ಕಾಡುತ್ತಿರುವಾಗ ಮಾಧ್ಯಮಗಳಿಗೇಕೆ ಈ ಬಗ್ಗೆ ಅಸಹ್ಯೆ? ■

ಈ ಕಾಂಗ್ರೆಸಿನವು ಎಂಟು ಜಾಗದಲ್ಲೂ ಸ್ವಂಟ ಮುರಕಂಡವಲ್ಲ ಹೇಳು

ಬಯಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಭೂದೇವಿ ತನ್ನ ಹರಿಗೆ ಕೆಲಸ ಮುಗಿಸಿ ಸುಸ್ತಾಗಿ ಮಲಗಿದ್ದಳು. ಊರ ಸುತ್ತ ರಾಗಿ ಮೆದೆಗಳು ತಪಸ್ಸಿಗೆ ಕುಳಿತ ಹುಲ್ಲುಮೆದೆಗಳಂತೆ ಕಾಣುತ್ತಿದ್ದವು. ಕೂಳೆ ತೊಲ, ಅವರೆಸಾಲು, ಕೊರೆ ಬಿಸಿಲು, ಇದೆಲ್ಲಾ ಕಾಳಮಾವನಿಗೆ ಒಂದು ಯುಗ ಮುಗಿಸಿದ ಸ್ಥಿತಿಯನ್ನು ಮನವರಿಕೆ ಮಾಡಿಕೊಡುತ್ತಿತ್ತು. ಸರಿಯಾಗಿ ಮಳೆಗಾಲ ನಡೆಸಿದಿದ್ದರೂ ಮನೆಯ ಉದ್ದ ನಿಂತಿರುವ ರಾಗಿಮೆದೆ ಅವನು ಕುಳಿತಲ್ಲಿಗೇ ಕಾಣುತ್ತಿತ್ತು. ಅದನ್ನು ನೋಡಿದ ಅವನಿಗೆ ದೇವೇಗೌಡರಿಗೆ ಮಧುಗಿರಿಯಲ್ಲಿ ಸೊಸೆ ಗೆದ್ದಷ್ಟೇ ಖುಷಿಯಾಗಿತ್ತು.

"ಅಂತೂ ಹಟ ಸಾದಿಸೇಬುಟ್ಟ ದ್ಯಾವೇಗೌಡ" ಎಂದ.

"ಅದಪ್ಪ ಚಾಲೆಂಜು ಅಂದ್ರೆ" ಎಂದ ಸೀರ.

"ಅನಿತುನ್ನ ನೋಡ್ತಾಯಿದ್ರೆ ವಳ್ಳೆ ಜಯಲಲ್ತನ್ನ ನೋಡಿದಂಗಾಯ್ತದಲವೇನ್ಲ?" ಎಂದಳು ಜುಮ್ಮಿ.

"ಯಾರಂಗಾರ ಕಾಣ್ಸೆ, ದ್ಯಾವೇಗೌಡ್ರು ತನ್ನ ಮನಿಯೋರನೆ ಮೂರು ಜನವ ವಿಧಾನಸಭೆವಳಿಕೆ ದಬ್ಬಿದನವ್ವ. ಇದೀ ದೇಸದಲ್ಲೇ ಇಂತ ಸಾಸ ಯಾರೂ ಮಾಡಿಲವಂತೆ?"

"ನೋಡು ಮತ್ತೆ" ಎಂದ ಸೀರ.

"ಲಕ್ಷ ಹಾಕು, ಭವಾನಿ ವಬ್ಬ ಕಳಿಸಿದ್ರೆ ಅಲ್ಲಿಗೆ ಸರಿಯಾಯ್ತದೆ" ಎಂದ ಉಗ್ರಿ.

"ಅದಿರ್ಲಿ, ಈ ಕಾಂಗ್ರೆಸ್ಸಿನವ್ಯಾಕೆ ಹಿಂಗೆ ಸೋತವಲ್ಲಾ?" ಎಂದ ಕಾಳಮಾವ.

"ಅದಿನ್ನಮ್ಯಾಲೆ ಅಂಗೆ ಕಣಮಾವ. ಸೋಲ್ತಯಿರದೆ ಅವುಗಳ ಕ್ಯಲಸ. ಯಾಕಪ್ಪ ಅಂದ್ರೆ ಗೆದ್ದೇನು ಮಾಡಬೇಕೂ, ವಿರೋಧ ಪಕ್ಷದಲ್ಲಿ ಕುತಗಳದಲವೇ? ವಿರೋಧ ಪಕ್ಷದಲ್ಲಿ ಕೂತಗಳಕ್ಯಾಕೆ ಗೆಲ್ಲಬೇಕು ಅನ್ನದು ಅವುರ ಲ್ಯಕ್ಕವಂತೆ."

"ಆದ್ರು ಒಂದ್ಯರಡನಾರ ಗೆಲ್ಲಬೇಕಾಗಿತ್ತು ಕಂಡ್ಯ."

"ಯಂಗೆಲ್ತರೆ? ಆ ಕಡೆ ಲಿಂಗಾಯಿತ್ಯಲ್ಲ ಬಜೆಪಿ ಅಂತ ಒಟ್ಟಾಗ್ಯವುರೆ. ಈ ಕಡೆ ಜೆಡಿಎಸ್ ಅಂತ ವಗ್ಗಟ್ಟಾಗಿ ಒಕ್ಕಲೀಗುರು ಮ್ಯರಿತಾಯಿರುವಾಗ ಆ ಕಾಂಗ್ರೆಸ್ ಕೈಯ್ಯ ಯಾರಿಡಿಬೇಕೇಳು?"

"ಜೆಡಿಎಸ್‌ಗೆ ಬರೀ ಒಕ್ಕಲಿಗರೇ ಓಟು ಮಾಡಿದ್ದರೇನ್ಲ?"

"ಇಲ್ಲ, ಆದ್ರು ಅದೊಂದು ಹಿಡಿಗಂಟು ತಾನೆ. ಹಿಡಗಂಟಿನ ಮ್ಯಾಲೆ ಒಂದಿಷ್ಟು ಪುಡಿಗಂಟು ಅಂತ ಕಿರುಜಾತಿಗೆ ಒಂದಿಷ್ಟು ಕುಡಿಸಿ, ಕೈಗೊಂದು ಸಾವುರುಪಾಯಿ ಕೊಟ್ರೆ ಗೆಲ್ದೆ ಇನ್ನೇನು ಮಾಡ್ಯರೂ? ದುಡ್ಡಿಲ್ದೆಯಿರೊ ಕಾಂಗ್ರೆಸ್ಸಿನವು ಗೆಲ್ಲಕಾದತೆ?"

"ಅಂತು ಗೆದ್ರಲ್ಲ ಹೇಳು?"

"ಕಾಂಗ್ರೆಸ್ಸಿನವು ಒಂದನಾರ ಗೆಲ್ಲಬೇಕಾಗಿತ್ತು ಕಂಡ್ಯ."

"ಯಂಗೆಲ್ತರೆ? ಮಧುಗಿರಿಲಿ ಇನ್ನೊಂದಿಷ್ಟು ಕ್ಯಲಸ ಮಾಡಿದ್ರೆ ಗೆದ್ದ್‌ಗೆಲ್ಲೋರು. ಮಾಡಬೇಕಲ್ಲ ಆ ಕಾಂಗ್ರೆಸ್‌ನವ ನೋಡಿದ್ರೆ ರಾಜಕೀಯದ ಕಳೆನೆಯಿಲ್ಲ



ಮಕದಲ್ಲಿ, ರಾಜಕೀಯ ಮಾಡಿ ಸುಸ್ತಾಗಿರಂಗೆ ಕಾಣ್ತವೆ. ಆ ಧರಮಸಿಂಗನ್ನೊಡಿದ್ರೆ ಯಾರಿಗಾರ ಓಟು ಮಾಡಬೇಕು ಅನ್ನಸ್ತದ? ಇನ್ನ ಖರ್ಗೆ ನೋಡಿದ್ರೆ ಅಂಗನ್ನಿಸ್ಯತೆ? ಆದೋಗ್ಲಿ ಅವರ ಪಾರ್ಟಿ ಪ್ರೆಸಿಡೆಂಟ್ ದೇಶಪಾಂಡೆ ಯಂಕಾಣ್ತನೆ?"

"ಯಂಕಾಣ್ತನ್ಲ?"

"ಲಾಸಾಗಿರೊ ಪ್ಯಾಗುಟ್ರಿಯ ಲೀಸಿಗಾಕಿ ಬಂದೋನಂಗೆ ಕಾಣ್ತನೆ. ಇನ್ನು ಅವುನು ಮಾತಾಡೊದೊ, ಬಿಸಿ ಅವುರೆಕಾಳ ಬಾಯಿಗಾಯ್ಕಂಡೋನಂಗೆ ಮಾತಾಡ್ತನೆ. ಶಿವಕುಮಾರ ಏನೇ ಮಾಡಿದ್ರು ಕುಮಾರಸ್ವಾಮಿಯ ಸ್ಪೈಡ್ ವಡಿಯಕ್ಯಾಗದಿಲ್ಲ, ಅವುನ ಮಕ ನೋಡಿದ್ರೆ ರೌಡಿ ಕ್ಯಲಸ ಇನ್ನ ಬುಟ್ಟಿಲ್ಲ ಅನ್ನಂಗೆ ಕಾಣ್ತನೆ. ಹಿಂಗಾದ್ರೆ ಎಳುದತೆ ಕಾಂಗ್ರೆಸ್ಸು? ಅದ್ಕೆ ನೋಡು ಎಂಟು ಕ್ಷೇತ್ರದಲ್ಲೂ ಸ್ವಂಟ ಮುರಕಂಡು ಮನಿಗ್ಯದೆ. ಇದಕೇನೇಳ್ತಿ?"

"ಕಾಂಗ್ರೆಸ್ ಪಾರ್ಟಿ ಬಗ್ಗೆ ಅಷ್ಟೊಂದು ಲೈಟಾಗಿ ಮಾತಾಡಬ್ಯಾಡ ಕಣೊ ಉಗ್ರಿ" ಎನ್ನುತ್ತಾ ವಾಟಿಸ್ಸೆ ಬಂದ.

"ಯಾಕಪ್ಪಾ?"

"ಈ ಮಾತು ನಂದಲ್ಲ, ಖರಗೆ ಮಾತು ಕಣೊ. ಕಾಂಗ್ರೆಸ್ ಬಗ್ಗೆ ನೆಗ್ಲೆಟ್ಟಾಗಿ ಮಾತಾಡಬ್ಯಾಡಿ, ಆ ಪಾರ್ಟಿ ಮಲಗಿರಬವುದು, ಎದ್ದರೆ ಯಾವ ಕ್ಷೇತ್ರನೂ ಬುಡದಂಗೆ ಗೆಲ್ತದಂತೆ."

"ಯಾರೇಳಸಬೇಕಪ್ಪ?"

"ಹಿಂಗೆ ಯಾರೊ ಬತ್ತರೆ. ನೋಡಾಗ್ಲೆ ನಮ್ಮ ಮಾಜಿ ಗುರು ಬಂಗಾರಿ ಸೈಕಲ್ ಬಿಸಾಕಿ ಕೈ ತೋರುಸ್ತ ವಂಟವುರೆ."


"ಅಂಗರೆ ಒಂದು ಕಡಿಯಿಂದ ವಾಟಿಸ್ಸೆ ಅಂಥೋರನ್ಯಲ್ಲ ವಿಳಿಸಿಗಂಡು ಬತ್ತರೆ ಅನ್ನು."

ಭಾಜಪ ಸೀರೆ ಭಸ್ಮ ಪ್ರಕರಣವು

ಉಪಚುನಾವಣೆ ಮುಗಿದು, ಫಲಿತಾಂಶ ಹೊರಬಂದು ಎಲ್ಲರ ಬಂಡವಾಳವೂ ಬಯಲಾಗಿದೆ. ಸುಳ್ಳಿನ ಸರದಾರರಾದ ರಾಜಕಾರಣಿಗಳು ಆಶ್ವಾಸನೆಗಳ ಮಳೆ ಸುರಿದು; ಹಣ ಹೆಂಡದ ಹೊಳೆ ಹರಿಸಿ ತತ್ವಸಿದ್ಧಾಂತಗಳ ಹರಿಕಾರರೆಂದು ಸಾರಿಕೊಂಡದ್ದನ್ನು ಮತದಾರ ಮಹಾಪ್ರಭು ಮಾತ್ರವಲ್ಲದೆ ಇತರರ ಕಿವಿ ತಮಟೆಗಳೂ ಕೇಳಿಕೇಳಿ ಒಡೆಯುವ ಹಂತಕ್ಕೆ ಬಂದಿದ್ದು; ಇವುಗಳನ್ನು ಧಾರಾಳವಾಗಿ ಹರಿಸುವವನೇ ಹರಿಕಾರ ಎಂಬ ಅನುಮಾನ ಮೂಡಿಸಿದ್ದು; ಮತ ಎಣಿಕೆಯ ದಿವಸ, ನಮ್ಮ ದೈವಾಂಶಸಂಭೂತ ಪ್ರಸಿದ್ಧ ಜ್ಯೋತಿಷಿಗಳು ಘಟನೆ ನಡೆದನಂತರ ಯಾಕೆ ಹೀಗಾಯಿತು, ಇದಕ್ಕೆ ಯಾವ ಯಾವ ಗ್ರಹಗಳು ಕಾರಣಕರ್ತರಾಗಿದ್ದವು ಎಂದು ಪ್ರಸಿದ್ಧ ಪಡಿಸುವಂತೆಯೇ ನಮ್ಮ ಹೆಸರಾಂತ ರಾಜಕೀಯ ಪಂಡಿತರು ಸೋಲುಗೆಲುವಿಗೆ ಕಾರಣಗಳನ್ನು ಪಾತಾಳ ಗರಡಿಬಿಟ್ಟು ಆಳದ ಬಾವಿಯಿಂದ ಹೊರತೆಗೆದು ತಮ್ಮ ವಿಶ್ಲೇಷಣೆಗೆ ಇನ್ನೊಂದು ಗರಿಯನ್ನು ಸಿಕ್ಕಿಸಿಕೊಂಡಿದ್ದು; ಹಲವು ಆಮಿಷಗಳಿಗೆ ಒಳಗಾದ ಮತದಾರ ಮಹಾಪ್ರಭುವು ಹಣದ ದಾಹಕ್ಕಾಗಿ ಮಾರಿಕೊಂಡು 'ಪ್ರಜ್ಞಾತಂತ್ರವನ್ನು' 'ಹಣತಂತ್ರ'ವನ್ನಾಗಿ ಪರಿವರ್ತಿಸಿದ ಮಹಾನುಭಾವರನ್ನೇ ಪುನಃ ಆಯ್ಕೆ ಮಾಡಿದ್ದು ಕೆಲವರಿಗೆ 'ಪ್ರಜ್ಞಾವಂತ' ಮತದಾರನ ಕಾರ್ಯವಾಗಿಯೂ ಮತ್ತೆ ಕೆಲವರಿಗೆ ಪ್ರಜಾತಂತ್ರದ ಬೇರುಗಳು ಆಳವಾಗಿ ಇಳಿಯದ ಕಾರಣವಾಗಿ ನಡೆದ ಆಚಾತುರ್ಯ ಎಂಬುದಾಗಿಯೂ ಗೋಚರಿಸಿದ್ದು; ಇಂತಹವೆಲ್ಲವೂ ಸಂವಿಧಾನದ ಸುತ್ತ ನರ್ತಿಸುತ್ತಿರುವ ಪ್ರೇತಗಳಂತೆ ಕೆಲವು ಸಂಭಾವಿತರಿಗೆ ಗೋಚರಿಸುತ್ತಿವೆಯಂತೆ.

ಮುಖ್ಯಮಂತ್ರಿ ಯಡ್ಯೂರಪ್ಪನವರು 'ಸರ್ಕಾರದ ಸ್ಥಿರತೆ ಮತ್ತು ಅಭಿವೃದ್ಧಿಯನ್ನು ಬಯಸಿ ಜನ ತಮ್ಮ ಪಕ್ಷಕ್ಕೆ ಬಹುಮತ ನೀಡಿದ್ದಾರೆ' ಎಂದು ಹೇಳಿದ್ದಾರೆ. ಎಂಟಕ್ಕೆ ಎಂಟೂ ಸ್ಥಾನದಲ್ಲಿ ಗೆಲ್ಲುವುದು ಖಚಿತ ಎಂದು ಸಾರುತ್ತಿದ್ದ ಮಾನ್ಯರು ಐದಕ್ಕೇ ಆನಂದೋತ್ಸಾಹದಿಂದ ಹೇಳುವಾಗ ಯಾಕೋ ಏನೋ ತತ್ವ ಸಿದ್ಧಾಂತಗಳ ಮಾತೇ ಆಡಲಿಲ್ಲ. ಪ್ರಾಯಶಃ ಅವುಗಳನ್ನು ಹಣತಂತ್ರದ ಮೂಲಕ ಗಳಿಸಿಕೊಳ್ಳಬಹುದು ಎಂಬ ಅನುಭವ ಕಾರಣವಿರಬಹುದು!

ಇರಲಿ. ಈ ಜಯ ಯಡ್ಯೂರಪ್ಪನವರಿಗೆ ಉದಾರತೆಯನ್ನು ತಂದುಕೊಟ್ಟಿದೆ ಎನ್ನುವುದರಲ್ಲಿ ತಪ್ಪಿಲ್ಲ. ಅವರು ಯಾವಾಗಲೂ ಹಾಗೆಯೇ ಇದ್ದರು; ಮಠಮಾನ್ಯಗಳಿಗೆ ತಮ್ಮನ್ನು ಆಹ್ವಾನಿಸಿ ಗೌರವ ತೋರಿಸಿದ ಸಂಘ ಸಂಸ್ಥೆಗಳಿಗೆ ಕೋಟಿ ಕೋಟಿ ಹಣ ದೇಣಿಗೆಯಾಗಿ ನೀಡಿದ್ದಾರಲ್ಲ ಇದರಲ್ಲೇನು ವಿಶೇಷ ಎಂದು ಕೆಲವರು ಗೊಂದಲಗೊಳ್ಳಬಹುದು. ಅದು ಹಾಗಲ್ಲ, ಇದು ಹಣದ ಸಮಾಚಾರ ಅಲ್ಲ, ಮಾನದ ವಿಷಯ. ಮಾನಧನರಾದ ಶ್ರೀಯುತರು ನೈಸ್ ಕಂಪನಿಯ ಜೊತೆ ಶಾಮೀಲಾಗಿದ್ದಾರೆ



ಎಂದು ಮಾಜಿ ಪ್ರಧಾನಿ ದೇವೇಗೌಡರು ಆರೋಪಿಸಿದ್ದರಲ್ಲ ಅದಕ್ಕೆ ಸಂಬಂಧಿಸಿದ್ದು. ಯಾರು ಯಾರೋ ಬಂದು ಮಾನ್ಯರಿಗೆ 'ಇದು ಮಾನನಷ್ಟ ಮೊಕದ್ದಮೆಗೆ ಫಿಟ್ ಕೇಸು' ಅಂದಿದ್ದರಂತೆ. ಅದರ ಅನುಸಾರವಾಗಿ ಶ್ರೀಯುತರು ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಸಾರಿದ್ದರು. ಹಾಳಾದ ದೇವೇಗೌಡ ಹಾಗೂ ಅವನ ಮಕ್ಕಳು 'ಹಾಕಲಿ ನೋಡುವ' ಎನ್ನುವ ಧಾಟಿಯಲ್ಲೇ ಮಾತನಾಡಿದ್ದುಂಟು. ಅವರು ಯಾರೂ ಮೊಕದ್ದಮ್ಮೆ ಹೂಡಬೇಡಿ ಎಂದು ಬೇಡಿಕೊಂಡಿರಲಿಲ್ಲ ನಿಜ. ಆದರೂ ಅವರ ಹೃದಯ ವೈಶಾಲ್ಯತೆ ಎಂತಹದ್ದು ಅಂತೀರಿ. ಚುನಾವಣೆಯಲ್ಲಿ ಜನಗಳೇ ತಮ್ಮ ಆಳ್ವಿಕೆ ವಿಧಾನವನ್ನು ಮೆಚ್ಚಿ ಹರಸಿರುವುದರಿಂದ ಇದು ಬೇಕಿಲ್ಲವಂತೆ. ಜನತಾ ಜನಾರ್ದನ ತೀರ್ಪಿನ ಮುಂದೆ ನ್ಯಾಯಾಲಯದ ತೀರ್ಪು ಜುಜುಬಿ. ಹಿಂದೂತ್ವದ ಪ್ರತಿಪಾದಕರಾದ ಶ್ರೀಯುತರು ಕಿರಿಸ್ತಾನರ ಹೊಸ ವರ್ಷದ ದಿವಸ ಮಾಜಿ ಪ್ರಧಾನಿಗಳಿಗೆ ಈ ಕೃಪೆ ತೋರಿದ್ದಾರೆ. ಅಂದರೆ ದೇವೇಗೌಡರ ಆರೋಪದ ನಂತರವೂ ಮಾನ್ಯ ಯಡ್ಯೂರಪ್ಪನ ವರಮಾನ 'ಇನ್‌ಟ್ಯಾಕ್ಟ್' ಆಗಿ ಇದೆ ಎಂದಾಯಿತು! ಮೇವರಿಕ್ ಸಂಸ್ಥೆಯ ವಿಷಯದಲ್ಲಿ ಆಗಲೇ ಸ್ವಲ್ಪ ಮಾನನಷ್ಟ ಆಗಿತ್ತಲ್ಲ ಅಂದರೆ ಮೇಲಿನ ಮಾತನ್ನು ತಿದ್ದುಪಡಿ ಮಾಡಿ ಉಳಿದ ಮಾನ ಇನ್‌ಟ್ಯಾಕ್ಟ್ ಆಗಿದೆ ಅನ್ನಬಹುದೇನೋ!

ಪತ್ರಿಕಾ ವರದಿಗಳನ್ನು ಆಧರಿಸಿ ಹೇಳುವುದಾದರೆ ಭಾರತೀಯ ಜನತಾ ಪಕ್ಷದ ಜಯಭೇರಿಯಿಂದ ಯಡ್ಯೂರಪ್ಪನವರಿಗಿಂತಲೂ 'ಸಂತೃಪ್ತಿ' ಹೊಂದಿರುವ ವ್ಯಕ್ತಿ ಇನ್ನೊಬ್ಬರಿದ್ದಾರಂತೆ. ಹೀಗೆ ಸಂತೃಪ್ತಿಗೊಂಡ ಸಿದ್ಧರಾಮಯ್ಯನವರು ಕೇರಳದಲ್ಲಿ ಹೊಸ ವರ್ಷವನ್ನು ಸಂಭ್ರಮೋಲ್ಲಾಸದಿಂದ ಆಚರಿಸಿಕೊಂಡರಂತೆ. ಯಾಕೆ ಚೋರಿ ಹಾರಾಟ ಅಂದ್ರೆ ಶ್ಯಾನುಭೋಗರ ಮನೆಯಲ್ಲಿ ಬೀಗರೂಟ ಅಂದಂಗೆ ಭಾಜಪ ಗೆದ್ದರೆ ಕಾಂಗ್ರೆಸ್ಸಿಗನಿಗೆ ಖುಷಿ ಅಂತೆ! ಜನತಾ ಅಥವಾ, ಕರ್ನಾಟಕ ಜನತಾ ಅನ್ನೋ ಪಕ್ಷ ಕಟ್ಟಿ ಲೋಕಸಭೆ ಚುನಾವಣೆಯಲ್ಲಿ ಭಾಜಪ ಜೊತೆ ಭೋಜನ ನಡೆಸಲು ಎಲ್ಲಾ ತಯಾರಿ ನಡೀತಾ ಇದೆಯಂತೆ. ಅಲ್ಲ ಹಿರೀಮಗ ಆಗಬೇಡ ಹಿತ್ತಲ ಬಾಗಿಲು ಆಗಬೇಡ ಅನ್ನುವ ಮಾತಿದ್ದರೂ ಈ ಹಿರೀಮಗ ಹಲವು ಹನ್ನೊಂದು ಹೊಲಸುಗಳಿಗೆ ಪ್ರತ್ಯಕ್ಷದರ್ಶಿಯಾಗಿರುವ ಹಿತ್ತಲ ಬಾಗಿಲನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರಲ್ಲ ಅಂದರೆ ತಮ್ಮ 'ಧರ್ಮಾತೀತ' 'ಜಾತ್ಯತೀತ' ಇಮೇಜಿಗೆ ಧಕ್ಕೆ ಬರಬಾರದು ಅಂತಾರಂತೆ!

ಸಿದ್ಧರಾಮಯ್ಯನವರ ಪರಿಸ್ಥಿತಿ ನೋಡಿದರೆ ಜೆ.ಪಿ. ರಾಜರತ್ನಂ ಹೇಳುತ್ತಿದ್ದ ಕತೆ ನೆನಪಿಗೆ ಬರುತ್ತೆ ಅದೇನೆಂದರೆ....

ಒಂದು ದಿವಸ ಒಬ್ಬ ದಾರಿಯಲ್ಲಿ ಹೋಗುತ್ತಿದ್ದ. ಆ ದಾರಿಯಲ್ಲಿ ಪ್ರಾಯಶಃ ಮಕ್ಕಳ ಸಂಖ್ಯೆ ಹೆಚ್ಚಿರಬೇಕು. ಅವು ರಸ್ತೆ ಪಕ್ಕದಲ್ಲೇ 'ಪ್ರಸಾದ' ಇಟ್ಟಿದ್ದವು. ಒಂದು ಮಗುವಿನ 'ಪ್ರಸಾದ'ವನ್ನು ಇವನು ಕಾಣದೆ ತುಳಿದ. ಕಾಲಿಗೆ ಎಕ್ಕಡ ಇರಲಿಲ್ಲವಲ್ಲ ಆತನಿಗೆ ತಕ್ಷಣ ಅದು ತಿಳೀತು. ಕಾಲು ತೊಳೆದುಕೊಳ್ಳಲು ಕೆರೆಯ ಬಳಿಗೆ ಹೋದ. ನೀರಿನ ಪಕ್ಕವೇ ಇರುತ್ತವಲ್ಲ ಕಪ್ಪೆಗಳು ಅವು ಇವನನ್ನ ಕಂಡು 'ವಟ್ರವಟ್ರ' ಅಂದವಂತೆ. ಇವನಿಗೆ ತನ್ನ ಕಾಲು ಗಲೀಜು ಆಗಿರುವುದನ್ನೇ ಅವಮಾನಿಸ್ತಿರಾವೆ ಅನ್ನುಸ್ತು, 'ನನಗೇ ಅವಮಾನ ಮಾಡ್ತೀರ. ನಾನು ತೊಳ್ಕಳಾದೆ ಇಲ್ಲ ಹಿಂಗೇ ಇರ್ತೀನಿ' ಅಂತ ಬರಬರ್ತಾಂತ ಧೀರನಂಗೆ ಎದೆ ಉಬ್ಬಿಸಿ ಗಲೀಜು ಕಾಲಿನಲ್ಲೇ ಹಿಂದಕ್ಕೆ ಬಂದ. ನಷ್ಟ ಆದದ್ದು ಯಾರಿಗೆ? ಕಪ್ಪೆಗಳಿಗೊ? ಈ ಮನುಷ್ಯನಿಗೊ?

ಅನಾಕ್

ಎಚ್.ಎಲ್. ಕೇಶವಮೂರ್ತಿ

ಭಾಜಪ ಸೀರೆ ಭಸ್ಮ ಪ್ರಕರಣವು

ಸೀರೆಗಳಲ್ಲಿ ಹಲವು ವಿಧಾನ ಇದೆ.

ಕಾಟನ್ ಸೀರೆ, ಜಾರ್ಜೆಟ್ ಸೀರೆ, ಸಿಲ್ಕ್ ಸೀರೆ ಹೀಗೆ. ಇಂತಹವುಗಳಲ್ಲಿ ಯಾವುದನ್ನಾದರೂ 'ಚುನಾವಣೆ ಸಮಯದಲ್ಲಿ ನೀಡಿದರೆ ಅದು ಚುನಾವಣೆ ಸೀರೆ!

ಪಕ್ಷ ಸಿದ್ಧಾಂತಗಳ ಪಕ್ಷ: ಇತರೆ ಪಕ್ಷಗಳು ಬೆಳೆಸಿದ ವ್ಯಕ್ತಿಗಳನ್ನು ತನ್ನ ಪಕ್ಷಕ್ಕೆ ಹೈಜಾಕ್ ಮಾಡುವ ಹೊಸ ಪ್ರಜಾತಂತ್ರ ವಿಧಾನವನ್ನು ಪರಿಚಯಿಸಿತಲ್ಲ, ಅದರ ಫಲವಾಗಿ ಮದ್ದೂರಿನ ಶತಕೋಟಿ ಆಸ್ತಿ ಒಡೆಯ ಡಿ.ಸಿ. ತಮ್ಮಣ್ಣ ಅವರನ್ನೂ ಎಗರಿಸಿಕೊಂಡು ಹೋಯಿತು. ಗೆದ್ದರೆ ಮಂತ್ರಿ ಮಾಡುವ ಆಮಿಷವನ್ನೂ ಒಡ್ಡಿತು. ಮಾನ್ಯ ತಮ್ಮಣ್ಣನವರು ಕೇವಲ ಗಂಡಸರಿಗೆ ಹೆಂಡ ಹಣ ಬಾಡೂಟ ನೀಡಿದರೆ ಏನೇನೂ ಸಾಲದು, ಹೆಂಗಸರಿಗೆ ಸೀರೆಯನ್ನೂ ಹಂಚುವುದು ಗೆಲುವಿಗೆ ರಹದಾರಿಯಾಗುತ್ತದೆ ಎಂದು ಅನುಭವದಿಂದ ಅರಿತಿದ್ದವರು. ಹೀಗಾಗಿ ಇವೆಲ್ಲವನ್ನೂ ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದ್ದರು.

ಆದರೇನು ಮಾಡ್ತೀರಿ. ಈ ಹಾಳಾದ ಮಂಡ್ಯದ ಜನ ಬಾವಣಿಕೆ ಜನ. ಗಂಡನನ್ನು ಕಳೆದುಕೊಂಡ ಕಲ್ಪನಾ ಬಗ್ಗೆ ಅನುಕಂಪದ ಅಲೇನೆ ಎಬ್ಬಿಸಿದರು. ಹಿಂಗಾಗಿ ಅವನೇನು ಗುದ್ದಿ ತಗಂಡು ಗೇದಿದ್ನಾ, ಭ್ರಷ್ಟಾಚಾರದ ಹಣ ಅಂತೆಲ್ಲ ಸಬೂಬು ಹೇಳಿದೊ. ಹಂಚಿದ್ದೆಲ್ಲ ಹೊಳೆಯಲ್ಲಿ ಹುಣಿಸೆ ಹಣ್ಣು ತೇಯ್ದಂಗಾಯ್ತು.

ತತ್ವ ಸಿದ್ಧಾಂತ ಆಧಾರಿತ ಪಕ್ಷ ಅಲ್ಲವಾ. ಅದರ ಕೆಲವು ಕಾರ್ಯಕರ್ತರಿಗೆ ಇವೆಲ್ಲವನ್ನೂ ಪಡೆದೂ ವಿರೋಧ

"ಬರಿ ನನ್ನಂಥೊರಪ್ಪೆ ಅಲ್ಲ ಕಣೊ, ನನ್ನ
ಲೋಯರ್ಸ್ ಕೂಡ ಬಂಗಾರಪ್ಪನ ಜ್ವತೆ ಬತ್ತರೆ."

"ನಿನಿಗೂ ಪಾಲೋಯರ್ರಿದ್ದರೇನ್ನ?"

"ನೋಡಕ್ಕ, ಪ್ರತಿಯೊಬ್ಬ ಪ್ರಜೆಗೂ
ಲೋಯರ್ರು ಅಂತ ಇರತರೆ. ಪರೆಗ್‌ಜಾಂಪಲ್,
ಗೆ ಎಪ್ಪೊಂದು ಜನವುರೆ. ಆ ಪುಟ್ಟಕ್ಕ,
ಜಮ್ಮ, ಗೌರಮ್ಮ, ಬೋರಮ್ಮ, ಕಾಳಮ್ಮ
ತ ನಿನಿಗ್ಯಂಗೆ ಪಾಲೋಯರ್ರವುರೊ ಅಂಗೆ
ಗೂ ಅವುರೆ. ಅದೇ ತರ ನಮ್ಮ
ಗಾರಪ್ಪನಿಗೂ ನಮ್ಮ ತಾಲೋಕಲ್ಲೇ ಆರು
ಪುರ ಜನವುರೆ ಗೊತ್ತೆ."

"ಆರು ಸವುರ ತಗಂಡು ಏನು ಮಾಡ್ತಿಲಾ?"

"ಕಾಂಗ್ರೆಸ್ಸಿಗೆ ಟೋಟ್ಲು ಮಾಡೊ ಉಗ್ರಿ.
ಡೀ ಕರ್ನಾಟಕದಲ್ಲಿ ಬಂಗಾರಿ ಪಾಲೋಯರ್ರು
ಗ್ರೆಸ್ಸಿಗೆ ಬಂದ್ರೆ ಸಿದ್ದರಾಮಯ್ಯ ಯತ್ತಗಾರ
ೋಗಲೇಳು."

"ಅವುನ್ಯತ್ತಗೋದ? ಅವುನು ಸುದ್ದಿಲವಲ್ಲಾ?"
ದ ಸೀರ.

"ಅವುನು ಕಾಂಗ್ರೆಸ್ಸಿಗೆ ಒಗ್ಗದಿಲ್ಲ ಚಿಗಪ್ಪ.
ಾದಿಂದ ದ್ಯಾವೇಗೌಡ್ರ ಜ್ವತೆ ರಾಜಕೀಯ
ಾಡಿ ಮಾಡೀ, ಅದ್ನೆ ಬ್ಯಳಿಸಿಗಂಡವುನೆ. ಅದ್ಕೆ
ವುನು ಕಾಂಗ್ರೆಸ್ಸಿನೋರ ಜ್ವತೆ ಕಾಣಿಸಗಳದಿಲ್ಲ"
ದ ವಾಟಿಸ್ಸೆ.

"ಅಂಗಂದ್ರಾದತೇನ್ನ? ಕಾಂಗ್ರೆಸ್ಸಿಗೆ ಬರದಕಿಂತ
ದ್ನೆ ಯೋಚನೆ ಮಾಡಬೇಕಾಗಿತ್ತು" ಎಂದ
ಜವಮಾವ.

"ಒಂದೊಂದು ಸತಿ ಅಂಗೆ ಮಿಸ್ಸಾಯ್ತದೆ
ಡಪ್ಪ, ಏನೂ ಮಾಡಕ್ಯಾಗದಿಲ್ಲ. ಸಿದರಾಮಯ್ಯನ್ನ
ಗ್ರೆಸ್ಸಿಗೆ ಕರಿವಾಗ ನಾವ್ಯಲ್ಲ ಇದ್ದಿವಿ ಬಾ
ದ್ರು. ಬಂದೇಟಿಗೆ ಕರಕಂಡು ಬಂದೋರು
ತ್ತಗೋದ್ರು, ಇವುನತ್ತಗೆ ಮನಿಗೋದ."

"ಮನಿಗೋದ್ರೆ ಯಾರು ಮಾತಾಡುಸ್ತರ್ಲ? ಆ ಕಾಲವೊಯ್ತು. ಈಗ ಕಾಲ ಬದ್ಲಾಗ್ಯದೆ. ನೀನಿರತಕ್ಕೆ ತಂದು ಯಡೆಯಿಕ್ಕಕ್ಕೆ ನೀನೇನು ಮುನಿಯಪ್ಪನೊ, ಇಲ್ಲಾ ಮೂಢ್ಯಗಿರಿಯಪ್ಪನೊ ಹೇಳು."

"ಅದಿರ್ಲಿ ಮಾವ, ಇಡೀ ಕಾಂಗ್ರೆಸ್ಸಿನೋರ್ಯಲ್ಲ ಹೋರಾಡಿ ಚಾಮುಂಡೇಶ್ವರಿಲಿ ಗೆಲ್ಲುಸ್ತೇಯಿದ್ರೆ ಇವತ್ತೇನಾಗಿರತಿದ್ದ? ಅದೇನಾರ ಯೇಚ್ನೆ ಮಾಡಿದ್ದನೆ?" ಎಂದ ಉಗ್ರಿ.

"ಮುಂದೇನು ಮಾಡ್ತನಪ್ಪ?"

"ಬಿಜೆಪಿಗೋಗಬವುದು."

"ಬಿಜೆಪಿಗ್ಯಾಕೋದನೊ? ಅವುನಾಡೊ ಮಾತಿಗೂ ಬಿಜೆಪಿಗೂ ಸೆಟ್ಟಾಗದಿಲ್ಲ."

"ನೀನಂಗಂತಿಯಲ್ಲೊ ವಾಟಿಸ್ಸೆ, ಮಾದೇಗೌಡ್ರ ಮಾತಿಗೂ ಬಿಜೆಪಿಗೂ ಯಾವತ್ತಾರ ಸೆಟ್ಟಾಗಗಿಂತ್ತೇನೊ? ಅಂಥೊರೆ ಬಿಜೆಪಿಗೋಗಿ ಗೂಸಾ ತಿಂದ್ರಪ್ಪ."

"ವಳ್ಳೇರ ಮಾನ ಹಳ್ಳಿಲೋಯ್ತು ಅಂತ ಇವುರ್ಯಾಕಪ್ಪ ಅಲ್ಲಿಗೋಗಬೇಕಾಗಿತ್ತು?" ಎಂದ ಸೀರ.

"ಮಗನಿಗೋಸ್ಕರ ಹೋದ. ಈಗ ಮಗನಿಗೋಸ್ಕರ ಯಲ್ಲಾನು ಸಯಿಸಿಕೋಬೇಕಾಗ್ಯದೆ" ಎಂದ ಉಗ್ರಿ.

"ಇವತ್ಯಲ್ಲಾರು ಅಂಗೆ ಅಲ್ಲವೇ. ದ್ಯಾವೇಗೌಡ ಮಾಜಿ ಪ್ರಧಾನಿ. ಮಧುಗಿರಿಲಿ ಗಲ್ಲಿಗಲ್ಲಿ ತಿರುಗ್ತನೆ ಸ್ಸೆಸೆ ಗೆಲ್ಸಕ್ಕೆ; ಅಂಗೆ ಯಸ್ಸೆಂ ಕಿಷ್ನ ಮದ್ದೂರ ಮೂಲೆ ಮುದುಕುಲ ಬುಡದಂಗೆ ತಿರುಗ್ತನೆ ತಮ್ಮನ ಮಗನಿಗಾಗಿ. ಅಂಗೆ ಮಾದೇಗೌಡ್ರು ಅಂಗಿ ಬಟ್ಟೆನ್ಯಲ್ಲ ಹರಿಸಿಗಂಡು ಕುಂತವುರೆ ಮಗನಿಗಾಗಿ. ಆ ಲ್ಯವೆಲ್ಲಿಗೆ ಬಂದದೆ ರಾಜಕಾರಣ, ಇದ್ಯಾರಿಗೇಳನಾ?"

" !!" ■

ಕ್ಕೆ ಮತ ನೀಡಿದವರು ಮಾಡಿದ ಕಾರ್ಯ ಘನಘೋರ
ಪರಾಧವಾಗಿ ಕಾಣಿಸಿತು. ಪಡೆದ ಮೇಲೆ ಮತ
ಡಬೇಕಾದ್ದು ನ್ಯಾಯ ಅನ್ನಿಸಿತು. ಗಂಡಸರನ್ನು ಕೆಣಕಿದರೆ
ಾಯವಾಗಬಹುದೆಂಬ ಹುಷಾರಿಯೇನೋ ಇತ್ತು,
ರೂ ಮನಸ್ಸು ಅನ್ಯಾಯದ ವಿರುದ್ಧ ಕಿಡಿ ಕಾರುತ್ತಲೇ
ತ್ತು, ಹೆಂಗಸರ ಮೇಲೆ ತಮ್ಮ ಗಂಡಸುತನ ತೋರಿಸಲು
ರ್ಮಾನಿಸಿದರು.

ಮಂಗಳವಾರ ರಾತ್ರಿ ಸಮಯ. ತತ್ವ ಸಿದ್ಧಾಂತಗಳ
ದ ಕಾರ್ಯಕರ್ತರು ಗೆಜ್ಜಲಗೆರೆ ಕಾಲೋನಿಗೆ ನುಗ್ಗಿದರು.
ನದಿಂದ ಗಳಿಸಿದ್ದ ಅಶ್ಲೀಲ ಬೈಗುಳವನ್ನು ಮಹಿಳೆಯರ
ೀಲೆ ಪ್ರಯೋಗಿಸಿದರು. ಈ ಧೀರರು ಬೆದರಿಕೆಯನ್ನೂ
ಕಿದರು.

ಮೊದಲೇ ಕಾಲೋನಿ ಜನ. ತತ್ವ ಸಿದ್ಧಾಂತ
ರಿಕೆಗಳಿಗೆ ಬೆದರಿ ಮೂಲೆ ಸೇರಬೇಡವೆ. ತಿರುಚೋಕಿ
ನ ನೋಡಿ. ಚುನಾವಣಾ ಸೀರೆಗಳನ್ನೆಲ್ಲ
ಮಂಪ್ರೇರಣೆಯಿಂದ ಹೊರಕ್ಕೆ ತಂದು ಗುಡ್ಡೆ ಹಾಕಿದರು.
ಕಿ ಹಚ್ಚಿದರು.

ರಾಷ್ಟ್ರೀಯ ಆಸ್ತಿಯನ್ನು ಬೆಂಕಿ ಹಾಕಿ ಸುಟ್ಟದ್ದು
ಘೋರ ಅನಚಾರ, ಇವರನ್ನು ಕೂಡಲೆ ಬಂಧಿಸಿ
ಸಬೇಕು ಎಂದು ಯಾವ ತತ್ವ ಸಿದ್ಧಾಂತಿಯೂ
ಳಿರುವುದು ವರದಿಯಾಗಿಲ್ಲ!

ಅಲ್ಲ ಹೀಗೆ ಸೀರೆಗಳನ್ನು ಸುಡುವುದರ ಬದಲು
ಸಿದ್ಧಾಂತ ಪಕ್ಷದ ಪ್ರಚಾರಕರಿಗೇ ಉಡಿಸಿದ್ದರೆ ಜೆಲ್ಲಾ
ಂತ್ರಿಗಳಿಗೆ ಆನಂದ ಆಗುತ್ತಿತ್ತೋ ಏನೋ!

ಗಾಂಧಿ ನುಡಿ!

ಗಾಂಧಿ ಹೆಸರು ಎತ್ತಿದರೇ ತತ್ವ ಸಿದ್ಧಾಂತಿಗಳಿಗೆ
ರ್ಶನ್ನು.

ಭಾಜಪ ಸೀರೆ ಭಸ್ಮ ಪ್ರಕರಣ ನೋಡಿದರಲ್ಲ, ಈಗ
ಕತೆ ಕೇಳಿ.

ಸೋಮವಾರ, ಮತ ಎಣಿಕೆ ಪ್ರಕ್ರಿಯೆ ನಡೆಯುತ್ತಿತ್ತು.
. ರವಿ ಎಂಬ ಪಡ್ಡೆಹೈದನ ಉಸ್ತುವಾರಿಯಲ್ಲಿ ನಡೆದ
ನಾವಣೆ ಇದು. ಕೋಮುವಾದದ ವಿಷವನ್ನು
ವರಲ್ಲಾದರೂ ಬಿತ್ತಿರಬೇಕು. ಗೂಂಡಾಗಿರಿಯೇ ರಾಜರಸ್ತೆ
ನ ಪಡೆ ಅದಾಗಿರಬೇಕು. ಯಾಕೆಂದರೆ ಯಾವ
ನಾವಣೆಯಲ್ಲಿಯೂ ಇಂತಹ ಘಟನೆ ಸಂಭವಿಸಿರಲಿಲ್ಲ.

ನಡೆದದ್ದಾದರೂ ಏನು?

ಡಿ.ಸಿ. ತಮ್ಮಣ್ಣ ಸೋಲು ಖಾತರಿಯಾಗಿತ್ತು.

ಹುಡುಕಾಡಿತು ಈ ಗೂಂಡಾಪಡೆ. ಎಂಭತ್ತು

ಮೀರಿದ ಜಿ. ಮಾದೇಗೌಡರನ್ನ. ಸುಳಿವು ಸಿಕ್ಕಿತು. ನುಗ್ಗಿತು ಈ ಐವತ್ತು ಜನರ ಹೇಡಿ ಹಿಂಡು ಗಾಂಧಿಭವನದ ಕಡೆ. ಗೌಡರ ಬಟ್ಟೆ ಹರಿದರು. ಕಾರು ಜಜ್ಜಿದರು. ಗಾಂಧಿ ಭವನಕ್ಕೆ ಕಲ್ಲು ಹೊಡೆದರು. ನಂತರ ಪರಾರಿಯಾದರು.

ಸಾರ್ಥಕ ಆಯಿತು ಅವರ ಜನ್ಮ!

ಯಾಕೆ ಈ ದೌರ್ಜನ್ಯ?

ಗೌಡರು ಭಾಜಪ ವಿರುದ್ಧ ಕೆಲಸ ಮಾಡಿದ್ದರು!

144 ನೇ ಸೆಕ್ಷನ್ ಜಾರಿಯಲ್ಲಿತ್ತು, ಆದರೂ ಐವತ್ತು ಅರವತ್ತು ಜನರ ಗುಂಪು ಸೇರಿತ್ತು!

ಇರಲಿಲ್ಲವೆ ಪೊಲೀಸರು?

ಗಾಂಧಿಭವನದ ನಾಶ ಅವರ ತತ್ವ ಸಿದ್ಧಾಂತ. ಸರಿ. ಅದರ ನಿರ್ಮಾಪಕನೂ ದೌರ್ಜನ್ಯಕ್ಕೊಳಗಾಗಬೇಕೆ?

ಮುಖ್ಯಮಂತ್ರಿಯಾಗಿ ಎಲ್ಲರೂ ಸುರಿಸಿದರು ಮೊಸಳೆ ಕಣ್ಣೀರು!

ಭಾಜಪ ಜಿಲ್ಲಾ ಅಧ್ಯಕ್ಷ ಹೇಳಿಕೆ- 'ಈ ಪುಂಡಾಟ ನಮ್ಮ ಪಕ್ಷದ ಕಾರ್ಯಕರ್ತರದ್ದಲ್ಲ.'

ಇರಬೇಕು. ಅವರೆಲ್ಲ ಹೊಸ ವರ್ಷದ ಆರಂಭದ ದಿವಸ ಮದ್ಯ ವ್ಯಸನಿಗಳಿಂದ ಭಾರತೀಯ ನಾರಿಗೆ ಆಗುವ ಅಪಚಾರ ತಡೆಯಲು 'ನೈತಿಕ ಪೊಲೀಸ್' ಕೆಲಸದಲ್ಲಿ ತಯಾರಿ ತೆಗೆದುಕೊಳ್ಳುತ್ತಿದ್ದರೇನೋ!

ಇವರಿಗೆ ಈ ಅಧಿಕಾರ ನೀಡಿದವರು ಯಾರು?

ದಕ್ಷ ಆಡಳಿತ ನೀಡುತ್ತಿದ್ದೇನೆಂದು ಬೀಗುತ್ತಿರುವ ಯಡ್ಯೂರಪ್ಪ ಉತ್ತರಿಸಲಿ.

ದೇವರಿಗೆ ಮೂರೂ ಇಲ್ಲ!

ನಾಚಿಕೆ, ಮಾನ, ಮರ್ಯಾದೆ ಎಲ್ಲವನ್ನೂ ಬಿಟ್ಟವನು ಊರಿಗೆ ದೊಡ್ಡವನು. ಭಾಜಪ ವಕ್ತಾರರ, ಮುಖಂಡರ ಮಾತುಕೇಳುತ್ತಿದ್ದರೆ ಇದು ನಿಜ ಅನ್ನಿಸುತ್ತೆ.

ಆ ಮೂರೂ ಇಲ್ಲ ಅಲ್ಲ ಇದು.

ಇದನ್ನು ಚಿಕ್ಕಮಗಳೂರಿನಲ್ಲಿ ಹೇಳಿದವರು ಸಾಣೆಹಳ್ಳಿ ಪಂಡಿತಾರಾಧ್ಯ ಸ್ವಾಮಿಗಳು.

ಕಿರಿಸ್ತಾನದ ದೇವರಿಗೆ ಕಣ್ಣಿಲ್ಲ. ಅದಕ್ಕೇ ಕಿರಿಸ್ತಾನರು ಚರ್ಚುಗಳಲ್ಲಿ ಮೋಂಬತ್ತಿ ಬೆಳಗಿಸುತ್ತಾರೆ.

ಮುಸಲ್ಮಾನ ದೇವರಿಗೆ ಕಿವುಡು. ಅದಕ್ಕೇ ಧ್ವನಿವರ್ಧಕ ಹಾಕಿ ದಿನದಲ್ಲಿ ಅನೇಕ ಸಲ ಕೂಗುತ್ತಾರೆ.

ಹಿಂದೂ ದೇವರುಗಳಿಗೆ ಕಾಲಿಲ್ಲ. ಅದಕ್ಕೇ ಅವರನ್ನ ಪಲ್ಲಕ್ಕಿಯಲ್ಲಿ ಹೊತ್ತು ಕೊಂಡೇ ಹೋಗಬೇಕು! ■


ಮರೆಯುವ ಮುನ್ನ



■ ಪಿ. ಲಂಕೇಶ್ -ಏಪ್ರಿಲ್ 7, 1991

'ಜಗದ್ಗುರು'ವಿನ ಔದಾರ್ಯ

ಡಿಲನ್ ಥಾಮಸ್ ಮತ್ತು ರಾಯ್ ಕ್ಯಾಂಪ್‌ಬೆಲ್ ಎಂಬ ಇಬ್ಬರು ತರುಣ ಇಂಗ್ಲಿಷ್ ಕವಿಗಳು.... ದಿವಾಳಿ ಸ್ಥಿತಿಯಲ್ಲಿದ್ದರು. ಇಬ್ಬರೂ ಪ್ರತಿಭಾವಂತ ಕವಿಗಳು. ಡಿಲನ್ ಥಾಮಸ್ ತನ್ನ ಸಂಕೀರ್ಣ, ತೀವ್ರ ಕವನಗಳಿಂದ ಹೆಸರು ಮಾಡಿದ್ದ; ರಾಲ್ ಕ್ಯಾಂಪ್‌ಬೆಲ್ ತನ್ನ ಸರಳ, ಹರಿತ ಕವನಗಳಿಗೆ ಹೆಸರಾಗಿದ್ದ. ಇಬ್ಬರೂ ನಿರುದ್ಯೋಗಿಗಳು, ಕಾಸಿಲ್ಲದವರು. ಒಂದು ದಿನ ಗೆಳೆಯರನ್ನೆಲ್ಲ ಕಂಡು ಆದಷ್ಟು ಹಣ ಎತ್ತಬೇಕೆಂದು ತೀರ್ಮಾನಿಸಿದರು. ಸಚಿವಾಲಯಗಳಲ್ಲಿ, ಕಾರ್ಖಾನೆಗಳಲ್ಲಿ ಇದ್ದ ಸ್ಥಿತಿವಂತ ಗೆಳೆಯರನ್ನೆಲ್ಲ ಕಂಡರು. ಕಾಸು ಕೂಡ ಹುಟ್ಟಲಿಲ್ಲ. "ರಾಯ್, ನೀನು ಬಂದರೆ ಯಾರೂ ಹಣ ಕೊಡೊಲ್ಲ, ನೀನು ಇಲ್ಲೇ ಇರು" ಎಂದು ಡಿಲನ್ ಥಾಮಸ್ ಒಬ್ಬನೇ ಹೋಗಿ ಪ್ರಯತ್ನಿಸಿದ. ಆಗಲೂ ಯಾರೂ ಕೊಡಲಿಲ್ಲ. ದಿಕ್ಕೆಟ್ಟು ನಿಂತ ಇಬ್ಬರೂ ಯೋಚಿಸಿದರು. ರಾಯ್ ಹೇಳಿದ, "ಆ ಜಗದ್ಗುರುವನ್ನು ನೋಡಿದರೆ ಹೇಗೆ?"



"ಯಾರನ್ನ, ಬಿಷಪ್‌ನನ್ನೇ?"

"ಹೌದು. ಆ ಜಗದ್ಗುರು ಪದ್ಯದಲ್ಲೂ ಸಂನ್ಯಾಸಿ, ಜೀವನದಲ್ಲೂ ಹಾಳು ಸಂನ್ಯಾಸಿ ಅಂತಾರೆ... ಒಂದು ಛಾನ್ಸ್ ನೋಡೋಣ" ಅಂದ.

ಇಬ್ಬರೂ ನೋಡಿದ್ದು ಟಿ.ಎಸ್. ಎಲಿಯಟ್‌ನನ್ನು. ಎಲಿಯಟ್ ಎಂದಿನಂತೆ ಕುತೂಹಲದಿಂದ, ಮುಗುಳ್ನಗೆಯೊಂದಿಗೆ ಅವರ ಬೇಡಿಕೆ ಆಲಿಸಿದ. ಕೊನೆಯಲ್ಲಿ ಆತ ಎಷ್ಟು ಹಣ ಕೊಟ್ಟನೆಂದರೆ, ಅವರಿಬ್ಬರಿಗೂ ಕೆಲಸ ಸಿಗುವವರೆಗೆ ಆ ಹಣ ಸಾಕಾಯಿತು.

ತರುಣ ಕವಿಗಳಿಬ್ಬರೂ ಎಲಿಯಟ್‌ನ ಔದಾರ್ಯದಿಂದ ಮಂತ್ರಮುಗ್ಧರಾದರು; ಕೆಲಸ ಸಿಕ್ಕೊಡನೆ ಹಣ ಹಿಂದಿರುಗಿಸಿ ಜೀವನಪರ್ಯಂತ ಆತನನ್ನು ನೆನಪಿಸಿಕೊಳ್ಳುತ್ತಿದ್ದರು.

ಅಮೂರ್



ಜೆ.ಎಸ್. ಅಮೂರ್ ಅವರನ್ನು ಬಹಳ ದಿನ ನೋಡಿರಲಿಲ್ಲ. ಅಮೂರ್ ಅವರ ಪುಸ್ತಕಗಳನ್ನು ನೀವು ಓದಿರಬಹುದು. ನಮ್ಮ ಉತ್ತಮ ವಿಮರ್ಶಕರಲ್ಲಿ ಅವರು ಒಬ್ಬರು. ಮೊನ್ನೆ ನಮ್ಮ ಕಚೇರಿಗೆ ಬಂದರು; ಚಟಪಟ ಹರಳು ಹುರಿದಂತೆ ಮಾತಾಡಿದರು. 'ಸಂಸ್ಕಾರ' ಕುರಿತು, ಚಿನಾವು ಆಚಿಬೆ ಕುರಿತು, ಟಾಲ್‌ಸ್ಟಾಯ್ ಕುರಿತು ಮಾತಾಡಿದರು. ಸಾಹಿತ್ಯದ ವಿದ್ಯಾರ್ಥಿ ಸಾಹಿತ್ಯ ಕುರಿತು ಮಾತಾಡುವುದಕ್ಕೂ, ಸಾಹಿತ್ಯೇತರ ವ್ಯಕ್ತಿ ಮಾತಾಡುವುದಕ್ಕೂ ವ್ಯತ್ಯಾಸವಿರುತ್ತದೆ. ಸೂಕ್ಷ್ಮಜ್ಞ ವಿಮರ್ಶಕನ ಮಾತಿಗೂ, ಕಾದಂಬರಿಕಾರನ ಮಾತಿಗೂ ವ್ಯತ್ಯಾಸವಿರುತ್ತದೆ. ಅಮೂರ್ ಸಾಹಿತ್ಯದ ವಿದ್ಯಾರ್ಥಿ. ಸೂಕ್ಷ್ಮಜ್ಞ . ಕಾದಂಬರಿಗಳ ಬಗ್ಗೆ ಮಾತಾಡುವಾಗ ನಾನು ಹೇಳಿದೆ, "ನಾನು ವಿದ್ಯಾರ್ಥಿಯಾಗಿದ್ದಾಗ 'ವಾರ್ ಅಂಡ್ ಪೀಸ್' ಓದಲೇಬೇಕಾಗಿ ಬಂದಿದ್ದರಿಂದ ಓದಿದೆ... ಮತ್ತೆ ಓದಲು ಹೆದರಿಕೆಯಾಗುತ್ತೆ, ಅದು ಅಷ್ಟೊಂದು ದೊಡ್ಡ ಪುಸ್ತಕ" ಅಂದೆ. ನಾನು ಬೆಚ್ಚಿಬೀಳುವಂತೆ ಅಮೂರ್ ಹೇಳಿದರು, "ನಾನು ಆ ಕಾದಂಬರಿಯನ್ನು ವರ್ಷಕ್ಕೊಮ್ಮೆ ಕಡ್ಡಾಯವಾಗಿ ಓದುತ್ತೇನೆ!"

ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ 'ನೆನಪು' ಎಂಬ ಲೇಖನದಲ್ಲಿ ಲಂಕೇಶರು ವಿದ್ಯಾರ್ಥಿಯಾಗಿದ್ದಾಗ ಬರೆದಿದ್ದ 'ಜೋಗದ ಲೇಡಿ' ಎಂಬ ಪದ್ಯವನ್ನು ಮೆಚ್ಚಿದ್ದನ್ನು ನೆನಪಿಸಿಕೊಂಡಿರುವ ಯು.ಆರ್.ಅನಂತಮೂರ್ತಿಯವರು ಆಗಲೇ ಲಂಕೇಶರಿಗೆ 'ಅದ್ಭುತವಾದ ಕನ್ನಡ ಭಾಷೆಯ ಸೌಭಾಗ್ಯ ಒದಗಿತ್ತು' ಎಂದಿದ್ದರು. ಅದನ್ನು ನೋಡಿ ಬಹಳಷ್ಟು ಓದುಗರು ಆ ಪದ್ಯವನ್ನು ಪ್ರಕಟಿಸಬೇಕೆಂದು ಕೋರಿದ್ದರಿಂದ ಇಲ್ಲಿ ನೀಡಿದ್ದೇವೆ.

ಜೋಗದ ಲೇಡಿ

ನೆಸು ನೀಲಿಯ ಶರವಾನಿಯ ಮುದುಕ ಬಡಿದ ಮದ್ದಳೆ;
ಸುತ್ತ ಬೆಳಕ ಬುಗುರಿ ಮೂರು;
ಆವಳು ಕುಣಿಯುತ್ತಿದ್ದಳೆ?

ಗುರುಕಿದುಟಿಯ ಸುತ್ತಿಗೆ,
ಬೆಣಚುಗಲ್ಲು ನೆತ್ತಿಗೆ,
ತೆರೆಯುತ್ತಿರಲು ತಲೆಯ ಮೇಲೆ ಮಳೆಯು ಬಲ್ಲ ಹೊತ್ತಗೆ
ಬೆಳ್ಳಗಿರಿಯ ಕುದುರೆಯೇರಿ ಮಳೆಯು ಬರುವ ಹೊತ್ತಿಗೆ.
ಕಾಲುಂಗುರ, ಕೈಕಡಗ ನೂಪುರಗಳು, ಗೆಜ್ಜೆ
ಅರಳುತ್ತಿರೆ ಸಿಹಿಗಲ್ಲದಿ ಸುಳಿಗೊಂಡಿಹ ಲಜ್ಜೆ
ಆ ಬಂಡೆಗೆ ಈ ಬಂಡೆಗೆ ಜಾರುತ್ತಿರೆ ಹೆಜ್ಜೆ
ರಂಜದಿಂದ ರಂಜಕೆ,
ಹನಿಯ ಉಡುಪು ಮಿಂಚುತಿರಲು
ಸಂಗೀತದ ರಂಗಕೆ;
ಮುತ್ತ ಚಿಪ್ಪ ಒಡೆದು ಬಂದ ನರಸಿಂಹನ ಕುವರಿಯೀಕೆ
ಇವಳ ಮುದ್ದು ಮೈಯಿನಲ್ಲಿ ಮಿಂಚು-ಮಿಂಚು ನೆತ್ತರು
ಕೋಟಿ ಕಂದರಿಲ್ಲಿ ಕುಳಿತು ಸಂತೋಷಕ್ಕೆ ಅತ್ತರು.


ಬೆವರನೊರಸಿಕೊಳ್ಳುತೊಮ್ಮೆ ತುಟಿಗಳಲ್ಲಿ ನಕ್ಕರೆ,
ತುಂಬಿಕೊಳ್ಳುತ್ತಿತ್ತು ನನ್ನ ಸ್ವಪ್ನ ರಸದ ಸಕ್ಕರೆ.
ಮಬ್ಬುಗೊಂಡ ದೃಷ್ಟಿಯೆದುರು
ದೊಡ್ಡದೊಂದು ಗೋಪುರ;
ವ್ಯಕ್ತಿಯೊಂದು ಬಂದ ಸದ್ದು; ಕ್ಷಣಿಸುತ್ತಿರುವ ನೂಪುರ;
ಹರ್ಷಜಲದ ತೇರು ಹರಿದು ಬಂದಿತಣ್ಣ ಬಂದಿತು,
ಚಕ್ರವರ್ತಿ ಕಣ್ಣ ತೆರೆಯುವಲ್ಲಿ ದೀಪ ನಂದಿತು;
ಬೆಳೆದು ಬೆಳೆದು ನಿಲ್ಲುತ್ತಿತ್ತು ತಾಜಮಹಲ ರೂಪ,
ನೀರ ನೃತ್ಯ ಸಾಗುತ್ತಿತ್ತು;
ತೆರೆಯುತ್ತಿತ್ತು ಈತನೆದುರು ಸಾವಿರದಿಂಯ ಕೂಪ.



ಸತ್ಯಂ ಮಿಥ್ಯಂ ಸರ್ವವೂ ಸಂಪತ್ತು ನಿಮಿತ್ತಂ!

ಭಾರತದ ನಾಲ್ಕನೆಯ ಅತಿದೊಡ್ಡ ಸಾಫ್ಟ್‌ವೇರ್ ಕಂಪನಿ ಎನಿಸಿರುವ 'ಸತ್ಯಂ' (ಸತ್ಯಂ ಕಂಪ್ಯೂಟರ್ ಸರ್ವಿಸಸ್ ಲಿಮಿಟೆಡ್) ತೊಂದರೆಗೆ ಸಿಲುಕಿಕೊಂಡಿದೆ.

ಇದಕ್ಕೆ ಅದರ ಪ್ರಮುಖ ಸಾಂಸ್ಥಿಕ ಹೂಡಿಕೆದಾರರು ಮತ್ತು ಶೇರುದಾರರೇ ಮುಂಚೂಣಿಯಲ್ಲಿ ನಿಂತು, ಸತ್ಯಂ ಕಂಪನಿಯನ್ನು ಬೇರೊಂದು ಕಂಪನಿಯ ಮಡಿಲಿಗೆ ಹಾಕಲು ಶತಾಯಗತಾಯ ಯತ್ನ ಮಾಡುತ್ತಿದ್ದಾರೆ. ಅಂದರೆ ಸತ್ಯಂನಲ್ಲಿ ಪ್ರಮುಖ ಬಂಡವಾಳದಾರರಾಗಿರುವರೇ ಆ ಕಂಪನಿಯನ್ನು ಮಾರಲು ನೋಡುತ್ತಿದ್ದಾರೆ!



ಮೊದಲಿಗೆ ಒಂದಿಷ್ಟು ಇತ್ತೀಚಿನ ಕತೆ ಕೇಳಿಬಿಡಿ: ಕಳೆದ ವಾರವಷ್ಟೇ ವಿಶ್ವಬ್ಯಾಂಕ್ ತನ್ನ ಗ್ರಾಹಕನಾಗಿದ್ದ 'ಸತ್ಯಂ' ಅನ್ನು ಎಂಟು ವರ್ಷಗಳ ಅವಧಿಗೆ ಕಪ್ಪುಪಟ್ಟಿಗೆ ಸೇರಿಸಿದೆ. ವಿಶ್ವಬ್ಯಾಂಕ್‌ನಿಂದ ಪ್ರತಿವರ್ಷ ಸಿಗುತ್ತಿದ್ದ ಸಾವಿರಾರು ಮಿಲಿಯನ್ ಡಾಲರ್‌ಗಳ ಮೊತ್ತದ ಪ್ರಾಜೆಕ್ಟ್‌ಗಳು ಈಗ ಸತ್ಯಂ ಕೈತಪ್ಪಿ ಹೋಗಿವೆ. ಇಷ್ಟೇ ಆಗಿದ್ದರೆ ಪರವಾಗಿಲ್ಲ, ಇದೆಲ್ಲ ಬ್ಯುಸಿನೆಸ್‌ನಲ್ಲಿ ಕಾಮನ್ ಎನ್ನಬಹುದಿತ್ತು. ಆದರೆ ಸತ್ಯಂ ವಿಶ್ವಬ್ಯಾಂಕ್‌ನ ಅಂಕಿ-ಅಂಶ, ವಿವರಗಳ ಕಳ್ಳತನದ ಕಳಂಕವನ್ನು, ಜೊತೆಗೆ ಪ್ರಾಜೆಕ್ಟ್ ಗಿಟ್ಟಿಸಲು ವಿಶ್ವಬ್ಯಾಂಕ್ ಅಧಿಕಾರಿಯೋರ್ವನಿಗೆ ಲಂಚ ನೀಡಿದ ಕಳಂಕವನ್ನು ಹೊತ್ತುಕೊಂಡಿದೆ.

ಮಾತೆತ್ತಿದರೆ ಮೌಲ್ಯವರ್ಧನೆ (Value addition), ಪಾರದರ್ಶಕತೆ ಎಂದು ಅಣಿಮುತ್ತು ಉದುರಿಸುವ ನವಸಾಹುಕಾರಶಾಹಿ ಭಾರತೀಯ ಐಟಿ ಕಂಪನಿಗಳ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಪಡೆದಿರುವ ಸತ್ಯಂನ ಇನ್ನೊಂದು ಮುಖವೀಗ ಬಯಲಾಗಿದೆ.

ಇದಕ್ಕೂ ಮೊದಲು 'ಸತ್ಯಂ' ತನ್ನಲ್ಲಿ ಗುಡ್ಡೆ ಬಿದ್ದಿರುವ ಅಪಾರ ಮೊತ್ತದ ಹಣವನ್ನು ವಿನಿಯೋಗಿಸಿ, ಮೈತಾಸ್ ಇನ್‌ಫ್ರಾಸ್ಟ್ರಕ್ಚರ್ ಮತ್ತು ಮೈತಾಸ್ ಪ್ರಾಪರ್ಟೀಸ್ ಎಂಬ ಸಂಸ್ಥೆಗಳನ್ನು ಖರೀದಿಸಲು ಹೊರಟಿತ್ತು. ಇವೆರಡೂ ಕಂಪನಿಗಳು ಸತ್ಯಂನ ಸಿಇಒ ಮತ್ತು ಸಂಸ್ಥಾಪಕ ಅಧ್ಯಕ್ಷ ರಾಮಲಿಂಗರಾಜುರವರ ಮಕ್ಕಳವೇ ಆಗಿದ್ದವು. ಆಗಲೇ ಸತ್ಯಂನ ಶೇರುದಾರರು ಎಚ್ಚೆತ್ತುಗೊಂಡು ಈ ಕೌಟುಂಬಿಕ ಸಂಪತ್ತು ವೃದ್ಧಿಯ ವ್ಯವಹಾರವನ್ನು ವಿರೋಧಿಸಿ, ಸತ್ಯಂನ ಕಾರ್ಯಾಚರಣೆಯನ್ನು ನಿಲ್ಲಿಸಿದ್ದರು.

ಆ ವಿವಾದದ ಹೊತ್ತಲ್ಲೇ ಸತ್ಯಂನ ಶೇರುಗಳು ಶೇ.40ರಷ್ಟು ಕುಸಿತ ಕಂಡಿದ್ದವು. ಈಗ ಶೇರುದಾರರ, ಪ್ರಮುಖ ಬಂಡವಾಳಗಾರರ ವಿಶ್ವಾಸ ಕಳೆದುಕೊಂಡಿರುವ, ವಿಶ್ವಬ್ಯಾಂಕ್‌ನಿಂದ ಛೀಮಾರಿ ಹಾಕಿಸಿಕೊಂಡಿರುವ 'ಸತ್ಯಂ' ಕಂಪನಿಯನ್ನು ಖರೀದಿಸುವುದು ಸುಲಭ. ಆದರೆ 'ಕಾರ್ಪೊರೇಟ್ ಗವರ್ನೆನ್ಸ್' (ಕಾರ್ಪೊರೇಟ್ ಆಡಳಿತ) ಎಂದು ಭಾರೀ ಪರಿಶುದ್ಧನಂತೆ ಪೋಜು ಕೊಡುತ್ತಾ ಬಂದಿದ್ದ ಅದರ ಇಮೇಜೀಗ ಕುಸಿದುಹೋಗಿದೆ. ಅದರಲ್ಲಿ ಪ್ರಮುಖ ಪಾಲು ಹೊಂದಿರುವ ಸಾಂಸ್ಥಿಕ ಹೂಡಿಕೆದಾರರು 'ಸತ್ಯಂ' ಅನ್ನು ಖರೀದಿಸುವಂತೆ ಇನ್ಫೋಸಿಸ್, ವಿಪ್ರೋಗಳ ಬಾಗಿಲು ಬಡಿದಿದ್ದೂ ಆಗಿದೆ. ಸದ್ಯಕ್ಕೆ 'ಪ್ರತಿಫಲ' ಸಿಕ್ಕಿಲ್ಲ. ಮುಂದೆ ಯಾವುದಾದರೂ ಬೃಹತ್ ವಿದೇಶಿ ಐಟಿ ಕಂಪನಿ ಅಥವಾ ಹಣಕಾಸು ಕಂಪನಿ 'ಸತ್ಯಂ' ಖರೀದಿಸಬಹುದು...

ಇದೆಲ್ಲ ಇರಲಿ, ನಾವ್ಯಾಕೆ ಈ ಬ್ಯುಸಿನೆಸ್ ಲೋಕದ ಒಂದು ವ್ಯವಹಾರದ ಸುತ್ತ ಬರೆಯುತ್ತಿದ್ದೇವೆ ಎಂಬ ಪ್ರಶ್ನೆ ಹುಟ್ಟಬಹುದಲ್ಲವೆ?

90ರ ದಶಕದ ಜಾಗತೀಕರಣ, ಮುಕ್ತ ಮಾರುಕಟ್ಟೆ, ಉದಾರೀಕರಣ, ಖಾಸಗೀಕರಣಗಳಿಂದೇನಾದರೂ ಲಾಭವಾಗಿದ್ದರೆ- ಭಾರೀ ಲಾಭವಾಗಿದ್ದರೆ ಎನ್ನುವುದೇ ಸೂಕ್ತ - ಅದು ಹೊಸ ತಲೆಮಾರಿನ ನಾಯಕತ್ವದ ಐಟಿ ಕಂಪನಿಗಳಿಗೇ... ಇವು ತಮ್ಮ ನೌಕರರ ಕುಶಲತೆ, ಮ್ಯಾನೇಜ್‌ಮೆಂಟ್‌ನ ದೂರದೃಷ್ಟಿತ್ವದಿಂದ ವಿಶ್ವಪ್ರಸಿದ್ಧಿಯಾಗಿದ್ದನ್ನು ಅಲ್ಲಗಳೆಯುವಂತಿಲ್ಲ. ಆದರೆ ಈ ಪ್ರಕ್ರಿಯೆಯಲ್ಲಿ ಅವು ಕೇಂದ್ರ, ರಾಜ್ಯ ಸರ್ಕಾರಗಳನ್ನು ಪರೋಕ್ಷವಾಗಿ ನಿಯಂತ್ರಿಸುತ್ತಾ, ಕಡಿಮೆ ಬೆಲೆಯಲ್ಲಿ ಲಕ್ಷಾಂತರ ಎಕರೆ ರೈತರ ಭೂಮಿಗಳನ್ನು ಗಿಟ್ಟಿಸುತ್ತಾ, ವಿದ್ಯುತ್ ರಿಯಾಯ್ತಿ, ರಫ್ತು ಸುಂಕ ವಿನಾಯ್ತಿಗಳನ್ನು ಪಡೆದುಕೊಳ್ಳುತ್ತಾ 'ಡಿ-ಫ್ಯಾಕ್ಟೊ' ಸರ್ಕಾರಗಳಂತಾಗಿಬಿಟ್ಟಿದ್ದವಲ್ಲವೆ?



ಆಂಧ್ರದ ಅಂದಿನ ಸಿಎಂ ಚಂದ್ರಬಾಬು ನಾಯ್ಡುರಿಗೆ ಈ ಐಟಿ ಅಭಿವೃದ್ಧಿಯ ಹುಚ್ಚು ಹಚ್ಚಿ, ಅವರನ್ನು ಸೈಬರ್ ಸಿಎಂ, ಹೈಟೆಕ್ ಸಿಎಂ ಮಾಡಿದ್ದೇ ಈ 'ಸತ್ಯಂ'ನ ದೊರೆ ರಾಮಲಿಂಗರಾಜು ಸಾಹೇಬರು. ಆ ಮೂಲಕ ಸರ್ಕಾರದಿಂದ ಸಾಕಷ್ಟು ಪುಕ್ಕಟೆ ಸವಲತ್ತುಗಳನ್ನು ಪಡೆದು ತಮ್ಮ ಸಾಮ್ರಾಜ್ಯ ವಿಸ್ತರಿಸಿಕೊಂಡರು. ಆದರೆ ಸಾಮಾನ್ಯ ಜನರ ಹಿತ ಕಡೆಗಣಿಸಿದ ನಾಯ್ಡು ಸೋತು ಮನೆಗೆ ಹೋದರು. (ಸೋತರೇನಂತೆ, ಸುಖತ್ತು ಸಂಪತ್ತು ಸಿಕ್ಕಿತ್ತಲ್ಲ!)

ಇಲ್ಲಿವರೆಗಿನ 'ಸತ್ಯಂ'ನಂತಹ ಕಂಪನಿಗಳ ನಾಗಾಲೋಟದ ಅಭಿವೃದ್ಧಿಯನ್ನು ಮೆಚ್ಚಿಕೊಳ್ಳೋದೇನೊ ಸರಿ; ಆದರೆ ಇದರಿಂದ ಪರೋಕ್ಷವಾಗಿ ಜನಸಾಮಾನ್ಯನಿಗಾದ ಕಷ್ಟ-ನಷ್ಟಗಳನ್ನು ಮರೆಯಲು ಸಾಧ್ಯವೆ?

ಈಗ ವಿಶ್ವವ್ಯಾಪಿ ಆರ್ಥಿಕ ಹಿಂಜರಿತ ಉಂಟಾಗಿರುವುದರಿಂದ ಬಹಳಷ್ಟು ದೊಡ್ಡ ಭಾರತೀಯ ಐಟಿ ಕಂಪನಿಗಳು ಕಷ್ಟದಲ್ಲಿವೆ. ಆದರೆ 'ಸತ್ಯಂ'ನಂತೆ ಅವ್ಯಾವೂ ಮಾರಾಟಕ್ಕಿಲ್ಲ, ಮಾಲೀಕರು, ಮ್ಯಾನೇಜ್‌ಮೆಂಟ್‌ನವರ ದುರಾಶೆ, ವಂಚನೆಗಳಿಂದಾಗಿ 'ಸತ್ಯಂ' ಕಳಂಕಿತಗೊಂಡಿದೆ. ಆದರೆ ಇಲ್ಲಿವರೆಗೆ ಇದ್ಯಾವುದರ ಅರಿವಿರದೇ, ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿಯೇ ಮಾಡುತ್ತ ಬಂದಿರುವ ಅಲ್ಲಿನ ಉದ್ಯೋಗಿಗಳಿಗೆ ತೊಂದರೆಯಾಗದಿರಲಿ.

(ಅ)ಪಾರದರ್ಶಕತೆ ಆಹಾ!

ಇವತ್ತು ಭಾರತದ ಟಾಪ್ ಟೆನ್ ಐಟಿ ಕಂಪನಿಗಳೆಲ್ಲ ತಮ್ಮದೆಲ್ಲ ಪಾರದರ್ಶಕ ವ್ಯವಹಾರ ಎಂದು ಬೆನ್ನು ತಟ್ಟಿಕೊಳ್ಳುತ್ತಲೇ ಇವೆಯಲ್ಲ... ಈಗ ಸುದ್ದಿಯಲ್ಲಿರುವ 'ಸತ್ಯಂ' ಕಂಪನಿಯನ್ನೇ ತೆಗೆದುಕೊಳ್ಳಿ. ಅಲ್ಲಿ ಉದ್ಯೋಗಿಗಳ ನೇಮಕಾತಿ ಪಾರದರ್ಶಕವಾಗಿದೆಯೆ? ಭಾರತದಲ್ಲಿರುವ 'ಸತ್ಯಂ'ನ ಎಲ್ಲ ಕಚೇರಿಗಳಲ್ಲೂ ತೆಲುಗರದೇ ಪ್ರಾಬಲ್ಯ.

ಬೆಂಗಳೂರಿನ ಸತ್ಯಂ ಬ್ರ್ಯಾಂಚ್‌ಗಳಲ್ಲಿ ತೆಲುಗರನ್ನು ಬಿಟ್ಟರೆ ಹೆಚ್ಚು ಪ್ರಾಬಲ್ಯ ಹೊಂದಿದವರು ಮಂಗಳೂರಿನ ಕಡೆಯವರು. ಈ ಎರಡೂ ಪ್ರಬಲ ಗುಂಪುಗಳು ಪ್ರತಿನಿಧಿಸುವ ಜಾತಿ ಯಾವುದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ತಾನೆ?

ಕುತ್ತಿಗೆಗೆ ಬಂದಾಗ ಓಡಿಹೋಗುವ ಕಳ್ಳರು

ಕಾರ್ಪೊರೇಟ್ ಗವರ್ನೆನ್ಸ್ ಎಂಬ ಪದದ ಅರ್ಥವೇ ಕನ್‌ಫ್ಯೂಸ್ ಮಾಡುವಂತಿದೆ!

'ದಿ ಎಕನಾಮಿಕ್ಸ್ ಟೈಮ್ಸ್' ಸಹ ಈಗ ಎಚ್ಚರಗೊಂಡಿದೆ 'ಸತ್ಯಂ' ನ ಕೋಲಾಹಲದಿಂದಾಗಿ; 'ಕಾರ್ಪೊರೇಟ್ ಗವರ್ನೆನ್ಸ್‌ನಲ್ಲಿ ನೈತಿಕತೆ (ethics) ಇರ್ಬೇಕು' ಅಂತಾ 2009ರ ಮೊದಲ ದಿನದ ಆವೃತ್ತಿಯಲ್ಲಿ ಅದು ಬರೆದುಕೊಂಡಿದೆ. ಅದು ಹೇಳಿಕೇಳಿ ಬ್ಯುಸಿನೆಸ್ ಪತ್ರಿಕೆಯಲ್ಲವೆ... ಅದನ್ನು ಬಿಟ್ಹಾಕಿ... ಐಟಿ ಕಂಪನಿಗಳ ದಾಸರಂತಾಗಿರುವ ನಮ್ಮ ಕನ್ನಡದ ದೈನಿಕಗಳಿಗೆ ಇದೆಲ್ಲ ಕಾಣುತ್ತಿಲ್ಲ ಅಂದುಕೊಳ್ಳುವಾಗಲೇ 'ಪ್ರಜಾವಾಣಿ' ಆ ಕುರಿತು ಸಂಪಾದಕೀಯ ಬರೆದುಬಿಟ್ಟಿದೆ.

ಭೇಷ್ ಭೇಷ್!

ಲಕ್ಷಾಂತರ ರೈತರನ್ನು ನಿರ್ಗತಿಕರನ್ನಾಗಿ ಮಾಡುವ SEZಗಳನ್ನು ಸೃಷ್ಟಿ ಮಾಡಿದ್ದು ಇದೇ ಕಂಪನಿಗಳಲ್ಲವೆ?

ಹಿಂದೆಲ್ಲಾ ಈ ಲೂಟಿಕೋರ ಕಂಪನಿಗಳ ಬಗ್ಗೆ ಬರೆದಿದ್ದು ಇದೇ ಪತ್ರಿಕೆಗಳಲ್ಲವೆ?

ಇವತ್ತು ಶೇರುದಾರರನ್ನು ಮುಖಾಮುಖಿ ಎದುರಿಸಲಾಗದ 'ಸತ್ಯಂ'ನ ನಾಲ್ವರು ಸ್ವತಂತ್ರ ನಿರ್ದೇಶಕರು ರಾಜೀನಾಮೆ ಇತ್ತು ಓಡಿ ಹೋಗಿದ್ದಾರೆ.

ನಾಳೆ ಅಥವಾ ನಾಡಿದ್ದು ಅದರ ಸಂಸ್ಥಾಪಕ ಅಧ್ಯಕ್ಷ ರಾಮಲಿಂಗರಾಜುವೇ ಓಡಿಹೋಗಬಹುದೇನೋ...? ■

ಭಯೋತ್ಪಾದನೆ: ಯುದ್ಧ ಉತ್ತರವಲ್ಲ

ಕುಮಾರ್ ಬುರಡಿಕಟ್ಟಿಯವರ "ಭಾರತ-ಪಾಕ್ ಯುದ್ಧ" ಈ ಸಂಚಿಕೆಯ ಅತ್ಯುತ್ತಮ ಲೇಖನಗಳಲ್ಲಿ ಒಂದು. ಭಾರತ-ಪಾಕ್ ಯುದ್ಧ ನಡೆದರೆ, ಅದರ ಲಾಭ-ನಷ್ಟಗಳು ಯಾರಿಗೆ ಎಂಬುದನ್ನು ಬುರಡಿಕಟ್ಟಿಯವರು ಅತ್ಯಂತ ವಾಸ್ತವಿಕವಾದ ಅಂಶಗಳ ಆಧಾರದ ಮೇಲೆ ವಿವರಿಸಿದ್ದಾರೆ. ಈಗಾಗಲೇ ಇಪ್ಪತ್ತೈದು ರೂ.ಗಳಿಗೊಂದು ಕಿಲೋ ಅಕ್ಕಿಯನ್ನು ಕೊಂಡು ತಿನ್ನುತ್ತಿರುವ ನನ್ನಂತಹ ಜನಸಾಮಾನ್ಯರಿಗೆ ಯುದ್ಧ ಬೇಕಾಗಿಲ್ಲ.

ಭಯೋತ್ಪಾದನೆ ಇಂದು ಜಾಗತಿಕ ಸಮಸ್ಯೆಯಾಗಿರುವುದರಿಂದ ಕೇವಲ ಪಾಕಿಸ್ತಾನದ ಮೇಲೆ ಯುದ್ಧ ಮಾಡಿದ ಮಾತ್ರಕ್ಕೆ ಭಯೋತ್ಪಾದನೆ ನಿರ್ಮೂಲನೆಯಾಗುವುದಿಲ್ಲ. ವಿಶ್ವ ವ್ಯಾಪಾರ ಕೇಂದ್ರವು ಭಯೋತ್ಪಾದಕರಿಂದ ನಾಶಗೊಂಡ ನಂತರ ನಾವು ಎಚ್ಚೆತ್ತುಗೊಂಡು, ನಮ್ಮ ಗಡಿ ರಕ್ಷಣಾ ವ್ಯವಸ್ಥೆ ಮತ್ತು ಬೇಹುಗಾರಿಕಾ ವ್ಯವಸ್ಥೆಗಳನ್ನು ಮತ್ತಷ್ಟು ಚುರುಕುಗೊಳಿಸಿ ಬಲಿಷ್ಠವಾಗಿ ಸನ್ನದ್ಧಗೊಳಿಸಬೇಕಾಗಿದ್ದುದು ನಮ್ಮ ಕರ್ತವ್ಯ.

ಈ ಮೂಲಭೂತ ಕರ್ತವ್ಯದ ಬಗ್ಗೆ ಗಮನಹರಿಸದ ನಮ್ಮ ದುಷ್ಟ ರಾಜಕಾರಣಿಗಳು ಮತ್ತು ಭ್ರಷ್ಟ ಅಧಿಕಾರಶಾಹಿಗಳ ಕೂಟ, ಮುಂಬೈ ಮೇಲಿನ ಭಯೋತ್ಪಾದಕರ ದಾಳಿಯ ನಂತರ ಅನಿಷ್ಟಕ್ಕೆಲ್ಲ ಶನೀಶ್ವರನೇ ಕಾರಣ ಎಂಬಂತೆ ಕೇವಲ ಪಾಕಿಸ್ತಾನವನ್ನು ದೂಷಿಸಿ ಸುಮ್ಮನಾಗುವುದು ಸರಿಯಲ್ಲ.

ಈಗಾಗಲೇ ಹುಲಿಯ ಬೆನ್ನೇರಿ ಸವಾರಿ ಮಾಡುತ್ತಿರುವ ಪಾಕಿಸ್ತಾನದ ರಾಜಕಾರಣಿಗಳ ಉಭಯ ಸಂಕಟವನ್ನು ನಾವು ಅರ್ಥ ಮಾಡಿಕೊಂಡು ಸಂಯಮದಿಂದ ವರ್ತಿಸಬೇಕು.

- ಎಸ್.ಎಸ್. ವೆಂಕಟೇಶ್, ಅಧ್ಯಕ್ಷ, ಜನ ಜಾಗೃತಿ ವೇದಿಕೆ, ಬೆಂಗಳೂರು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಮುಖವಾದ ಮಾಧ್ಯಮಗಳ ಸ್ವಾತಂತ್ರವನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಕೆಲ ಶಕ್ತಿಗಳು ತೊಡಗಿವೆ. ಆದರೆ ಆ ಶಕ್ತಿಗಳನ್ನು ಮಟ್ಟ ಹಾಕುವಲ್ಲಿ ಸರ್ಕಾರ ವಿಫಲವಾಗಿರುವುದಕ್ಕೆ ಕರಾವಳಿ ಪ್ರದೇಶದಲ್ಲಿ ಸಾಮಾನ್ಯ ಜನರ ಪರವಾಗಿರುವ 'ಕರಾವಳಿ ಅಲೆ'ಯ ಮೇಲೆ ನಿರಂತರವಾಗಿ ನಡೆಯುತ್ತಿರುವ ದಾಳಿಗಳೇ ಸಾಕ್ಷಿಯಾಗಿವೆ.

ರಾಷ್ಟ್ರದ್ರೋಹಿ ಚಟುವಟಿಕೆಗಳಾದ ಲಂಚಗುಳಿತನ; ಹಿಂದುಳಿದವರ, ಅಲ್ಪಸಂಖ್ಯಾತರ, ದಲಿತರ ಹಾಗೂ ಮಹಿಳೆಯರ ಮೇಲಿನ ಶೋಷಣೆ ಮತ್ತು ದಬ್ಬಾಳಿಕೆಯನ್ನು 'ಕರಾವಳಿ ಅಲೆ'ಯು ನಿರಂತರವಾಗಿ ಬಹಿರಂಗಪಡಿಸುತ್ತಿದೆಯಲ್ಲದೆ ಜನಸಾಮಾನ್ಯರಿಗೆ ಈ ಬಗ್ಗೆ ಎಚ್ಚರಿಕೆ ನೀಡುತ್ತಾ ಬಂದಿದೆ. ಇದನ್ನು ಸಹಿಸದ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡದಿಂದ ಇಲ್ಲಿನ ಪೊಲೀಸರು ಬಿ.ವಿ. ಸೀತಾರಾಮ್ ಮತ್ತು ಅವರ ಧರ್ಮಪತ್ನಿಯವರೊಂದಿಗೆ ಅಮಾನುಷವಾಗಿ ವರ್ತಿಸಿದ್ದು ಇನ್ನೂ ಜನಸಾಮಾನ್ಯರಲ್ಲಿ ಹಸಿ ನೆನಪಾಗಿ ಉಳಿದಿದೆ.

ಸಮಾಜಘಾತುಕ ಕೆಲಸದಲ್ಲಿ ತೊಡಗಿರುವ ಪಟ್ಟಭದ್ರ ಹಿತಾಶಕ್ತಿಗಳು ಹಾಗೂ ಅವರ ಪ್ರೋತ್ಸಾಹಕರು ತಾವು ಈ ಸಮಾಜದ ಹಾಗೂ ದೇಶದ ರಕ್ಷಕರೆಂಬ ಮುಖವಾಡವನ್ನು ಧರಿಸಿ 'ಕರಾವಳಿ ಅಲೆ', ಅದರ ಮಾಲೀಕರು, ಸಿಬ್ಬಂದಿ ವರ್ಗದವರ ಹಾಗೂ ಮಾರಾಟಗಾರರ ಮೇಲೆ ಹಲ್ಲೆ ನಡೆಸುತ್ತಿದ್ದಾರೆ. ಪತ್ರಿಕೆಯ ಸಾಗಾಟನೆಗೆ ಅಡ್ಡ ಬಂದಿದ್ದಲ್ಲದೆ, ಅದರ ಪ್ರತಿಗಳನ್ನು ಸುಟ್ಟು ಹಾಕುವುದು ಹಾಗೂ ಪತ್ರಿಕೆ ಮಾರುವ ಅಂಗಡಿಗಳ ಮೇಲೆ ದಾಳಿ ನಡೆಸುವುದು ಇವೆಲ್ಲವೂ ಕರಾವಳಿಯ ಪ್ರಜ್ಞಾವಂತ ಹಾಗೂ ವಿದ್ಯಾವಂತರು ತಲೆತಗ್ಗಿಸುವಂತೆ ಮಾಡಿವೆ.

ಇವರ ಇಂತಹ ಅಮಾನುಷ ಮತ್ತು ಅನಾಗರಿಕ ವರ್ತನೆ ಕರಾವಳಿ ಪ್ರದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಮಸಿ ಬಳಿದಿದೆ. ಈ ನಿಟ್ಟಿನಲ್ಲಿ ಹಲವಾರು ಬುದ್ಧಿಜೀವಿಗಳು, ಪ್ರಗತಿಪರ ಸಂಘಟನೆಗಳು ಒಂದುಗೂಡಿ 'ಕರಾವಳಿ ಅಲೆ' ಪತ್ರಿಕೆಗೆ ಬೆಂಬಲವಾಗಿ ನಿಂತಿರುವುದು ಶ್ಲಾಘನೀಯ.

-ಯು.ಕೆ. ಗಿರೀಶ್ ಕುಮಾರ್, ಜಿಲ್ಲಾ ಸಂಚಾಲಕರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ದಕ್ಷಿಣ ಕನ್ನಡ

ಭಾರತದ ಇಂದಿನ ಸಂವಿಧಾನದೊಂದಿಗೆ ಅಸಂಬದ್ಧವಾದ ಮತ್ತು ಅಸಮಾನತೆಯ ಪ್ರತೀಕವಾದ ಭಗವದ್ಗೀತೆಯನ್ನು ಹೋಲಿಸಿರುವ ಪೇಜಾವರ ಸ್ವಾಮೀಜಿಯವರ ಬುದ್ಧಿಶಕ್ತಿಯು ಭ್ರಮಣಗೊಂಡಂತೆ ಕಾಣುತ್ತಿದೆ.

ಪೇಜಾವರ ಸ್ವಾಮಿಗಳಿಗೆ ಇಲ್ಲೊಂದು ಸವಾಲು: ಭಗವದ್ಗೀತೆ ಹುಟ್ಟಿ ಬಹಳಷ್ಟು ವರ್ಷಗಳಾಗಿದ್ದರೂ ಎಷ್ಟರಮಟ್ಟಿಗೆ ಅದು ಸವರ್ಣೀಯರಿಂದಾಗುವ ಅಸ್ಪೃಶ್ಯರ ಶೋಷಣೆ ನೀಗಿಸಿತ್ತು? ವಿಶ್ವಮಾನವರೆಲ್ಲಾ ಒಂದೇ ಎಂಬ ಭಾವನೆಯನ್ನು ನಿಮ್ಮ ಸವರ್ಣೀಯರಲ್ಲಿ ಪ್ರಭೋದಿಸಿತು? ಅಥವಾ ಕೃಷ್ಣ ಪರಮಾತ್ಮನಿಗೂ ಅಸ್ಪೃಶ್ಯರು ಕೂಡಾ "ಸವರ್ಣೀಯರಂತೆ ಮನುಷ್ಯರು" ಎಂಬ ಪರಿಕಲ್ಪನೆ ಇರಲಿಲ್ಲವೇ?

ಶ್ರೀ ಕೃಷ್ಣ ಪರಮಾತ್ಮ ಭೋದಿಸಿರುವುದೇ ವಿಶ್ವದ ಸಂವಿಧಾನವಾದರೆ ಅದು ಹೇಗೆ ಭಾರತದಲ್ಲಾದರೂ ಮಾನವರು ಪರಸ್ಪರರನ್ನು ಸಮಾನರಂತೆ ಕಾಣಲು ಅಡ್ಡಿ ಬಂತು? ಇನ್ನು ನಿಮ್ಮ ಭಗವದ್ಗೀತೆ ವಿಶ್ವಮಾನವರನ್ನು ಒಂದುಗೂಡಿಸುವುದು ಬಹುದೂರದ ಮಾತು ಬಿಡಿ.

ನಾಲ್ಕು ವೇದಗಳು, ಆರು ಶಾಸ್ತ್ರಗಳು ಮತ್ತು ಉಪನಿಷತ್ತುಗಳು, ಹದಿನೆಂಟು ಪುರಾಣಗಳು, ಇದಲ್ಲದೇ ನಿಮ್ಮ ಆರಾಧ್ಯ ದೈವವೆನಿಸುವ ಸರ್ವಶ್ರೇಷ್ಠ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನೇ ರಚಿಸಿರುವ 'ಭಗವದ್ಗೀತೆ'. ಇವೆಲ್ಲ ಸರ್ವಕಾಲಕ್ಕೂ ನಿಮ್ಮವರ ಅನುಕೂಲತೆಗಾಗಿ ರಚಿಸಿಕೊಂಡ ನಿಮ್ಮವರ ಪವಿತ್ರ ಗ್ರಂಥಗಳು. ಹೀಗಿರುವಾಗ ನಿಜವಾಗಿಯೂ ನಮ್ಮ ಭಾರತದ ನ್ಯಾಯಾಲಯಗಳಲ್ಲಿ ಈ ಭಗವದ್ಗೀತೆಯ ಮೇಲೆ ಪ್ರಮಾಣವಚನ ಮಾಡಿಸುವುದು ನಮ್ಮ ಪ್ರಜಾಪ್ರಭುತ್ವದ ಸಂವಿಧಾನಕ್ಕೇ ಅಪಚಾರ.

ಭಾರತದಲ್ಲಿ ಉಗ್ರತನ ಹುಟ್ಟುವುದಕ್ಕೂ, ಜನ ಮತಾಂತರಗೊಳ್ಳುವುದಕ್ಕೂ, ಬಹಳಷ್ಟು ಜನರ ಪ್ರಸ್ತುತ ಹೀನಾಯ ಪರಿಸ್ಥಿತಿಗೂ ನಿಮ್ಮ ಭಗವದ್ಗೀತೆಯಲ್ಲದೇ ನಿಮ್ಮ ಇತರೆ ಪವಿತ್ರ ಗ್ರಂಥಗಳೇ ಕಾರಣ. ಅಸ್ಪೃಶ್ಯರು ಸವರ್ಣೀಯರ ದೃಷ್ಟಿಯಲ್ಲಿ ಕೀಳು ಪಶುಗಳಿಗಿಂತಲೂ ಕೀಳು. ಅವರು ಸಹಸ್ರಾರು ವರ್ಷಗಳಿಂದ ಬಹು ನೊಂದು ಬೆಂದು ಈಗ ತಾನೇ ಮಾನವತಾ ಬದುಕಿನೆಡೆಗೆ ಸಾಗುತ್ತಿರುವುದು ಅವರಿಗೆ ಸಹಿಸಲಾಗುತ್ತಿಲ್ಲ ಎಂಬುದು ಸ್ಪಷ್ಟ.

ಆಧುನಿಕ ಯುಗದ ಮಹಾಪುರುಷ, ಭೋದಿಸತ್ವ ಪರಮ ಪೂಜ್ಯ ವಿಶ್ವ ಮಹಾ ಮಾನವ, ಭಾರತ ರತ್ನ, ಡಾ. ಬಾಬಾ ಸಾಹೇಬ ಅಂಬೇಡ್ಕರ್ ರೂಪಿಸಿರುವ ಸಂವಿಧಾನವೇ ಇಂದಿನ ಅಸ್ಪೃಶ್ಯರ ಪ್ರಗತಿಗೆ ನೆರವಾಗುತ್ತದೆಯೇ ಹೊರತು ನಿಮ್ಮ ಭಗವದ್ಗೀತೆಯಲ್ಲ. ಆದ್ದರಿಂದ ನಿಮ್ಮ ಪವಿತ್ರ 'ಸಂವಿಧಾನ' ಭಗವದ್ಗೀತೆ ನಿಮಗೆ ಸೀಮಿತವಾಗಿರಲಿ. ಅದನ್ನು ಬಡ ಬಡಾವಣೆಗಳಿಗೆ ಬಂದು ಮುಟ್ಟಿಸುವ ಕಷ್ಟ ಪಡಬೇಡಿರಿ.

ನಿಮಗೆ ನಿಜವಾಗಲೂ ದೇಶದ ಮೇಲೆ ಪ್ರೀತಿ, ಭಕ್ತಿ ಅಭಿಮಾನ ಹಾಗೂ ಗೌರವ ಇದ್ದರೆ ಒಂದು ಕೆಲಸ ಮಾಡಿ. ಇವತ್ತು ತಮ್ಮ ತಂದೆ-ತಾಯಿ, ಮಡದಿ, ಮಕ್ಕಳನ್ನು ತೊರೆದು, ತಮ್ಮ ಪ್ರಾಣವನ್ನು ತೆತ್ತಾದರೂ ದೇಶದ ರಕ್ಷಣೆಗೆ ಯೋಧರು ಗಡಿಭಾಗಗಳಲ್ಲಿ ಹೋರಾಡುತ್ತಿದ್ದಾರಲ್ಲವೆ? ಆ ವೀರರಿಗೆಂದು ನಿಮ್ಮ ನಿಮ್ಮ ಮಠಗಳಲ್ಲೇ ಗೆದ್ದಲುತಿಂದು ನಶಿಸುತ್ತಿರುವ ಅಪಾರ ಸಂಪತ್ತಿನ ರಾಶಿಯನ್ನು ದಾನ ಮಾಡಿರಿ. ಅದು ನಿಮ್ಮವರಿಂದ ಸಾಧ್ಯವೇ?

-ವಿ.ರಾ. ಚಾಂಬಾಳ, ಗುಲ್ಬರ್ಗಾ

ಅಮೃತ ಮಹೋತ್ಸವ: ಐವತ್ತೇ ದಿನ!

ಕನ್ನಡ ಚಿತ್ರರಂಗದ ಅಮೃತ ಮಹೋತ್ಸವ ಸಮಾರಂಭಕ್ಕೆ ಇನ್ನು ಕೇವಲ ಐವತ್ತು ದಿನಗಳು ಮಾತ್ರ ಉಳಿದಿದ್ದರೂ ಅದಕ್ಕಾಗಿ ನಡೆದಿರುವ ಸಿದ್ಧತೆಗಳು ಇವತ್ತಿಗೂ ಗೊಂದಲಗಳಿಂದ ಕೂಡಿವೆ. ಈಗ ಉತ್ಸವಕ್ಕೆ ದಿನಗಣನೆ ಆರಂಭವಾಗಿದ್ದು ಅದರ ಸುತ್ತಲ ದೃಶ್ಯಗಳತ್ತ ಒಂದು ನೋಟ ಇಲ್ಲಿದೆ.

ಉತ್ಸವದ ಕೌಂಟ್‌ಡೌನ್!

ಮಾರ್ಚ್ ತಿಂಗಳ 1, 2 ಮತ್ತು 3ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಬಹಳ ಅದ್ದೂರಿಯಾಗಿ ಈ ಅಮೃತ ಮಹೋತ್ಸವ ಸಮಾರಂಭವನ್ನು ಜರುಗಿಸಲು ಡಾ. ಜಯಮಾಲಾ ನೇತೃತ್ವದ ಫಿಲಂ ಛೇಂಬರ್ ನಿರ್ಧರಿಸಿ ಬಹಳ ದಿನಗಳಾಗಿವೆ. ಆ ಸಮಾರಂಭದಲ್ಲಿ ಕನ್ನಡ ಚಿತ್ರರಂಗಕ್ಕೆ ವಿಶಿಷ್ಟ ಕೊಡುಗೆಯನ್ನು ನೀಡಿದ ಒಟ್ಟು ಎಪ್ಪತ್ತೈದು ಮಹನೀಯರುಗಳ ಸಾಧನೆಯ ಬಗ್ಗೆ ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತದೆ. ಇದರ ಜವಾಬ್ದಾರಿಯನ್ನು ಸಾಹಿತಿ ಕಂ ನಿರ್ದೇಶಕ ಬರಗೂರು ರಾಮಚಂದ್ರಪ್ಪ ಅವರು ವಹಿಸಿಕೊಂಡಿದ್ದಾರೆ. ಹಾಗೆಯೇ ಎಪ್ಪತ್ತೈದು ಜನ ಕಲಾವಿದರನ್ನು ಆ ಸಮಾರಂಭದಲ್ಲಿ ಸನ್ಮಾನಿಸುವುದು ಜಯಮಾಲಾ ತಂಡದ ಮತ್ತೊಂದು ಕಾರ್ಯಕ್ರಮ. ಈ ಮಧ್ಯೆ ಒಂದು ಸ್ಮರಣ ಸಂಚಿಕೆಯನ್ನು ಕೂಡಾ ಹೊರತರಲಿದ್ದಾರೆ.

ಯಡ್ಡಿಯ ಅಪಸ್ವರ



ಬೆಂಗಳೂರಿನಲ್ಲಿ ಮಾತ್ರವಲ್ಲದೆ ಈ ಸಮಾರಂಭವನ್ನು ರಾಜ್ಯದ ಪ್ರತೀ ಜಿಲ್ಲೆಯಲ್ಲೂ ಉತ್ಸವ, ಮೆರವಣಿಗೆಗಳ ಮೂಲಕ ಆಚರಿಸಬೇಕೆಂಬುದು ಛೇಂಬರ್‌ನವರ ಅಭಿಲಾಷೆಯಾಗಿತ್ತು. ಅದರಂತೆ ತಿಂಗಳಿಗೊಂದು ಜಿಲ್ಲೆಯಲ್ಲಿ ತಾರಾಮೇಳ ನಡೆಸಿದರೆ ಅದರಿಂದ ಉದ್ಯಮಕ್ಕೆ ಸಹಾಯವಾಗಬಹುದು ಎಂಬುದು ಅವರ ಲೆಕ್ಕಾಚಾರವಾಗಿತ್ತು. ಆದರೆ ಯಡಿಯೂರಪ್ಪ ಸರ್ಕಾರ ಇಂತಹ ಉತ್ಸವ ಮತ್ತು ಮೆರವಣಿಗೆಗಳಿಗೆ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಈಗಿನ ಸಂದರ್ಭದಲ್ಲಿ ತಾರೆಗಳಿಗೆ ಭದ್ರತೆಯನ್ನು ಒದಗಿಸುವುದು ಕಷ್ಟವಾಗುತ್ತದೆ; ಆ ಕಾರಣಕ್ಕಾಗಿ ಬೆಂಗಳೂರಿನಲ್ಲಿ ಮಾತ್ರ ಉತ್ಸವ ನಡೆಸೋಣ ಎಂದು ಯಡ್ಡಿ ಅಪಸ್ವರ ಎತ್ತಿದರು. ಅಲ್ಲಿಗೆ ರಾಜ್ಯಾದ್ಯಂತ ಅಮೃತ ಮಹೋತ್ಸವವನ್ನು ಆಚರಿಸುವ ಚಿತ್ರೋದ್ಯಮದವರ ಉತ್ಸಾಹಕ್ಕೆ ತಣ್ಣೀರೆರಚಿದಂತಾಗಿದೆ.



15 ದಿನ ರಜಾನಾ?

ಈಗ ಮತ್ತೊಂದು ಸಣ್ಣ ಮಟ್ಟದ ವಿವಾದ ತಲೆಯೆತ್ತಿದೆ. ಮಾರ್ಚ್ ತಿಂಗಳ ಈ ಉತ್ಸವಕ್ಕಾಗಿ ಎಲ್ಲಾ ತಾರೆಯರನ್ನು ಒಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮವನ್ನು ಛೇಂಬರ್ ಹಮ್ಮಿಕೊಂಡಿದೆ. ಈ ಕಾರ್ಯಕ್ರಮದ ಪೂರ್ವಸಿದ್ಧತೆಗಾಗಿ ಫೆಬ್ರವರಿ 19ರಿಂದ 15 ದಿನಗಳ ಕಾಲ ಉದ್ಯಮಕ್ಕೆ ರಜೆ ಘೋಷಿಸಬೇಕೆಂಬುದು ಛೇಂಬರ್‌ನವರ ಅಭಿಪ್ರಾಯ. ಆದರೆ ಅದನ್ನು ಉದ್ಯಮದ ಒಂದು ವರ್ಗ ಬಲವಾಗಿ ವಿರೋಧಿಸಿದೆ. ಮೊದಲೇ ಕನ್ನಡ ಚಿತ್ರೋದ್ಯಮ ಕಳೆದ ಎರಡು ವರ್ಷಗಳಿಂದ ಕುಂಟುತ್ತಾ ಸಾಗುತ್ತಿದೆ. ಇಂಥ ಸಂದರ್ಭದಲ್ಲಿ 15 ದಿನಗಳ ಕಾಲ ರಜೆ ಘೋಷಿಸುವುದು ಮೂರ್ಖತನ ಎಂದು ಕೆಲವು ನಿರ್ಮಾಪಕರು ಮತ್ತು ಕಾರ್ಮಿಕ ನಾಯಕರು ತಕರಾರೆತ್ತಿದ್ದಾರೆ. ಆದರೆ ಇಂತಹ ಉತ್ಸವ ಯಶಸ್ಸು ಕಾಣಬೇಕಾದಲ್ಲಿ ಉದ್ಯಮದವರು ಇಂತಹ ಸಣ್ಣ ಪುಟ್ಟ ತ್ಯಾಗ ಮಾಡಬೇಕಾಗುತ್ತದೆ ಎಂಬುದು ಛೇಂಬರ್ ಪದಾಧಿಕಾರಿಗಳ ಅಭಿಪ್ರಾಯ. ಈ ವಾದ ವಿವಾದದಿಂದಾಗಿ ಹದಿನೈದು ದಿನಗಳ ರಜಾ ಘೋಷಣೆ ಕಷ್ಟಸಾಧ್ಯವೆನಿಸುತ್ತಿದೆ. ಇದು ಕೂಡ ಛೇಂಬರ್‌ನವರ ಉತ್ಸಾಹಕ್ಕೆ ತಣ್ಣೀರೆರಚಿದೆ.

ರವಿಯ ಲಾಂಛನ ರೆಡಿ!

ಈ ಮಧ್ಯೆ ಈ ಸಮಾರಂಭಕ್ಕಾಗಿ ಒಂದು ಲಾಂಛನವನ್ನು ಸೃಷ್ಟಿಸುವ ಜವಾಬ್ದಾರಿಯನ್ನು ಛೇಂಬರ್‌ನವರು ಕ್ರೇಜಿ ಸ್ಟಾರ್ ರವಿಚಂದ್ರನ್ ಅವರಿಗೆ ವಹಿಸಿದ್ದರು. ಆ ಕೆಲಸವನ್ನು ತಿಂಗಳ ಹಿಂದೆಯೇ ಮಾಡಿ ಮುಗಿಸಿ ರವಿಚಂದ್ರನ್ ಛೇಂಬರ್‌ಗೆ ಒಪ್ಪಿಸಿದ್ದಾರೆ. ಆದರೆ ಆ ಲಾಂಛನವನ್ನು ಛೇಂಬರ್‌ನವರು ಇನ್ನೂ ಬಿಡುಗಡೆ ಮಾಡದಿರುವುದು ಆಶ್ಚರ್ಯಕರವಾಗಿದೆ. ವಾಸ್ತವವಾಗಿ ಜನವರಿ ಒಂದರಿಂದ ಸಿನಿಮಾದ ಎಲ್ಲಾ ಜಾಹಿರಾತುಗಳಲ್ಲಿ ಎಪ್ಪತ್ತೈದು ವರ್ಷದ ಈ ಲಾಂಛನವನ್ನು ಕಡ್ಡಾಯವಾಗಿ ಬಳಸಬೇಕೆಂದು ಛೇಂಬರ್‌ನವರು ನಿರ್ಧರಿಸಿದ್ದರು. ಆದರೆ ಅದಿನ್ನೂ ಕಾರ್ಯರೂಪಕ್ಕೇ ಬಂದಿಲ್ಲ.

ಅಮೃತ ಭವನಕ್ಕೆ ಚಾಲನೆ

ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸುಮಾರು ಒಂದು ಎಕರೆ ನಿವೇಶನದಲ್ಲಿ ಅಮೃತಮಹೋತ್ಸವ ಭವನವನ್ನು ನಿರ್ಮಿಸಬೇಕೆಂಬುದು ಛೇಂಬರ್‌ನವರ ಆಕಾಂಕ್ಷೆಯಾಗಿತ್ತು. ಅದಕ್ಕಾಗಿ ಜಯಮಾಲಾ ಈಗಾಗಲೇ ವಿಧಾನಸೌಧದ ಕಾರಿಡಾರುಗಳಲ್ಲಿ ಸುತ್ತಾಡುತ್ತಿದ್ದಾರೆ. ಇದು ಕಾರ್ಯಗತವಾದಲ್ಲಿ ನಿಜಕ್ಕೂ ಇದೊಂದು ಅಮೃತ ಮಹೋತ್ಸವದ ಅರ್ಥಪೂರ್ಣ ಕೊಡುಗೆಯಾಗುವುದರಲ್ಲಿ ಸಂಶಯವಿಲ್ಲ.

ಯುದ್ಧಕಾಲೇ ಶಸ್ತ್ರಾಭ್ಯಾಸ!

ಒಟ್ಟಾರೆಯಾಗಿ ನೋಡಿದರೆ, ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಮಾಡಲು ಹೊರಟಂತಿದೆ ಛೇಂಬರ್‌ನವರ ಈ ಕಾರ್ಯವೈಖರಿ. ಇನ್ನೂ ಐವತ್ತು ದಿನ ಮಾತ್ರ ಉಳಿದಿದ್ದರೂ ಎಲ್ಲೂ ಕೂಡ ಅಮೃತ ಮಹೋತ್ಸವದ ಸಿದ್ಧತೆ ಕಾಣಿಸುತ್ತಲೇ ಇಲ್ಲ. ಎಪ್ಪತ್ತೈದು ವರ್ಷದ ಅಮೃತ ಮಹೋತ್ಸವದ ತಯಾರಿ ಕೆಲಸಗಳು ಕನಿಷ್ಠವೆಂದರೂ ಒಂದು ವರ್ಷದ ಹಿಂದೆಯೇ ಆರಂಭವಾಗಬೇಕಿತ್ತು, ಅಷ್ಟೇ ಅಲ್ಲ, ಬರೀ ಉತ್ಸವ, ಮೆರವಣಿಗೆ ಮತ್ತು ಸನ್ಮಾನಗಳಿಂದ ಯಾವುದೇ ಚಿತ್ರೋದ್ಯಮ ಉದ್ಧಾರವಾಗುವುದಿಲ್ಲ. ಚಿತ್ರೋದ್ಯಮ ಕಳೆಗುಂದಿರುವ ಇಂದಿನ ಸಂದರ್ಭದಲ್ಲಿ ಹಳೆಯ ಗತ ವೈಭವವನ್ನು ಮೆಲುಕು ಹಾಕುವ ಬದಲು ವರ್ತಮಾನ ಮತ್ತು ಭವಿಷ್ಯದ ಬಗ್ಗೆ ಏನಾದರೂ ಯೋಜನೆಗಳನ್ನು ಹಾಕಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಫಿಲ್ಮ್ ಛೇಂಬರ್ ಎಂದಿನಂತೆ ಉತ್ಸವ, ಮೆರವಣಿಗೆಗಳಲ್ಲೇ ಸಂತೃಪ್ತಿಯನ್ನು ಕಾಣುತ್ತಿರುವುದು ವಿಷಾದನೀಯ.



ಹೀಗೇಕೆ ಆಲೋಚಿಸಬಾರದು?

ಅಮೃತ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ಕನಿಷ್ಠವೆಂದರೂ ಕನ್ನಡದ ಕೀರ್ತಿ ಪತಾಕೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಾರಿಸಿದ ಒಂದಷ್ಟು ಚಿತ್ರಗಳನ್ನು ಜನರಿಗಾಗಿ ಮತ್ತೊಮ್ಮೆ ಪ್ರದರ್ಶಿಸಬಹುದಿತ್ತು. ಇಂತಹ ಒಂದು ಸಿಂಪಲ್ ವಿಷಯ ನಮ್ಮ ಛೇಂಬರ್‌ನವರಿಗೆ ಯಾಕೆ ಅರ್ಥವಾಗಿಲ್ಲ ಎಂಬುದೇ ಆಶ್ಚರ್ಯ.

ಇಲ್ಲೊಂದು ಮುಖ್ಯವಾದ ವಿಷಯ ಥಿಯೇಟರ್ ಮಾಲೀಕರನ್ನು ಕಾಡುತ್ತಿದೆ. ಹಿಂದೊಮ್ಮೆ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಛೇಂಬರ್‌ನವರು ಹಣ ಸಂಗ್ರಹ ಮಾಡಿದ್ದರು. ಅದರ ಬಗ್ಗೆ ಸ್ವಲ್ಪ ಗೊಂದಲ ಗೋಜಲುಗಳು ಉಂಟಾಗಿದ್ದವು. ಹೀಗಾಗಿ ಹಂಚಿಕೆದಾರರು, ಥಿಯೇಟರ್ ಮಾಲೀಕರು, ನಿರ್ಮಾಪಕರು ಈ ಬಾರಿ ಹಣಕಾಸು ವಿಷಯದ ಬಗ್ಗೆ ಅಷ್ಟೊಂದು ಉತ್ಸಾಹ ತೋರಿಸುತ್ತಿಲ್ಲ. ಈಗ ಉದ್ಭವಿಸಿರುವ ಹಣಕಾಸಿನ ಮುಗ್ಗಟ್ಟಿನಿಂದಾಗಿ ಅಂದುಕೊಂಡ ಮಟ್ಟದಲ್ಲಿ ಈ ಉತ್ಸವ ನಡೆಸಲು ಛೇಂಬರ್‌ನವರು ಹಿಂದೇಟು ಹಾಕುತ್ತಿದ್ದಾರೆ. ಈಗ ಇಡೀ ಉತ್ಸವ ಸರ್ಕಾರದ ಅನುದಾನದವನ್ನೇ ಅವಲಂಬಿಸುವಂತಾಗಿದೆ. ಆದರೂ ಹೊಸ ಸಮಿತಿಯ ಮೇಲೆ ಎಲ್ಲರಿಗೂ ಭರವಸೆ ಇದೆ ಎಂಬುದರಲ್ಲಿ ದೂಸರಾ ಮಾತಿಲ್ಲ.

ನಂಬರ್ ಒನ್ ನಾವೇ!

ನಿಜ. ಅಮೃತ ಮಹೋತ್ಸವವನ್ನು ನಾವು ಆಚರಿಸಲೇಬೇಕು. ಯಾಕೆಂದರೆ ಭಾರತೀಯ ಚಿತ್ರೋದ್ಯಮಕ್ಕೆ ಕನ್ನಡ ಚಿತ್ರೋದ್ಯಮದ ಕೊಡುಗೆ ಅನನ್ಯವಾಗಿದೆ. ಉದಾಹರಣೆಗೆ ಕಲಾತ್ಮಕ ಚಿತ್ರಗಳ ತವರು ಈ ನಮ್ಮ ಕನ್ನಡ ನಾಡು. ಮೊದಲ ಸಾಂಸಾರಿಕ ಚಿತ್ರ, ಮೊದಲ ಕಾದಂಬರಿ ಆಧಾರಿತ ಚಿತ್ರ ಆರಂಭವಾಗಿದ್ದೇ ನಮ್ಮಲ್ಲಿ. ಹಾಗೆಯೇ ರಾಜಕೀಯ ಕಥಾವಸ್ತು ಆಧಾರಿತ (ಅಂತ) ಚಿತ್ರ ನಿರ್ಮಾಣಗೊಂಡು ಹೊಸ ಅಲೆ ಸೃಷ್ಟಿಸಿದ್ದೇ ಕರ್ನಾಟಕ. ಹೀಗೆ ಅನೇಕ ವಿಷಯಗಳಲ್ಲಿ ಒಂದು ಕಾಲದಲ್ಲಿ ಕನ್ನಡ ಚಿತ್ರರಂಗವೇ ನಂಬರ್ 1 ಆಗಿದ್ದು ಆಗ ಭಾರತೀಯ ಚಿತ್ರರಂಗ ಗಾಂಧಿನಗರದ ಕಡೆ ದೃಷ್ಟಿ ನೆಟ್ಟಿರುತ್ತಿತ್ತು. ಈಗ ಕನ್ನಡ ಚಿತ್ರರಂಗ ಅದೇ ಮಟ್ಟದಲ್ಲಿ ವಿಜೃಂಭಿಸದೇ ಇರಬಹುದು. ಆದರೆ ಹಿಂದಿನ ಕಾಲವನ್ನು ಈ ಉತ್ಸವ ಮತ್ತೆ ನೆನಪಿಸುವುದಷ್ಟೇ ಅಲ್ಲ, ಅದು ಮರುಸೃಷ್ಟಿಯಾಗುವಂತಾದರೆ ಅಮೃತ ಮಹೋತ್ಸವ ಸಾರ್ಥಕಗೊಳ್ಳುತ್ತದೆ.

■ ಶೆಣೈ





ಸೂಪರ್‌ಸ್ಟಾರ್‌ಗಳ ದಂಡು

ಅಮೃತ ಮಹೋತ್ಸವ ಸಮಾರಂಭಕ್ಕೆ ಕನ್ನಡ ಚಿತ್ರರಂಗದಲ್ಲಿ ಕಾಣಿಸಿಕೊಂಡ ಬಹುತೇಕ ಎಲ್ಲ ಪರಭಾಷಾ ತಾರೆಯರನ್ನು ಛೇಂಬರ್‌ನವರು ಆಹ್ವಾನಿಸಲಿದ್ದಾರೆ.

ಅದರ ಪ್ರಕಾರ ಕನ್ನಡ ಚಿತ್ರಗಳಲ್ಲಿ ನಟಿಸಿರುವ, ಆದರೆ ಈಗ ಪರಭಾಷೆಗಳಲ್ಲಿ ಉನ್ನತ ಸ್ಥಾನದಲ್ಲಿರುವ, ಅನೇಕ ತಾರೆಯರು ಈ ಉತ್ಸವದಲ್ಲಿ ಭಾಗವಹಿಸಿ ಉತ್ಸವಕ್ಕೆ ಇನ್ನಷ್ಟು ರಂಗು ನೀಡುವ ಸಾಧ್ಯತೆಯಿದೆ. ಅವರುಗಳಲ್ಲಿ ಸೂಪರ್ ಸ್ಟಾರ್ ರಜನೀಕಾಂತ್, ಹಿಂದಿ ಚಿತ್ರರಂಗದ ಲಂಬೂ ಅಮಿತಾಬ್ ಬಚ್ಚನ್, ಕಮಲ್ ಹಾಸನ್, ಅನಿಲ್ ಕಪೂರ್, ಚಿರಂಜೀವಿ, ಅಕ್ಷಯ್ ಕುಮಾರ್, ನಾಸಿರುದ್ದೀನ್ ಶಾ, ಮಣಿರತ್ನಂ, ಚಿರಯೌವನೆ ರೇಖಾ, ಜೂಹಿ ಚಾವ್ಲಾ, ಶಿಲ್ಪಾ ಶೆಟ್ಟಿ, ವಿಜಯಶಾಂತಿ, ಅರ್ಜುನ್ ಸರ್ಜಾ, ಪ್ರಕಾಶ್ ರೈ.... ಮುಂತಾದವರು ಪ್ರಮುಖರು.


ರೇಖಾ


ಜೂಹಿ

ಸಿನಿಮಾ ಹಬ್ಬಕ್ಕೆ ಕಲಾಂ



ಅಮೃತ ಮಹೋತ್ಸವ ರಾಷ್ಟ್ರೀಯ ಮಟ್ಟದ ಗಮನ ಸೆಳೆಯಬೇಕೆಂದು ಛೇಂಬರ್‌ನವರು ಯೋಜನೆಯೊಂದನ್ನು ಹಾಕಿಕೊಂಡಿದ್ದಾರೆ. ಈ ಸಮಾರಂಭ ನಡೆಯಲಿರುವ ಮೂರು ದಿನಗಳಲ್ಲಿ ಒಂದು ದಿನ ಹಾಲಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್, ಮತ್ತೊಂದು ದಿನ ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ಅವರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿದ್ದಾರೆ. ಇವರ ಜೊತೆಗೆ ಯಡಿಯೂರಪ್ಪ ಮತ್ತು ಅವರ ಚೆಡ್ಡಿ ಪಟಾಲಂ ಅಂತೂ ಇದ್ದೇ ಇರುತ್ತದೆ.



ಟಾರ್ಗೆಟ್ ಹಂಡ್ರೆಡ್ ಇಯರ್ಸ್

ಅಮೃತ ಮಹೋತ್ಸವದ ಮೂರನೇ ದಿನದ ಸಮಾರಂಭವನ್ನು 'ಮುಕ್ತಾಯ ಸಮಾರಂಭ' ಎಂದು ಕರೆಯುವ ಬದಲಾಗಿ 'ಅಭಿನಂದನಾ ಸಮಾರಂಭ' ಎಂದು ಕರೆಯಲಾಗುತ್ತದೆ. ಯಾಕೆಂದರೆ ಛೇಂಬರ್‌ನವರ ಪ್ರಕಾರ ಈ ಸಮಾರಂಭ ಮುಕ್ತಾಯವಾಗಬಾರದು. ಬದಲಾಗಿ ಇದು ನಿತ್ಯೋತ್ಸವವಾಗಬೇಕು. ಆ ನಿಟ್ಟಿನಲ್ಲಿ ಪ್ರತೀ ತಿಂಗಳೂ ಏನಾದರೊಂದು ಸಮಾರಂಭ ನಡೆಯುತ್ತಲೇ ಇರಬೇಕು. ಎಷ್ಟು ದಿನ ಎಂದರೆ ಚಿತ್ರೋದ್ಯಮಕ್ಕೆ ನೂರು ವರ್ಷ ತುಂಬುವ ತನಕ ನಡೆಯುತ್ತಿರಬೇಕು. ಅಂದರೆ, ಮುಂದಿನ 25 ವರ್ಷ ನಡೆಯಬೇಕು ಈ ಉತ್ಸವ!

ಹೇಗಿದೆ ನೋಡಿ ನಮ್ಮವರ ಈ 'ಪರಾಕ್ರಮ'? ಇದೆಲ್ಲ ನಡೆಯುವ ಮಾತೇ? ■

ನಿರ್ಮಾಪಕರ ಸಂಘ v/s ಪತ್ರಕರ್ತರು

ನಿರ್ಮಾಪಕರ ಸಂಘ ಹಾಗೂ ಪತ್ರಕರ್ತರ ನಡುವೆ ನಡೆಯುತ್ತಿದ್ದ ಶೀತಲ ಸಮರ ಈಗ ದೊಡ್ಡದಾಗಿ ಸ್ಫೋಟಗೊಳ್ಳುತ್ತಿದೆ. ಪತ್ರಕರ್ತರಿಂದಲೇ ನಾವು ಬೀದಿಗೆ ಬೀಳುತ್ತಿದ್ದೇವೆ ಎಂಬ ವಾದವನ್ನು ಮುಂದಿಟ್ಟುಕೊಂಡು ಜನವರಿ 15ರಿಂದ ಪತ್ರಕರ್ತರಿಗಾಗಿ ಸಂಜೆ ಪತ್ರಿಕಾಗೋಷ್ಠಿಗಳನ್ನು ನಡೆಸುವಂತಿಲ್ಲ, ಅದರಲ್ಲೂ ತಮ್ಮ ಪರವಾದ ವರದಿಗಳನ್ನು ಮಾತ್ರ ಪ್ರಕಟಿಸುವ ಆಯ್ದ ಪತ್ರಕರ್ತರನ್ನು ಮಾತ್ರ ಪತ್ರಿಕಾಗೋಷ್ಠಿಗೆ ಆಹ್ವಾನ ಮಾಡಬೇಕು' ಎಂದು ಕೆಲ ನಿರ್ಮಾಪಕರು ಆಜ್ಞೆ ಹೊರಡಿಸಿದ್ದಾರೆ.


ರಾಮು

ನಿರ್ಮಾಪಕರ ಆರೋಪ

ಕಷ್ಟಪಟ್ಟು ಕೋಟ್ಯಂತರ ರೂಪಾಯಿ ಸುರಿದು ಸಿನಿಮಾ ಮಾಡುವ ನಿರ್ಮಾಪಕರ ಬವಣೆಯನ್ನು ಪತ್ರಕರ್ತರು ಅರ್ಥ ಮಾಡಿಕೊಳ್ಳುವುದೇ ಇಲ್ಲ. ನಾವು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಪತ್ರಿಕಾಗೋಷ್ಠಿಗಳನ್ನು ನಡೆಸುತ್ತೇವೆ. ಆದರೆ ಅಲ್ಲಿಗೆ ಬರುವ ಜರ್ನಲಿಸ್ಟುಗಳು ತಮಗಿಷ್ಟ ಬಂದಂತೆ ರಫ್ ಅಂಡ್ ಟಫ್ ಆಗಿ ಪ್ರಶ್ನೆಗಳನ್ನು ಕೇಳಿ ನಿರ್ಮಾಪಕನನ್ನು ನೋಯಿಸುತ್ತಾರೆ. ಅಷ್ಟೇ ಅಲ್ಲದೆ ನಾವು ಕೊಡುವ ಗಿಫ್ಟುಗಳನ್ನು ಪಡೆದ ನಂತರವೂ ಅವರಿಗೆ ಹೇಗೆ ತೋಚುತ್ತದೋ ಹಾಗೇ ಬರೆಯುತ್ತಾರೆ. ಇನ್ನು ಚಿತ್ರ ಬಿಡುಗಡೆಯಾದ ನಂತರವಂತೂ ವಿಮರ್ಶೆಯ ಮೂಲಕ ನಮ್ಮ ಚಿತ್ರಗಳ ಮೇಲೆ ಚಪ್ಪಡಿ ಎಳೆದುಬಿಡುತ್ತಾರೆ. ಇಂಥ ದರ್ದಿಗೆ ನಾವೇಕೆ ಹಣ ಖರ್ಚು ಮಾಡಿ ಪತ್ರಿಕಾಗೋಷ್ಠಿ ಕರೆದು ನಮ್ಮ ವಿರುದ್ಧ ನಾವೇ ಬರೆಸಿಕೊಳ್ಳಬೇಕು. ಪತ್ರಕರ್ತರು ಇಲ್ಲದಿದ್ದರೂ ಪರವಾಗಿಲ್ಲ, ನಮಗೆ ಚಾನೆಲ್‌ನವರು ಇದ್ದರೆ ಸಾಕು. ನಮ್ಮ ಚಿತ್ರಗಳ ಬಗ್ಗೆ ನಾವು ಏನೇ ಮಾತನಾಡಿದರೂ ಅವರು ಹಾಗೇ ಟೆಲಿಕಾಸ್ಟ್ ಮಾಡುತ್ತಾರೆ. ಅದರಲ್ಲೂ ಟಿವಿ9ನವರು ನಾವು ಕೆಮ್ಮಿದರೂ, ಸೀನಿದರೂ ಅದನ್ನು ಹಾಗೇ ಬಿತ್ತರಿಸಿ ನಮಗೆ ಪ್ರಚಾರ ದೊರಕಿಸಿಕೊಡುತ್ತಾರೆ.


ಕೆಸಿಎನ್

ಇದು ನಿರ್ಮಾಪಕರ ಸಂಘದ ಮುಖ್ಯಸ್ಥರೊಬ್ಬರು 'ಲಂಕೇಶ್' ನೊಂದಿಗೆ ಮಾತನಾಡಿದ ಪರಿ.

ಪತ್ರಕರ್ತರ ಪ್ರತ್ಯುತ್ತರ

ನಮ್ಮನ್ನು ಪತ್ರಿಕಾಗೋಷ್ಠಿಗೆ ಕರೆಯದೆ ಇದ್ದರೆ ನಷ್ಟವಾಗುವುದು ನಮಗಲ್ಲ. ಬದಲಾಗಿ ನಿರ್ಮಾಪಕರಿಗೆ. ಕುಣಿಯಲಾರದವರು ನೆಲ ಡೊಂಕು ಎಂದ ಹಾಗೆ ಒಳ್ಳೆಯ ಸಿನಿಮಾ ತೆಗೆಯುವ ಯೋಗ್ಯತೆ ಇಲ್ಲದ ನಿರ್ಮಾಪಕರು ಇಂಥ ಹೊಸ ವರಾತ ತೆಗೆಯುತ್ತಿದ್ದಾರೆ. ಅಸಲಿಗೆ ನಮ್ಮನ್ನು ಪತ್ರಿಕಾಗೋಷ್ಠಿಗೆ ಕರೆಯಲೇ ಬೇಕು ಎಂದು ನಾವೇನು ಇವರ ಬಳಿ ಕೇಳಿದ್ದೇವಾ? ಅಷ್ಟಕ್ಕೂ ಪತ್ರಿಕಾಗೋಷ್ಠಿಗೆ ಬರುವ ನಮಗೆ ಗಿಫ್ಟುಗಳನ್ನು ಕೊಡಲೇಬೇಕು ಎಂಬ ಷರತ್ತು ಕೂಡಾ ನಾವೇನೂ ಹಾಕಿಲ್ಲ. ಇನ್ನು ಈ ಸಿನಿಮಾ ಮಂದಿ ಎಲೆಕ್ಟ್ರಾನಿಕ್ ಮಾಧ್ಯಮದವರ ಸೆರಗು ಹಿಡಿದು


ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರು

ಸುತ್ತುತ್ತಾರೆ. ಈ ಚಾನೆಲ್‌ನವರು ಏನೇ ಸುದ್ದಿ ನೀಡಿದರೂ ಅದು ಪತ್ರಿಕೆಗಳಲ್ಲಿ ಪ್ರಕಟಗೊಂಡ ನಂತರವಷ್ಟೇ ಪ್ರೇಕ್ಷಕರ ಮನಮುಟ್ಟುತ್ತದೆ ಎಂಬುದನ್ನು ಅವರು ಮೊದಲು ಅರಿಯಬೇಕು. ಟೀಕೆ, ವಿಮರ್ಶೆ ಪತ್ರಕರ್ತರ ಹಕ್ಕು. ಅದನ್ನು ತಡೆಯುವುದಕ್ಕಾಗಲಿ, ಮಣಿಸುವುದಕ್ಕಾಗಲಿ ಯಾವ ನಿರ್ಮಾಪಕರಿಂದಲೂ ಸಾಧ್ಯವಿಲ್ಲ.

ಇದು ಪತ್ರಕರ್ತರ ದಿಟ್ಟಾನುದಿಟ್ಟ ಮಾತುಗಳು.

ನಿರ್ಮಾಪಕರ ಸಂಘ ಇಂಥ ತೀರ್ಮಾನಗಳನ್ನು ತೆಗೆದುಕೊಳ್ಳಲೂ ಕಾರಣಗಳಿವೆ. ಅದೇನೆಂದರೆ ನಿರ್ಮಾಪಕ ರಾಮು, ಕೆ.ಸಿ.ಎನ್. ಚಂದ್ರಶೇಖರ್, ಗಣೇಶ್ ಮತ್ತು ಉಮೇಶ್ ಬಣಕಾರ್ ಸೇರಿದಂತೆ ಬಹುತೇಕ ನಿರ್ಮಾಪಕರು ಈ ಹಿಂದೆ ಪತ್ರಕರ್ತರ ಲೇಖನಿಗೆ ಆಹಾರವಾದವರೇ. ಈ ಕಾರಣಕ್ಕೇ ಪತ್ರಕರ್ತರ ವಿರುದ್ಧ ಈ ಪಟಾಲಂ ಕಿಡಿಕಾರುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ.

ಏನೇ ಇರಲಿ, ಈ ನಿರ್ಮಾಪಕರ ಸಂಘದವರು ಮಾಡುತ್ತಿರುವ ಆರೋಪದಂತೆ ಎಲ್ಲೋ ಕೆಲವರು ಭ್ರಷ್ಟರಿರಬಹುದು. ಹಾಗೆಂದು ಇಡೀ ಪತ್ರಕರ್ತ ಸಮೂಹವನ್ನು ಹಾಗೂ ಪತ್ರಿಕೋದ್ಯಮವನ್ನು ಕೆಟ್ಟ ಭಾವನೆಯಿಂದ ನೋಡುತ್ತಿರುವ ನಿರ್ಮಾಪಕರ ಸಂಘದ ನಿಲುವು ಮಾತ್ರ ಅಷ್ಟು ಸರಿಯಲ್ಲ, ಅಲ್ಲವೇ?

■ ಅರುಣ್.ಜಿ

R B P LANKESH, Kannada Weekly Price Rs. 12/- 14-01-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi



ಕೇಜಿ ತೂಕ ಇಳಿಸಿದ ಕ್ರೇಜಿ

ರವಿಚಂದ್ರನ್ ಭಯಂಕರ ಸಾಲಗಾರರಾಗಿದ್ದಾರಂತೆ. ಆತನ ಆರೋಗ್ಯ ಹದಗೆಟ್ಟುಹೋಗಿದೆಯಂತೆ. ರವಿಚಂದ್ರನ್‌ಗೆ ಸಿಕ್ಕಾಪಟ್ಟೆ ಫ್ಯಾಮಿಲಿ ಟ್ರಬಲ್ಲಂತೆ...

ಕಳೆದ ಒಂದು ವರ್ಷದಿಂದ ಕ್ರೇಜಿ ಸ್ಟಾರ್ ರವಿಚಂದ್ರನ್ ಬಗ್ಗೆ ಚಿತ್ರರಂಗದಲ್ಲಿ ಇಂಥ ಮಾತುಗಳು ಕೇಳಿಬರುತ್ತಿದ್ದವು. ಜನರ ಮಾತಿನಂತೆ ರವಿಚಂದ್ರನ್‌ಗೆ ಸಾಲ ಸೂಲಗಳಿರಬಹುದು. ಒಂದು ಮಟ್ಟದಲ್ಲಿ ಅನಾರೋಗ್ಯವೂ ಕಾಡಿರಬಹುದು. ಇನ್ನು ಫ್ಯಾಮಿಲಿ ಟ್ರಬಲ್ ಯಾರಿಗೆ ತಾನೆ ಇಲ್ಲ ಹೇಳಿ! ಆದರೆ ರವಿಚಂದ್ರನ್‌ನಂಥ ಕನಸುಗಾರ ಇಷ್ಟಕ್ಕೆಲ್ಲಾ ಸುಮ್ಮನೆ ಕೊರಗಿ ಕೂತು ಬಿಡೋ ಮನುಷ್ಯನಾ?

ಖಂಡಿತಾ ಇಲ್ಲ.

ಸದ್ಯಕ್ಕೆ ವಿಶೇಷ ಸ್ಥಳವೊಂದರಲ್ಲಿ ವಾಸ್ತವ್ಯ ಹೂಡಿ 'ಕೇಜಿ'ಗಟ್ಟಲೆ ತೂಗುತ್ತಿದ್ದ ತನ್ನ ದೇಹ ತೂಕವನ್ನು ಹತ್ತನ್ನೆರಡು ಕೇಜಿ ಇಳಿಸಿಕೊಂಡಿರುವ 'ಕ್ರೇಜಿ' ಈಗ ಸಖತ್ ಸ್ಲಿಂ ಆಗಿದ್ದಾರೆ. ಹೊಸಬರ ಅಲೆ ಎಂಥಾದ್ದೇ ಇದ್ದರೂ ಅದನ್ನು ಮೀರಿ ಲೈಮ್‌ಲೈಟಿಗೆ ಬಂದೇ ಬರುತ್ತೇನೆ ಎನ್ನುತ್ತಿರುವ ರವಿಚಂದ್ರನ್ ಹೊಸ ಹುರುಪಿನೊಂದಿಗೆ ಮತ್ತೆ ಮೈಕೊಡವಿ ನಿಂತಿದ್ದಾರೆ. ಇದೇ ಹದಿನಾಲ್ಕನೇ ತಾರೀಖು ಅವರ ಹಳೇ ಚಿತ್ರದ ಹೊಸ ಮುಹೂರ್ತವೂ ನಡೆಯುತ್ತಿದೆ!

'ಮಂಜಿನ ಹನಿ'ಗೆ ಮತ್ತೆ ಚಾಲನೆ

ಕಳೆದ ಎರಡೂಕಾಲು ವರ್ಷಗಳಿಂದ ಚಿತ್ರೀಕರಣಗೊಂಡಿರುವ 'ಮಂಜಿನ ಹನಿ' ಮತ್ತೆ ಆರಂಭವಾಗುತ್ತಿದೆ. ಸುಮಾರು ಎಂಭತ್ತೈದು ಭಾಗದಷ್ಟು ಚಿತ್ರೀಕರಣ ಮುಗಿದಿದ್ದರೂ ಅಷ್ಟೂ ಭಾಗವನ್ನೂ ಸಾರಾಸಗಟಾಗಿ ತಿಪ್ಪೆಗೆಸೆದು ಮತ್ತೆ ಹೊಸದಾಗಿ ಚಿತ್ರೀಕರಿಸಲು ರವಿ ನಿರ್ಧರಿಸಿದ್ದಾರೆ.

ಸಂದೇಶ್ ನಾಗರಾಜ್ ಆರಂಭಿಸಿದ್ದ ಈ ಚಿತ್ರ ಯಾವಾಗ ಕೈ ಮೀರುತ್ತಾ ಹೋಯಿತೋ ಆಗ ರವಿಚಂದ್ರನ್ ಅದನ್ನು ಮೂರು ಕೋಟಿಗೆ ಖರೀದಿಸಿದ್ದರು. ಆನಂತರ ಚಿತ್ರ ಮುಂದುವರೆಯಿತಾದರೂ ಸಿನಿಮಾ ವಿಚಾರದಲ್ಲಿ ರಾಜಿಯಾಗದ ಕ್ರೇಜಿಗೆ ತನ್ನ ದೊಡ್ಡ ಹೊಟ್ಟೆ, ಕೆಟ್ಟ ದೇಹವನ್ನು ತಾನೇ ನೋಡಲಾರದೆ ಈಗ ಮತ್ತೊಮ್ಮೆ ಹೊಸದಾಗಿ ಚಿತ್ರೀಕರಿಸಲು ಮುಂದಾಗಿದ್ದಾರೆ.

ಇಂಥ ಹುಚ್ಚು ಸಾಹಸಗಳನ್ನು, ಹುಂಬ ಕೆಲಸಗಳನ್ನು ಕನ್ನಡ ಚಿತ್ರರಂಗದಲ್ಲಿ ರವಿಚಂದ್ರನ್ ಅಲ್ಲದೇ ಮತ್ತಾರು ಮಾಡಲು ಸಾಧ್ಯ? ಒಟ್ಟಿನಲ್ಲಿ 2009ರ ದ್ವಿತೀಯಾರ್ಧದ ಒಳಗೆ ಕ್ರೇಜಿ ತನ್ನ ಹೊಸ ಗೆಟಪ್ಪಿನೊಂದಿಗೆ ಮತ್ತೆ ಲಕಲಕನೆ ಕಂಗೊಳಿಸಿದರೂ ಆಶ್ಚರ್ಯವಿಲ್ಲ.

ಹಳಬರೊಂದಿಗೆ ರಾಜಿಯಾಗದ, ಹೊಸಬರೊಂದಿಗೆ ಹೊಂದಿಕೊಳ್ಳದ ರವಿಯನ್ನು ಮತ್ತೆ ಮೇಲೆತ್ತಲು ಯಾರಿಂದಲೂ ಸಾಧ್ಯವಿಲ್ಲ, ಅದು ಅವರಿಂದಲೇ ಆಗಬೇಕು. ರವಿಚಂದ್ರನ್ ಅವರ ಈ ಸಾಹಸ ಫಲಿಸುವಂತಾಗಲಿ.

■ಅರುಣ್



'ಕೆಂಪ'ನ ಕಥೆ ಏನ್ ಗೊತ್ತಾ...?

ಒಂದೂವರೆ ವರ್ಷದ ಹಿಂದೆ ಆರಂಭವಾದ 'ಕೆಂಪ' ಈ ವಾರ ತೆರೆಕಾಣುತ್ತಿದೆ. ಆನೇಕಲ್ ಬಾಲರಾಜ್ ಮಗ ಸಂತೋಷ್ ಮೊದಲ ಬಾರಿಗೆ ನಾಯಕನಟನಾಗಿ ಕಾಣಿಸಿಕೊಂಡಿರುವ ಈ ಚಿತ್ರವನ್ನು ಬಹಳಷ್ಟು ಜನ 'ಇದು ಕೂಡಾ ಯಾವುದೋ ಚಿಲ್ಲರೆ ರೌಡಿಯ ಕಥೆ ಇರಬಹುದು' ಎಂದುಕೊಂಡಿದ್ದಾರೆ. ಆದರೆ ನರಹಂತಕ ವೀರಪ್ಪನ್‌ನನ್ನು ಮುಗಿಸಲು ನಡೆದ ಎಸ್.ಟಿ.ಎಫ್. ಕಾರ್ಯಾಚರಣೆಯ ಅಸಲಿ ಘಟನೆಗಳ ಸುತ್ತ ಈ ಚಿತ್ರದ ಕಥೆ ಹೆಣೆಯಲ್ಪಟ್ಟಿದೆ. ಅಮಾಸೆ ಎಂಬ ಅಮಾಯಕ ಗೊಲ್ಲ ಹುಡುಗನನ್ನು ಎಸ್.ಟಿ.ಎಫ್‌ನವರು ಬಂಧಿಸಿ, ಜೈಲಿಗಟ್ಟಿ ಆತನ ಜೀವನವನ್ನು ಹೇಗೆ ಹಾಳುಗೆಡಹುತ್ತಾರೆ, ಇದರಿಂದ ಆಗುವ ಅನಾಹುತಗಳು.... ಇವುಗಳಿಗೆಲ್ಲಾ ಸ್ವಲ್ಪ ಸಿನಿಮಾಗೆ ಬೇಕಾದ ಮಸಾಲೆ ಸೇರಿಸಿ 'ಕೆಂಪ'ನನ್ನು ತಯಾರುಮಾಡಿದ್ದಾರೆ.

ಸೆನ್ಸಾರೇ ಆಗುತ್ತಿರಲಿಲ್ಲ

ಈ ಚಿತ್ರದ ಹೆಚ್ಚು ಭಾಗ ವೀರಪ್ಪನ್ ಹುಟ್ಟೂರು ಗೋಪಿನಾಥಂನಲ್ಲೇ ಚಿತ್ರೀಕರಣಗೊಂಡಿದೆ. ಅಲ್ಲದೆ ವೀರಪ್ಪನ್ ಕಾರ್ಯಾಚರಣೆ ವೇಳೆಯಲ್ಲಿ ನಡೆದ ನೈಜ ಘಟನೆಗಳನ್ನೇ ಇಲ್ಲಿ ಮರು ಸೃಷ್ಟಿಸಿರುವುದರಿಂದ ಸೆನ್ಸಾರ್ ಹುಲಿ ಚಂದ್ರಶೇಖರ್ 'ಚಿತ್ರವನ್ನು ಸೆನ್ಸಾರ್ ಮಾಡಲು ಸಾಧ್ಯವೇ ಇಲ್ಲ' ಎಂದು ಫತ್ವಾ ಹೊರಡಿಸಿಬಿಟ್ಟಿದ್ದರಂತೆ. ಆದರೆ ನಿರ್ದೇಶಕ ಜಗದೀಶ್ ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯ ಬಗ್ಗೆ ಮತ್ತು ಈ ಚಿತ್ರದಲ್ಲಿ ನಡೆಯುವ ಘಟನೆಗಳು ನೈಜವಾಗಿ ನಡೆದವು ಎಂಬುದನ್ನು ದಾಖಲಿಸಿರುವ ಪತ್ರಿಕಾ ವರದಿಗಳು ಹಾಗೂ ಇಂಟರ್‌ನೆಟ್‌ನಲ್ಲಿ ಸಿಕ್ಕ ಐವತ್ತು ಪುಟಗಳ ಮಾಹಿತಿಯನ್ನು ಚಂದ್ರಶೇಖರ್ ಮುಂದಿಟ್ಟರಂತೆ. ಅವುಗಳನ್ನೆಲ್ಲಾ ಪರಿಶೀಲಿಸಿದ ನಂತರವಷ್ಟೇ ಚಂದ್ರಶೇಖರ್ ಸಾಹೇಬರು ಅಸ್ತು ಎಂದು ಸರ್ಟಿಫಿಕೇಟು ನೀಡಿದರಂತೆ.

ಇನ್ನುಳಿದ ಡಿಟೇಲುಗಳು ಮುಂದಿನ ವಾರ ಚಿತ್ರ ಬಿಡುಗಡೆಯಾದ ಮೇಲಷ್ಟೇ ಗೊತ್ತಾಗುತ್ತದೆ. ■

ಪೈ ಈಗ 'ಪುನೀತ್'

'ಪುನೀತ್' ಚಿತ್ರ ಸೆಟ್ಟೇರಿದೆ.

ಆದರೆ ಇದರ ನಾಯಕ ಪವರ್ ಸ್ಟಾರ್ ಪುನೀತ್ ಅಲ್ಲ, 'ರೋಡ್ ರೋಮಿಯೋ' ದಿಲೀಪ್ ಪೈ!



ನಿರ್ದೇಶಕ ಸಾಯಿಪ್ರಕಾಶ್‌ರನ್ನು ನಂಬಿ 'ರೋಡ್ ರೋಮಿಯೋ' ಚಿತ್ರಕ್ಕೆ ಹಣ ಸುರಿದು ಸ್ವತಃ ನಾಯಕನೂ ಆಗಿ ಕೈಸುಟ್ಟುಕೊಂಡಿದ್ದ ದಿಲೀಪ್ ಪೈ ಈ ಚಿತ್ರದ ಮೂಲಕ ಮತ್ತೊಮ್ಮೆ ಹೀರೋ ಆಗಲು ಯತ್ನಿಸುತ್ತಿದ್ದಾರೆ.

ನೀಲ್‌ಕಮಲ್ ಎಂಬ ಹೊಸಬ ನಿರ್ದೇಶಿಸುತ್ತಿರುವ 'ಪುನೀತ್' ಚಿತ್ರ ಪವರ್ ಸ್ಟಾರ್ ಕಾರಣಕ್ಕಾಗಿ ಅಟ್ರಾಕ್ಟ್ ಆಗುವಂತಿದೆ. ಸಿನಿಮಾ ಕೂಡಾ ಅಷ್ಟೇ ಆಕರ್ಷಕವಾಗಿ ಮೂಡಿಬಂದು ಸಾಯಿಯಿಂದ ಕಳೆದುಕೊಂಡದ್ದು 'ಪುನೀತ್' ಮೂಲಕವಾದರೂ ದಿಲೀಪ್ ಪೈನ ಕೈಗೆ ಸಿಗುವಂತಾಗಲಿ.



ಅಂದ್ರಿತಾ ರೇ, ವಿಜಯ್ 'ಜಂಗ್ಲಿ'

'ಕಬಡ್ಡಿ' ಆಟಕ್ಕೆ ಹಂಸ್ ಕಾಟ!





'ಕಬಡ್ಡಿ' ಎಂಬ ಚಿತ್ರ ಕಳೆದ ಒಂದೂವರೆ ವರ್ಷಗಳಿಂದ ಚಿತ್ರೀಕರಣಗೊಳ್ಳುತ್ತಲೇ ಇತ್ತು. ಆರಂಭದಲ್ಲಿ ಕೆಲ ಗೆಳೆಯರು ಜೊತೆಗೂಡಿ ತುಂಬಾ ಉತ್ಸಾಹದಿಂದ ಇದನ್ನು ಆರಂಭಿಸಿದ್ದರಾದರೂ ಮಧ್ಯದಲ್ಲಿ ಅವರ ನಡುವೆ ಮನಸ್ತಾಪ ಉಂಟಾಗಿ ಚಿತ್ರ ಅರ್ಧಕ್ಕೆ ನಿಂತಿತ್ತು. ಈಗ ಎಲ್ಲ ಅಡೆತಡೆಗಳನ್ನು ನಿವಾರಿಸಿ 'ಕಬಡ್ಡಿ' ಆಟವನ್ನು ನಿರ್ದೇಶಕ ನರೇಂದ್ರ ಬಾಬು ಮುಗಿಸಿದ್ದಾರೆ. ಹೊಸ ಕಥಾವಸ್ತುವನ್ನು ಕೈಗೆತ್ತಿಕೊಂಡು ಅತ್ಯಂತ ಉತ್ಸಾಹದಿಂದ ಚಿತ್ರ ಮಾಡಿದ ನರೇಂದ್ರ ಬಾಬು ಈ 'ಕಬಡ್ಡಿ' ತಮಗೆ ಪ್ರಾಣ ಸಂಕಟವಾಗಿದ್ದರೂ ಅದನ್ನು ಜನ ಇಷ್ಟಪಡುತ್ತಾರೆ ಎಂಬ ಆತ್ಮವಿಶ್ವಾಸದಲ್ಲಿದ್ದಾರೆ.

ಅಂದಹಾಗೆ ಚಿತ್ರರಂಗದಲ್ಲಿ ಕಾಲೆಳೆಯುವವರು, ಎಳೆಸಿಕೊಳ್ಳುವವರು ಹೆಜ್ಜೆಹೆಜ್ಜೆಗೂ ಸಿಗುತ್ತಾರೆ. 'ಕಬಡ್ಡಿ' ಚಿತ್ರ ತಂಡದಲ್ಲಿ ಮೊದಲಿಗೆ ಈ ತರಹ ಕಾಲೆಳೆಯುವ ಆಟ ನಿರ್ದೇಶಕ ನರೇಂದ್ರ ಬಾಬು ಮತ್ತು ನಟ ಕಂ ನಿರ್ಮಾಪಕ ಕಿಶೋರ್ ನಡುವೆ ಒಂದು ಸುತ್ತು ನಡೆದಿತ್ತು, ಈಗ ಇಬ್ಬರು ರಾಜಿಯಾಗಿದ್ದಾರೆ.

ಆದರೆ ಮೊನ್ನೆ ನಡೆದ 'ಕಬಡ್ಡಿ' ಚಿತ್ರದ ಕ್ಯಾಸೆಟ್ ರಿಲೀಸ್ ಸಮಾರಂಭಕ್ಕೆ ಸಂಗೀತ ನಿರ್ದೇಶಕ ಹಂಸಲೇಖ ಗೈರುಹಾಜರಾಗಿದ್ದರು. ಕಾರಣ ಮತ್ತೆ ಕಾಲೆಳೆಯುವ ಆಟ.

ಚಿತ್ರದ ರಿ-ರೆಕಾರ್ಡಿಂಗ್‌ಗೆ ಹಂಸಲೇಖ 8 ಲಕ್ಷ ರೂ. ಕೇಳಿದ್ದರಂತೆ. "ಅಷ್ಟು ಹಣ ನನ್ನ ಬಳಿ ಇಲ್ಲ; ನಾನು ಬೇರೆಯವರ ಕೈಯಲ್ಲಿ ಮಾಡಿಸುತ್ತೇನೆ" ಎಂದು ಬಾಬು ಉತ್ತರಿಸಿದ್ದರಂತೆ. ಆದರೆ **No Objection Certificate** ಹಂಸ್ ನೀಡಲು ತಯಾರಿರಲಿಲ್ಲ. ಕೊನೆಗೆ ಬೇರೆ ದಾರಿ ಕಾಣದ ನರೇಂದ್ರ ಬಾಬು ಅದು ಹೇಗೋ ಹಣ ಸೇರಿಸಿ ಹಂಸಲೇಖರ ಕೈಯಲ್ಲೇ ರಿ-ರೆಕಾರ್ಡಿಂಗ್ ಮಾಡಿಸಿದ್ದಾರೆ. ಆದರೆ ಹಂಸ್ ಸಮಾರಂಭಕ್ಕೆ ಮಾತ್ರ ಕೈಕೊಟ್ಟರು. ■

ಹಳೇ ಕತೆಯ ಹೊಸ ರೌಡಿ ಗುಲಾಮ

2009ರ ಮೊದಲ ಚಿತ್ರ 'ಗುಲಾಮ' ಡಬ್ಬಾ ಚಿತ್ರಗಳ ಸಾಲಿಗೆ ಸೇರುವಂತಿದೆ.



ಈ ಚಿತ್ರದ ಬಗ್ಗೆ ಒಂದು ರೀತಿಯ ನಿರೀಕ್ಷೆ ಇರಲು ಕಾರಣ ಈಗಾಗಲೇ ಹಲವಾರು ಸೋಲುಗಳನ್ನು ಕಂಡಿರುವ ರಾಮು ಬಹಳ ಜಾಗರೂಕತೆಯಿಂದ ಇದನ್ನು ನಿರ್ಮಿಸಿದ್ದು. ಇದರ ಜೊತೆಗೆ 'ದುನಿಯಾ' ಖ್ಯಾತಿಯ ಸೂರಿಯ ಗರಡಿಯಲ್ಲಿ ಬೆಳೆದ ತುಷಾರ್ ರಂಗನಾಥ್ ಮೊದಲ ಬಾರಿಗೆ ನಿರ್ದೇಶಕನಾಗಿ ಈ ಚಿತ್ರದ ಮೂಲಕ ಪಾದಾರ್ಪಣೆ ಮಾಡಿದ್ದು.

ಆದರೆ 'ಗುಲಾಮ' ಅದೇ ಹಳೆಯ ರೌಡಿಸಂ ಕಥೆ. ಆ ರೌಡಿ ಒಬ್ಬಳ ಹಿಂದೆ ಬೀಳುತ್ತಾನೆ. ಆತನ ಹಿಂದೆ ಮತ್ತೊಬ್ಬಳು ಬೀಳುತ್ತಾಳೆ. ಎಲ್ಲರದ್ದೂ ಒನ್ ಸೈಡ್ ಲವ್. ಪ್ರೀತಿಸಿದವಳಿಗೆ ಎಲ್ಲ ತ್ಯಾಗ ಮಾಡಿ ಹುಡುಗ ಜೈಲಿಗೂ ಹೋಗುತ್ತಾನೆ. ಆದರೆ ಕೊನೆಯಲ್ಲಿ ಈತ ಪ್ರೀತಿಸಿದವಳು ಸಿಗುವುದಿಲ್ಲ; ಇನ್ನೊಬ್ಬಳನ್ನು ಮದುವೆಯಾಗುತ್ತಾನೆ. ಇಂತಹ ತ್ರಿಕೋನ ಪ್ರೇಮಕಥೆ ಕನ್ನಡದಲ್ಲಿ ಅದೆಷ್ಟು ಬಂದಿಲ್ಲ? ರೌಡಿಸಂ ಒಳ್ಳೆಯದಲ್ಲ ಎಂದು ಕೊನೆಯಲ್ಲಿ ಹೀರೋಗೆ ಜ್ಞಾನೋದಯವಾಗುತ್ತದೆ. ಆದರೆ ಅಲ್ಲಿಯತನಕ ಇಡೀ ಚಿತ್ರದಲ್ಲಿ ರೌಡಿಸಂನ್ನು ವೈಭವೀಕರಿಸಿರುವುದನ್ನು ಸಹಿಸಿಕೊಂಡು ಕುಳಿತುಕೊಳ್ಳುವುದೇ ಅಸಾಧ್ಯ.

ರಂಗನಾಥ್ ನಿರ್ದೇಶಕರಾಗಿ 'ತನ್ನತನ'ವನ್ನು ಪ್ರದರ್ಶಿಸಲು ಪ್ರಯತ್ನಪಡದಿರುವುದು ಬೇಸರದ ವಿಷಯ. ನಾಯಕಿಯರಲ್ಲಿ ಸೋನು ಸಾಂಪ್ರದಾಯಿಕ ಹುಡುಗಿಯಾಗಿ, ಬಿಯಾಂಕ ದೇಸಾಯಿ ಮಾಡ್ ಆಗಿ ಕಾಣಿಸಿದ್ದಾರೆ. ಗುರುಕಿರಣ್ ಸಂಗೀತದ ಬಗ್ಗೆ ಹೇಳಿಕೊಳ್ಳುವಂತಾದ್ದೇನೂ ಇಲ್ಲ.

ಇಂತಹ ರೌಡಿಸಂ ಕಥಾವಸ್ತು ಈ ಎಳೆಯ ಹುಡುಗ ಪ್ರಜ್ವಲ್‌ಗೆ ಸರಿಹೊಂದುವುದಿಲ್ಲ. ಹಿಂದೊಮ್ಮೆ ದೇವರಾಜ್‌ಗೆ ಲೈಫ್ ನೀಡಿದ್ದ ರಾಮು, ಈ ಚಿತ್ರದಲ್ಲಿ ಪ್ರಜ್ವಲ್‌ನ 'ಲೈಫ್'ಅನ್ನು ಕಿತ್ತುಕೊಂಡಂತೆ ಕಾಣಿಸುತ್ತದೆ.

■ ಶ್ರೇಣಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar...